ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ದತ್ತಾತ್ರೇಯ ಮುನಿಯವರ 24 ಗುರುಗಳು

## ತಟವರ್ತಿ ರಾಜ್ಯಲಕ್ಷ್ಮಿ

ಅನುವಾದ : ಕೆ. ಶೋಭಾಲತ ● ಹೆಚ್.ಎನ್. ಶ್ರೀನಿವಾಸ



# ದತ್ತಾತ್ರೇಯ ಮುನಿಯವರ 24 ಗುರುಗಳು


## ತಟವರ್ತಿ ರಾಜ್ಯಲಕ್ಷ್ಮಿ

ಕನ್ನಡ ಅನುವಾದ : **ಕೆ. ಶೋಭಾಲತ**



**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**DATTATREYA MUNIYAVARA 24 GURUGALU**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2024 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 70/– |
| ಪುಟಗಳು | : | v+67=72 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ

ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,<br>
**ಎಚ್.ಎನ್.ಶ್ರೀನಿವಾಸ**<br>
ಮತ್ತು<br>
**ಎಸ್.ಎನ್.ವಿಜಯಲಕ್ಷ್ಮಿ**<br>
**ಸಂಸ್ಥಾಪಕರು,**<br>
ಶ್ರೀರಾಮಧಾಮ ಧ್ಯಾನಕೇಂದ್ರ

# ಪರಿವಿಡಿ

1. ದತ್ತಾತ್ರೇಯ ಮುನಿಯವರ 24 ಗುರುಗಳು.

2. ಗುರುವಿನ ಬಳಿ ಶಿಷ್ಯನ ವರ್ತನೆ ಹೇಗೆ ಇರಬೇಕು?

3. ಜೀವಾತ್ಮನಾದ ಮಾನವನು ಪರಮಾತ್ಮನಾಗಿ ಬೆಳೆಯ ಬೇಕೆಂದರೆ?

4. ವಿಶೇಷವಾದ ಜ್ಞಾನವನ್ನು ಹೊಂದಬೇಕೆಂದರೆ?

5. ಮಾನವನು ಆಚರಿಸ ಬೇಕಾದ ಕೆಲವು ಧರ್ಮಗಳು.

6. ಅಜ್ಞಾನಿಗಳ ವಿಧಗಳು.

# ದತ್ತಾತ್ರೇಯ ಮುನಿಯವರ 24 ಗುರುಗಳು

ದತ್ತಾತ್ರೇಯರವರು ಅತ್ರಿ ಮಹಾಮುನಿ, ಅನಸೂಯ ದಂಪತಿಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರರ ಅಂಶದಿಂದ ಜನಿಸಿದವರಾಗಿದ್ದಾರೆ. ದತ್ತಾತ್ರೇಯರನ್ನು ಎಲ್ಲರೂ ಅವಧೂತರಂತೆ ಆರಾಧಿಸುತ್ತಾರೆ.

ದತ್ತಾತ್ರೇಯರು ಪ್ರಕೃತಿಯಿಂದ 24 ಮಂದಿ ಗುರುಗಳನ್ನು ಆಯ್ದುಕೊಂಡರು. ಅವರು ಆ ಗುರುಗಳಿಂದ ಕಲಿತುಕೊಂಡು ಒಂದು ಜ್ಞಾನ ಭಂಡಾರವಾಗಿ ಉಳಿದು ಬಿಟ್ಟರು.

ಒಂದು ಬಾರಿ ಅವರು ಹಾಗೆ ಹೋಗುತ್ತಿದ್ದಾಗ ಯದು ಮಹಾರಾಜರು ಅತನನ್ನು ನೋಡಿ, ಈತ ಇಷ್ಟು ಜ್ಞಾನ ಗಣಿಯಾಗಿ ಕಾಣಿಸುತ್ತಿದ್ದಾನೆ. ಆನಂದ ಸ್ವರೂಪನಾಗಿ ಕಾಣಿಸುತ್ತಿದ್ದಾನೆ. ಈತನು ಯಾರು? ಎಂದು ಅಂದುಕೊಳ್ಳುತ್ತಾ ಆತನ ಬಳಿಗೆ ಹೋಗಿ 'ಸ್ವಾಮಿ ನೀವು ಎಷ್ಟೋ ಆನಂದ ಸ್ವರೂಪರಾಗಿ ಕಾಣಿಸುತ್ತಿರುವಿರಿ, ಒಂದು ಜ್ಞಾನ ಭಂಡಾರವಾಗಿ ಕಾಣಿಸುತ್ತಿದ್ದೀರಿ, ಇಷ್ಟು ಆನಂದವನ್ನು. ಜ್ಞಾನವನ್ನು ನೀವು ಹೇಗೆ ಪಡೆದಿರಿ? ನಾವು ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ, ಕಾಮ ಮತ್ತು ಅರ್ಥಗಳ ಹಿಂದೆಯೇ ಬಿದ್ದಿದ್ದೇವೆ. ಸಂಪತ್ತಿನಲ್ಲಿ ಸುಖವಿದೆ ಅಂದುಕೊಂಡೆವು. ಹೆಂಡತಿ ಮಕ್ಕಳಲ್ಲಿ ಆನಂದವಿದೆ ಎಂದು ಅಂದುಕೊಳ್ಳುತ್ತಾ ಅವರಿಗಾಗಿಯೇ ತಾಪತ್ರಯಪಡುತ್ತಾ ತಿರುಗುತ್ತಿದ್ದೇವೆ. ನಿಮಗೆ ಸಂಸಾರವಾಗಲಿ, ಹೆಂಡತಿ ಮಕ್ಕಳಾಗಲಿ ಯಾರು ಇರುವಂತೆ ಕಾಣಿಸುತ್ತಿಲ್ಲ. ಆದರೂ ಕೂಡ ಇಷ್ಟು ಆನಂದ ಸ್ವರೂಪರಾಗಿ ಹೇಗೆ ಕಾಣಿಸುತ್ತಿರುವಿರಿ? ಎಂದು ದತ್ತಾತ್ರೇಯ ಸ್ವಾಮಿಯವರನ್ನು ಕೇಳಿದರು.

ಯದು ಮಹಾರಾಜರು ಕೇಳಿದಾಗ ದತ್ತಾತ್ರೇಯರು ಪ್ರಕೃತಿಯಲ್ಲಿ ತನ್ನ 24 ಮಂದಿ ಗುರುಗಳನ್ನು ಕುರಿತು ವಿವರವಾಗಿ ಹೇಳಿದರು. ಇವರಿಬ್ಬರ ಸಂವಾದ ಉತ್ತರ ಗೀತೆಯಲ್ಲಿ ಶ್ರೀ ಕೃಷ್ಣನು ಉದ್ಧವನಿಗೆ ಬೋಧಿಸಿದರೊಳಗಿಂದ ತಿಳಿದುಕೊಳ್ಳಬಹುದು.

ಅದರಲ್ಲಿ ದತ್ತಾತ್ರೇಯರು ಹೇಗೆ ಹುಟ್ಟಿದರು? ಹಾಗಾದರೆ ಆ ಗುರುಗಳನ್ನು ಹೇಗೆ ಆಯ್ಕೆ ಮಾಡಿಕೊಂಡು ತಾನು ಒಂದು ಜ್ಞಾನ ಭಂಡಾರವಾಗಿ ಬೆಳೆದರು ಎನ್ನುವುದನ್ನು ತಿಳಿಸಿದ್ದಾರೆ.

ದತ್ತಾತ್ರೇಯರು ಏನು ಹೇಳಿದ್ದಾರೆಂದರೆ? ನಾನು ಯಾರ ಹತ್ತಿರ ಏನು ಕಲಿಯಲಿಲ್ಲ. ಪ್ರಕೃತಿಯನ್ನು ನೋಡಿ ನಾನು ಎಷ್ಟೋ ವಿಷಯಗಳನ್ನು ಕಲಿತುಕೊಂಡೆನು. ನಾನು 24 ಮಂದಿ ಗುರುಗಳನ್ನು ಪ್ರಕೃತಿಯಿಂದ ಆಯ್ಕೆ ಮಾಡಿಕೊಂಡೆನು ಎಂದರು.

ನಾನು ಹೇಗಿರಬೇಕು? ಏನನ್ನು ಬಿಡಬೇಕು? ಏನು ಪಡೆಯಬೇಕು? ಎನ್ನುವುದನ್ನು ಕೂಡಾ ನಾನು ಪ್ರಕೃತಿಯಿಂದ ಕಲಿತೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಆದ್ದರಿಂದ ಈಗ ನಾವು ಆ ಗುರುಗಳು ಯಾರೋ? ನಾವು ತಿಳಿದುಕೊಳ್ಳೋಣ. ದತ್ತಾತ್ರೇಯರು ಪಂಚ ಭೂತಗಳು ಅಂದರೆ ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಈ ಐದನ್ನು ಮೊಟ್ಟಮೊದಲು ಅವರು ಗುರುಗಳನ್ನಾಗಿ ಆಯ್ದುಕೊಂಡರು. ಅವರಿಂದ ಎಷ್ಟೋ ಕಲಿತರು. ಅವರು ಪಂಚಭೂತಗಳಲ್ಲಿಯ ಭೂಮಿಯಿಂದ ಏನು ಕಲಿತರು ತಿಳಿದು ಕೊಳ್ಳೋಣ.

## 1. ಭೂಮಿ

ದತ್ತಾತ್ರೇಯರು ಭೂಮಿಯಿಂದ ಸಹಿಸಿಕೊಳ್ಳುವುದನ್ನು ಕಲಿತೆನು ಎಂದರು. ನೋಡಿರಿ, ಭೂಮಿ ಏನು ಮಾಡಿದರೂ ಸಹಿಸಿಕೊಳ್ಳುತ್ತದೆ. ಆ ಭೂಮಿಗೆ ಇರುವ ಸಹನೆ ಯಾರಿಗೂ ಇಲ್ಲ. ಅದಕ್ಕೆ ಯಾರಾದರೂ ಏನನ್ನಾದರೂ ಸಹಿಸಿಕೊಂಡರೆ ಭೂದೇವಿಯಂತಹ ಸಹನೆ ಇದೆಯಮ್ಮ ನಿನಗೆ ಎಂದು ಅನ್ನುತ್ತಾರೆ. ಅಂದರೆ ಭೂಮಿಯನ್ನು ತಾಳ್ಮೆಗೆ, ಸಹನೆಗೆ ಪ್ರತೀಕವೆಂದು ಭೂದೇವಿಯನ್ನು ಹೋಲಿಸುತ್ತಾರೆ ಎಲ್ಲರು.

ಅವರು ಭೂದೇವಿಯಿಂದ ಕಲಿತ ತಾಳ್ಮೆಯಿಂದ ಗತ ಜನ್ಮದ ಕರ್ಮಗಳು ಅಂದರೆ ಪ್ರಾರಬ್ಧ ಕರ್ಮಗಳು ಏನಾದರೂ ಇದ್ದರೆ, ಅವು ಎಂತಹವುಗಳಾಗಿರಲಿ, ಸರಿ ಎಷ್ಟು ಕಷ್ಟವಾದರೂ ಸರಿ, ನಾನು ಅವುಗಳನ್ನು ಸಹಿಸಿಕೊಳ್ಳುತ್ತೇನೆ ಎಂದು ಹೇಳಿದರು ನೋಡಿ, ಒಬ್ಬ ರಮಣ ಮಹರ್ಷಿಯಾಗಲಿ, ರಾಮಕೃಷ್ಣ ಪರಮಹಂಸರಾಗಲಿ ಎಂತಹ ಭಯಂಕರವಾದ ಕ್ಯಾನ್ಸರ್ ರೋಗ ಬಂದರೂ, ಅವರು ಯಾವಾಗಲೂ ಅದರ ಬಗ್ಗೆ ಆಲೋಚಿಸದೆ ಸಹಿಸಿಕೊಂಡರು.

ಏಕೆಂದರೆ ಪ್ರಾರಬ್ಧ ಅನ್ನುವುದು ಬಂದಾಗ ಅದನ್ನು ತಪ್ಪದಲೆ ಅನುಭವಿಸಬೇಕು ಎಂದು ಅವರಿಗೆ ತಿಳಿದಿದೆ. ಆದ್ದರಿಂದ ಅವರು ಸಹಿಸಿಕೊಂಡರು. ಅದಕ್ಕೆ ದತ್ತಾತ್ರೇಯರು ಪ್ರಾರಬ್ಧ ಕರ್ಮಗಳಿಂದ ಯಾವ ಕಷ್ಟ ಬಂದರೂ ಸಹಿಸಿಕೊಳ್ಳಬೇಕು ಎಂದು ಭೂಮಿಯನ್ನು ನೋಡಿ ತಾನು ಕಲಿತೆನು ಎಂದರು.

ಅಷ್ಟೇ ಅಲ್ಲ ಭೂಮಿಯಿಂದ ಪರ್ವತಗಳು ಹುಟ್ಟಿದವು, ವೃಕ್ಷಗಳು ಹುಟ್ಟಿದವು, ಪರ್ವತಗಳನ್ನು ನೋಡಿ ಅವರು ಸ್ಥಿರತೆಯನ್ನು ಕಲಿತರು. ಗಾಳಿ, ಮಳೆ ಬರಲಿ, ಸುನಾಮಿ ಬರಲಿ, ತೂಫಾನುಗಳು ಬರಲಿ, ಎಷ್ಟು ಬಂದರೂ ಪರ್ವತಗಳು ಅವುಗಳಿಂದ ಚಲಿಸದೆ ಹಾಗೆ ಇರುತ್ತದೆ.

ಇದಕ್ಕೆ ಯಾವ ಗಾಳಿ, ಮಳೆ, ಸುನಾಮಿ, ತೂಫಾನು, ಭೂಕಂಪಗಳಂತಹವು ಬಂದರೂ ಪರ್ವತಗಳು ಯಾವ ರೀತಿಯಲ್ಲಿ ಚಲಿಸಿದಂತೆ, ಅಲುಗಾಡದಂತೆ ಇರುತ್ತವೆಯೋ ದತ್ತಾತ್ರೇಯರು ಕೂಡಾ ಏನು ಬಂದರೂ ಅಲುಗಾಡದಂತೆ ಇರಬೇಕೆಂದು ಪರ್ವತಗಳನ್ನು ನೋಡಿ ಕಲಿತೆನು ಎಂದರು. ಸಾಮಾನ್ಯವಾಗಿ ಮಾನವರು ಸಣ್ಣ ಕಷ್ಟ ಬಂದರೂ ಕುಗ್ಗಿ ಹೋಗುವುದು, ಸಣ್ಣ ಭೋಗಕ್ಕೆ ಉಬ್ಬಿ ಹೋಗುವುದು ಮಾಡುತ್ತಾರೆ. ಆದರೆ ಪರ್ವತಗಳು ಹಾಗೆ ಇರುವುದಿಲ್ಲ.

## 2. ಜಲ

ದತ್ತಾತ್ರೇಯರು ಜಲದಿಂದ ಶುದ್ಧತ್ವವನ್ನು ಕಲಿತರು, ಅಂದರೆ ನೋಡಿ, ಪ್ರಪಂಚದಲ್ಲಿ ಎಷ್ಟೋ ರೀತಿಯ ಹೊಲಸು, ಮಾಲಿನ್ಯಗಳು ಇವೆ. ಆದರೆ ಆ ಹೊಲಸು / ಕೊಳೆಯನ್ನು ನೀರಿನಿಂದ ತೊಳೆದರೆ ಶುದ್ಧವಾಗುತ್ತವೆ. ಶುಭ್ರವಾಗಿ ಇರುತ್ತವೆ, ಪವಿತ್ರವಾಗುತ್ತವೆ..

ನೋಡಿರಿ, ನೀರಿನಿಂದ ವಿಗ್ರಹಗಳಿಗೆ ಅಭಿಷೇಕ ಮಾಡುತ್ತಾರೆ, ಶುಚಿಗೊಳಿಸುತ್ತಾರೆ, ಗುಡಿಯನ್ನು, ಗುಡಿ ಪ್ರಾಂಗಣವನ್ನು ನೀರಿನಿಂದ ಶುಭ್ರಗೊಳಿಸುತ್ತಾರೆ.

ನೋಡಿರಿ, ಮಾನವರು ಮನೆಯನ್ನು, ಅಡುಗೆಯನ್ನು, ತಲೆಯನ್ನು, ವಸ್ತ್ರಗಳನ್ನು ನೀರಿನಿಂದ ಶುಚಿಗೊಳಿಸುತ್ತಾರೆ. ನೀರು ಇಲ್ಲದೆ ಶುಭ್ರಗೊಳಿಸಲಾರರು. ಜೀವಿಸಲಾರರು. ಮಾನವರೇ ಅಲ್ಲ, ಇತರೆ ಯಾವ ಜೀವರಾಶಿಯು ಕೂಡಾ ನೀರನ್ನು ಶುಚಿಗಾಗಿ, ಕುಡಿಯಲು ಉಪಯೋಗಿಸುತ್ತಾರೆ. ನೀರು ಇಲ್ಲದಿದ್ದರೆ ಜೀವರಾಶಿಯು ನಶಿಸಿಹೋಗುತ್ತದೆ ಕೂಡಾ. ಎಲ್ಲಾ ಜೀವಿಗಳಿಗೆ ಆಹಾರವಾದ ವೃಕ್ಷಜಾತಿಯು ಕೂಡಾ ನೀರು ಇಲ್ಲದಿದ್ದರೆ ನಾಶವಾಗಬೇಕಾದದ್ದೆ! ಆದ್ದರಿಂದ ನೀರು ಜೀವರಾಶಿಗೆ ಅಷ್ಟು ಉಪಯೋಗ. ಹಾಗೆ ನೀರು ಕೆಲಸಕ್ಕೆ ಬಾರದವುಗಳನ್ನು ಉಪಯೋಗವಾಗುವಂತೆ ಹೇಗೆ ಮಾರ್ಪಡಿಸುತ್ತದೋ ನಾವು ತಿಳಿದುಕೊಳ್ಳಬಹುದು.

ದತ್ತಾತ್ರೇಯರು ಕೂಡ ನೀರಿನಂತೆ, ತನ್ನ ಬಳಿ ಬಂದ ಶಿಷ್ಯರಿಗೆ ಕೊಳೆಯಂತಹ

ಅಜ್ಞಾನವನ್ನು ತೊಲಗಿಸಿ, ಜ್ಞಾನವೆನ್ನುವ ಪವಿತ್ರತೆಯನ್ನು ಕೊಡುತ್ತಾರೆ. ಹಾಗೆ ನಾನು ನೀರನ್ನು ನೋಡಿ ಕಲಿತೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಹಾಗೆಯೇ ಯೋಗಿಗಳು ತನ್ನ ಬಳಿ ಬಂದವರಿಗೆ ಧ್ಯಾನದ ಮೂಲಕ ಅಜ್ಞಾನ ಎನ್ನುವ ಕತ್ತಲನ್ನು ತೊಲಗಿಸಿ, ಜ್ಞಾನವೆನ್ನುವ ಬೆಳಕು ಕೊಡುತ್ತಾರೆ. ಪತ್ರಿಯವರು ಕೂಡ ತನ್ನ ಬಳಿ ಬಂದವರಿಗೆ ಅದೇ ಮಾಡುತ್ತಿದ್ದರು. ನಾನು ಹಾಗೂ ನಮ್ಮವರು ಅದೇ ಕೆಲಸ ಮಾಡುತ್ತಿದ್ದೇವೆ.

## 3. ಅಗ್ನಿ

ನೋಡಿ, ಅಗ್ನಿಯು ಎಲ್ಲವನ್ನು ಅಂದರೆ ಒಳ್ಳೆಯವು, ಕೆಟ್ಟವು ಎನ್ನುವುದನ್ನು ನೋಡದೆ ಭಸ್ಮ ಮಾಡುತ್ತದೆ. ಹೇಗೆ ಪಕ್ಷಪಾತವಿಲ್ಲದೆ ಅಗ್ನಿ ಹೇಗೆ ಭಸ್ಮ ಮಾಡುತ್ತದೋ! ಹಾಗೆಯೇ ಧ್ಯಾನಯೋಗಿ ತನ್ನ ಕಷ್ಟಗಳನ್ನು, ಸುಖಗಳನ್ನು ಸಮಾನವಾಗಿ ಸ್ವೀಕರಿಸುತ್ತಾನೆ.

ದತ್ತಾತ್ರೇಯರು ಕೂಡ ಅಗ್ನಿಯಂತೆ ಒಳ್ಳೆಯದು, ಕೆಟ್ಟದ್ದು ಎಂದು ನೋಡದೆ ಎಲ್ಲವನ್ನು ಸ್ವೀಕರಿಸುತ್ತಾರೆ, ಹಾಗೆ ನಾನು ಅಗ್ನಿಯಂತೆ ಎಲ್ಲವುದರ ಬಗ್ಗೆ ಸಮ ದೃಷ್ಟಿಯಿಂದ ಇರುತ್ತೇನೆ ಎಂದು ಹೇಳಿದ್ದಾರೆ.

ಅಗ್ನಿಗೆ ಪ್ರತ್ಯೇಕವಾದ, ನಿರ್ದಿಷ್ಟವಾದ ಅಕಾರವಿಲ್ಲ. ಯಾವ ಆಕಾರದಲ್ಲಿ ಪ್ರವೇಶಿಸುತ್ತದೆ ಆ ರೂಪವನ್ನೇ ಧರಿಸುತ್ತದೆ. ಕಟ್ಟಿಗೆಯಲ್ಲಿ ಪ್ರವೇಶಿಸಿದರೆ ಅದರ ರೂಪವೆ ಆಗುತ್ತದೆ. ಬಡಿಗೆ ಸುಟ್ಟರೆ ಉದ್ದವಾಗಿ ಕಾಣಿಸುತ್ತದೆ. ಪುಟ್ಟಿಯು ಸುಟ್ಟರೆ ಗುಂಡಾಗಿ ಕಾಣಿಸುತ್ತದೆ. ಹಾಗೆ ಯಾವ ವಸ್ತುವಿನಲ್ಲಿ ಹೊಕ್ಕರೆ ಆ ರೂಪವನ್ನೇ ಧರಿಸುತ್ತದೆ. ಅಗ್ನಿಗೆ ಅದರದ್ದೇ ಆದ ಪ್ರತ್ಯೇಕವಾದರೂ, ಅಕಾರವಿಲ್ಲ.

ಹಾಗೆಯೇ ಆತ್ಮಕ್ಕೆ ಕೂಡಾ ಯಾವ ಆಕಾರವು ಇಲ್ಲ. ಯಾವ ಶರೀರವನ್ನು ಪ್ರವೇಶಿಸುತ್ತದೋ ಆ ರೂಪವೆ ತನ್ನದು ಎನ್ನುವಂತೆ ಇರುತ್ತದೆ.

ಅದಕ್ಕೆ ಎಲ್ಲರಲ್ಲಿ ಇರುವ ಆತ್ಮ ಒಂದೆ ಎಂದು ಅಗ್ನಿಯಿಂದ ನಾನು ಕಲಿತೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 4. ವಾಯು

ವಾಯುವು 2 ವಿಧವಾಗಿ ಇರುತ್ತದೆ. : 1. ಅಂತರ್ವಾಯು 2. ಬಹಿರ್ವಾಯು

ಅಂತರ್ವಾಯು ಪ್ರಾಣಶಕ್ತಿಯಾಗಿ ಶರೀರದಲ್ಲಿ ಇರುತ್ತದೆ. ಪ್ರಾಣಶಕ್ತಿ ಇದ್ದರೇನೆ ಮನುಷ್ಯ ಜೀವಿಸುತ್ತಾನೆ. ಪ್ರಾಣಶಕ್ತಿ ಇಲ್ಲದಿದ್ದರೆ ಶರೀರ ಶವವಾಗುತ್ತದೆ. ಮಾನವರು, ಪ್ರಾಣಿಗಳು ಇತರ ಜೀವರಾಶಿಗಳು ಶವಗಳಾಗಿ ಹೋಗುತ್ತಾರೆ.

ಬಹಿರ್ವಾಯು ಅಂದರೆ ಹೊರಗೆ ಇರುವ ವಾಯು. ವಾಯುವಿನ ಒಂದು ಲಕ್ಷಣವೆಂದರೆ ತನ್ನೊಂದಿಗೆ ಯಾವುದನ್ನಾದರೂ ತೆಗೆದುಕೊಂಡು ಹೋಗುತ್ತದೆ ನೋಡಿ, ಬಹಿರ್ವಾಯು ದುರ್ಗಂಧವನ್ನಾಗಲಿ, ಸುಗಂಧವನ್ನಾಗಲಿ ತೆಗೆದುಕೊಂಡು ಹೋಗುತ್ತದೆ. ಅದಕ್ಕೆ ವಾಯುವು ದುರ್ಗಂಧ ಪ್ರದೇಶದಲ್ಲಿ ಬೀಸಿದಾಗ ದುರ್ಗಂಧವನ್ನು ತೆಗೆದುಕೊಂಡು ಹೋಗುವುದರಿಂದ ಹೊಲಸು ನಾರುತ್ತದೆ. ಅಂದರೆ ದುರ್ಗಂಧ ವಾಯು ಬಂದಿದೆ ಎಂದು ಅರ್ಥ.

ಹಾಗೆಯೇ ವಾಯುವು ಸುಗಂಧ ಪ್ರದೇಶಗಳಲ್ಲಿ ಬೀಸಿದಾಗ ಅಂದರೆ ಮಲ್ಲಿಗೆ ತೋಟದಲ್ಲಾಗಲಿ, ಸಂಪಂಗಿ ತೋಟದಲ್ಲಾಗಲಿ, ಗುಲಾಬಿ ತೋಟದಲ್ಲಾಗಲಿ ಬೀಸಿದಾಗ ಆ ಸುಗಂಧವನ್ನು ತನ್ನೊಂದಿಗೆ ತೆಗೆದುಕೊಂಡು ಹೋಗುತ್ತದೆ. ಆಗ ಒಳ್ಳೆಯ ವಾಸನೆ ಬರುತ್ತದೆ. ಸುಗಂಧದ ಪರಿಮಳ ಬರುತ್ತದೆ. ಅದಕ್ಕೆ ವಾಯು ದುರ್ಗಂಧಗಳನ್ನಾಗಲಿ ಸುಗಂಧಗಳನ್ನಾಗಲಿ ಒಂದೇ ರೀತಿಯಲ್ಲಿ ಸ್ವೀಕರಿಸುತ್ತದೆ ಎಂದು ತಿಳಿಯಬೇಕು.

ಹಾಗೆ ಒಬ್ಬ ಜ್ಞಾನಿ ದ್ವಂದ್ವಗಳಲ್ಲಿ ಅಂದರೆ ಮಾನ–ಅಪಮಾನಗಳಲ್ಲಿ, ಶೀತ–ಉಷ್ಣಗಳಲ್ಲಿ, ಸುಖ–ದುಃಖಗಳಲ್ಲಿ, ಸೋಲು–ಗೆಲುವು, ನಿಂದೆ – ಸ್ತುತಿಗಳಲ್ಲಿ ಸಮಸ್ಥಿತಿಯಲ್ಲಿ ಇರುತ್ತಾನೆ. ಇದನ್ನೆ ನಾನು ವಾಯುವಿನಿಂದ ಕಲಿತೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 5. ಆಕಾಶ

ಆಕಾಶವು ಎಲ್ಲಡೆಯೂ ವ್ಯಾಪಿಸಿದೆ. ಎಲ್ಲಿ ಖಾಲಿ ಇರುತ್ತದೆಯೋ ಅಲ್ಲಿ ಆಕಾಶವಿದ್ದಂತೆಯೇ. ಆದರೆ ಆಕಾಶದ ವಿಶೇಷತೆ ಏನು? ಎಲ್ಲಾ ಕಡೆ ಇದ್ದರೂ ಯಾವುದನ್ನು ಅಂಟಿಸಿಕೊಳ್ಳುವುದಿಲ್ಲ.

ನೋಡಿ, ಪರಮಾತ್ಮನಿಲ್ಲದ ಸ್ಥಳವಿಲ್ಲ. ಆದರೆ ಸಿಗುತ್ತಾನೆಯೇ? ಅಂದರೆ ಸಿಗಲಾರ, ಹಿಡಿಯೋಣವೆಂದರೆ ಹಿಡಿಯಲಾರೆವು ಆಕಾಶದಂತೆ. ಹಾಗೆ ನಾನು ಆಕಾಶವನ್ನು ನೋಡಿ ಪರಮಾತ್ಮನನ್ನು ಕುರಿತು ತಿಳಿದುಕೊಂಡೆ. ಎಂದು ದತ್ತಾತ್ರೇಯರು ಹೇಳಿದ್ದಾರೆ.

ಇದರಿಂದಾಗಿ ದತ್ತಾತ್ರೇಯರು ಪ್ರತಿಯೊಂದನ್ನು ಎಷ್ಟು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೊ ತಿಳಿಯಬಹುದು. ಆತನು, ಪಂಚಭೂತಗಳಾದ ಭೂಮಿ, ನೀರು, ಅಗ್ನಿ, ವಾಯು, ಆಕಾಶಗಳನ್ನು ಎಚ್ಚರದಿಂದ ಪರಿಶೀಲಿಸಿ 5 ರೀತಿ ಪಾಠಗಳನ್ನು ಕಲಿತರು.

## 6. ಚಂದ್ರ

ಚಂದ್ರನ ಕಲೆಗಳು ಇಳಿಯುತ್ತ ಇರುತ್ತವೆ, ಬೆಳೆಯುತ್ತಾ ಇರುತ್ತವೆ. ಅವುಗಳನ್ನು ಅಮಾವಾಸ್ಯೆ, ಹುಣ್ಣಿಮೆಗಳು ಎನ್ನುತ್ತಾರೆ. ಹಾಗೆಯೇ ಪ್ರತಿ ಜೀವಿಯು ಶರೀರವು ಮೊದಲು ಮೆಲ್ಲಗೆ ಬೆಳೆಯುತ್ತಿರುತ್ತದೆ. ನಂತರ ನಿರ್ವೀರ್ಯವಾಗಿ ಚಂದ್ರ ಕಲೆಯಂತೆ ಮೆಲ್ಲ ಮೆಲ್ಲಗೆ ಕ್ಷೀಣಿಸುತ್ತದೆ. ಅಂದರೆ ಯಾವುದು ಶಾಶ್ವತವಲ್ಲ, ಸೃಷ್ಟಿಸಲ್ಪಟ್ಟ ಪ್ರತಿಯೊಂದು ನಶಿಸಬೇಕಾದದ್ದೆ ಎಂಬುದನ್ನು ನಾನು ತಿಳಿದುಕೊಂಡೆನು. ಎಂದು ದತ್ತಾತ್ರೇಯರು ಹೇಳಿದ್ದಾರೆ.

## 7. ಸೂರ್ಯ

ಸೂರ್ಯನು ಎಲ್ಲಾದಕ್ಕೂ ಬೆಳಕು, ಶಾಖವನ್ನು ಕೊಡುತ್ತಾನೆ, ನೀರನ್ನು ಆವಿಮಾಡಿ ಮಳೆಯನ್ನು ಸುರಿಸುತ್ತಾನೆ. ಹಾಗೆ ಸುರಿಸುತ್ತಾ, ನಾನೆ ಸುರಿಸುತ್ತಿದ್ದೇನೆ ಎನ್ನುವ ಅಹಂಕಾರ ತೋರಿಸು. ತತ್ವಭಾವ ಇಲ್ಲದೆ, ಅಂದರೆ ನಾನು ಮಾಡುತ್ತಿದ್ದೇನೆ ಎನ್ನುವ ಭಾವ ಇಲ್ಲದೆ ಮಾಡುತ್ತಿದ್ದಾನೆ.

ಮಳೆ ಬಂದರೆ ಎಷ್ಟು ಲಾಭಗಳು ಇವೆ ಹೇಳಿರಿ? ಹಾಗೆ ಆತನ ಬೆಳಕಿನಿಂದ, ಆತನ ಸೂರ್ಯಕಿರಣಗಳಿಂದ ಎಷ್ಟೋ ಮಂದಿ ಎಷ್ಟೋ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಇವರೆಲ್ಲರ ಆನಂದಕ್ಕೆ ನಾನೆ ಕಾರಣ ಎಂದು ಉಬ್ಬಿ ಹೋಗುತ್ತಿಲ್ಲ. ಒಳ್ಳೆಯವರಿಗೆ, ಕೆಟ್ಟವರಿಗೆ ಒಂದೇ ರೀತಿಯಾಗಿ ಸಮಾನವಾಗಿ ಹಂಚುತ್ತಾನೆ. ಸಾಕ್ಷಿ ಭೂತವಾಗಿ ನೋಡುತ್ತಿದ್ದಾನೆ.

ಹಾಗೆ ಎಲ್ಲರಿಗೂ ಒಳಿತು ಮಾಡುತ್ತಾ ನಾನು ಮಾಡುತ್ತಿದ್ದೇನೆ ಅಂದುಕೊಳ್ಳಬಾರದು ಎಂದು ಸೂರ್ಯನಿಂದ ಕಲಿತುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಕೆಲವು ಮಡಿಕೆಗಳಲ್ಲಿ ನೀರು ಇವೆ. ಸೂರ್ಯನು ಯಾವ ಮಡಿಕೆಗಳಲ್ಲಿ ಆದರೂ

ಒಂದೇ ರೀತಿಯಾಗಿ ಕಾಣಿಸುತ್ತಾನೆ. ಕಾರಣ ಇರುವುದು ಒಬ್ಬನೆ ಸೂರ್ಯನು. ಆದ್ದರಿಂದ ಹಾಗೆ ಪರಮಾತ್ಮ ಕೂಡ ಒಬ್ಬನೆ ಆದರೂ ಬೇರೆ ಬೇರೆ ದೇಹಗಳಲ್ಲಿ ಇದ್ದು ಬೇರೆ ಬೇರೆಯಾಗಿ ಅನಿಸುತ್ತಾನೆ.

ಹಾಗೆ ಬೇರೆ ಬೇರೆಯಾಗಿ ಇದ್ದರೂ ಎಲ್ಲರಲ್ಲೂ ಇರುವ ಪರಮಾತ್ಮ ಒಬ್ಬನೆ. ಶರೀರಗಳು ಬೇರೆಯಾದ ಮಾತ್ರಕ್ಕೆ ಪರಮಾತ್ಮ ವಿಭಜನೆಯಾಗಿಲ್ಲ ಎಂಬ ವಿಷಯವನ್ನು ಸೂರ್ಯನನ್ನು ನೋಡಿ ನಾವು ಗ್ರಹಿಸಬೇಕೆಂದು ದತ್ತಾತ್ರೇಯರು ತಿಳಿಸಿ ಹೇಳಿದ್ದಾರೆ.

ಮಾನವರು, ಜೀವರಾಶಿಗಳು ಸೂರ್ಯ ರಶ್ಮಿಯಿಂದ ಎಷ್ಟೋ ಕಾರ್ಯಕ್ರಮಗಳು ಮಾಡಿಕೊಳ್ಳುತ್ತಿದ್ದರೂ ನನ್ನಿಂದಲೆ ಇವರೆಲ್ಲಾ ಇಷ್ಟು ಕಾರ್ಯಕ್ರಮಗಳು ಮಾಡುತ್ತಿದ್ದಾರೆ ಎಂದು ಎಂದೂ ಅಂದುಕೊಳ್ಳಲಿಲ್ಲ. ಸಾಧಾರಣವಾಗಿ ಯಾರಾದರೂ ಏನಾದರೂ ಸಣ್ಣ ಕೆಲಸ ಮಾಡಿದರೂ ನಾನೆ ಮಾಡಿದೆನು ಎಂದು ಎಷ್ಟೋ ದೊಡ್ಡದಾಗಿ ಹೇಳಿಕೊಳ್ಳುತ್ತಾರೆ.

ಆದರೆ ಸೂರ್ಯನು ಯಾವಾಗಲೂ ಕೂಡ ಎಷ್ಟು ಕೆಲಸಗಳು ನಡೆಯುತ್ತಿದ್ದರೂ ಸಾಕ್ಷಿ ಸ್ಥಿತಿಯಲ್ಲಿ ಗಮನಿಸುತ್ತಾನೆಯಾಗಲಿ, ನಾನು ಎನ್ನುವ ಕತೃತ್ವಭಾವ ಇರದು. ಹಾಗೆ ಸೂರ್ಯನ ಹಾಗೆ ಇರಬೇಕು ಎಂದು ನಾನು ಕಲಿತುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 8. ಆನೆ

ಆನೆಯನ್ನು ಹಿಡಿಯಬೇಕು ಅಂದರೆ ಮಾವುತನು ಖೆಡ್ಡಾ ಹಾಕಿ ಹೆಣ್ಣು ಆನೆಯಿಂದ ಕೂಗಿಸುತ್ತಾನೆ. ಆ ಗಂಡು ಆನೆ ಹೆಣ್ಣು ಆನೆಯ ಕೂಗು ಕೇಳಿ ಬರುವಾಗ ಆ ಖೆಡ್ಡಾದಲ್ಲಿ ಬಿದ್ದು ಸಿಕ್ಕಿಹಾಕಿಕೊಳ್ಳುತ್ತದೆ. ಅಪಾಯದಲ್ಲಿ ಬೀಳುತ್ತದೆ. ಆದಕ್ಕೆ ಯಾವಾಗಲೂ ಕೂಡಾ ಹೆಣ್ಣಿನ ಕಡೆಗಾಗಲಿ, ಅಂದವಾದ ಸ್ತ್ರೀಯ ಕಡೆಗಾಗಲಿ ಆಕರ್ಷಿತರಾಗಬಾರದು ಎಂದು ಕಲಿತುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಶರೀರ ಸ್ಪರ್ಶ ಎನ್ನುವ ಆಕರ್ಷಣೆಗೆ ಆಸೆಯು ಒಳಗಾಯಿತು. ಅದಕ್ಕೆ ಬಹಳ ಜನ ಹೇಳುತ್ತಾರೆ. ಪಂಚೇಂದ್ರಿಯಗಳಲ್ಲಿ ಶರೀರ ಸ್ಪರ್ಶಕ್ಕಾಗಿ ಎಷ್ಟೋ ಜನರು ನಾಶವಾದಾಗ, ಆ ಆನೆಯನ್ನೆ ಉಪಮಾನವಾಗಿ ತೆಗೆದುಕೊಳ್ಳುತ್ತಾರೆ.

ಅದಕ್ಕೆ ಮಾವುತನು ಕೂಡಾ ಹೆಣ್ಣಾನೆಯ ಕೂಡ ಕೂಗಿಸುತ್ತಾನೆ. ಆ ಗಂಡಾನೆ ಗಬಗಬ ಬಂದು ಆ ಖೆಡ್ಡಾದಲ್ಲಿ ಬಿದ್ದು ಮಾವುತನ ಕೈಗೆ ಸಿಕ್ಕಿಬೀಳುತ್ತದೆ.

ಅದಕ್ಕೆ ನಾನು ಭೌತಿಕ ಆಕರ್ಷಣೆಗಳಿಗೆ ಒಳಗಾಗಬಾರದು. ನನ್ನ ಜ್ಞಾನ ಬೆಳೆಯದು ಎಂದು ಗ್ರಹಿಸಿದೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 9. ಜೇನು ಹುಳು

ಜೇನು ಹುಳುಗಳು ಜೇನನ್ನು ಜೇನುಗೂಡಿನಲ್ಲಿ ಎಷ್ಟು ಕೂಡಿಟ್ಟರೂ ಆ ಜೇನನ್ನು ಜೇನುಹುಳುಗಳು ಕುಡಿಯುವುದಿಲ್ಲ. ಅದು ಇನ್ನೊಬ್ಬರ ಪಾಲಾಗುತ್ತದೆ. ಕಷ್ಟ ಒಬ್ಬರದಾದರೆ ಅನುಭವಿಸುವುದು ಬೇರೊಬ್ಬರು.

ಅದಕ್ಕೆ ಧನವೆನ್ನುವುದು ಎಷ್ಟು ಕೂಡಿಟ್ಟರೂ ಇಟ್ಟವರು ಉಪಯೋಗಿಸದೆ ಹೋದರೆ! ಅಂದರೆ ಆವಶಕತೆಗೂ ಮೀರಿ ಇರುವುದನ್ನು ಪರರಿಗೆ, ಲೋಕ ಕಲ್ಯಾಣಕ್ಕೆ ಉಪಯೋಗಿಸದೆ ಹೋದರೆ ಆ ಧನವು ಇನ್ನೊಬ್ಬರ ವಶವಾಗುತ್ತದೆ. ಅದಕ್ಕೆ ಧನದ ಮೇಲೆ, ಸಂಪತ್ತಿನ ಮೇಲೆ ಭೋಗಗಳ ಮೇಲೆ ಆಸೆ ಇರಬಾರದು ಎಂದು ಜೇನು ಹುಳುವಿನಂತ ಜೀವನ ಆಗಬಾರದೆಂದು, ಜೇನು ಹುಳುವಿನಿಂದ ಗ್ರಹಿಸಿದೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 10. ಮಿಡತೆ

ಮಿಡತೆಯ ದೀಪದ ಕಾಂತಿಯನ್ನು ನೋಡಿ, ಅದು ಹಣ್ಣು ಎಂದುಕೊಂಡು ಅದಕ್ಕೆ ಆಕರ್ಷಿತವಾಗುತ್ತದೆ. ಆ ದೀಪದ ಹತ್ತಿರ ಹೋಗಿ ಆ ದೀಪದಲ್ಲಿ ಬಿದ್ದು ಮರಣಿಸುತ್ತದೆ. ಆದಕ್ಕಾಗಿ ಅಂದವಾದ, ಆಕರ್ಷಣೀಯವಾದ ವಸ್ತುಗಳನ್ನು ನೋಡುತ್ತಾ ಇದು ಬೇಕು, ಅದು ಬೇಕು ಎಂದು ತನ್ಮಯತೆಯಿಂದ ಅವುಗಳ ಹಿಂದೆ ಬಿದ್ದರೆ ಅಪಾಯದಲ್ಲಿ ಬೀಳುತ್ತೇವೆ ಎಂಬ ಸತ್ಯವನ್ನು ನಾನು ಗ್ರಹಿಸಿದೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## 11. ಸಮುದ್ರ

ಸಮುದ್ರದಲ್ಲಿ ನದಿಗಳು ಬಂದು ಸೇರುತ್ತವೆ. ಆದರೆ ಎಷ್ಟು ನದಿಗಳು ಬಂದು ಸೇರಿದರೂ ಸಮುದ್ರವೂ ಉಕ್ಕುವುದಿಲ್ಲ. ಬೇಸಿಗೆ ಕಾಲ ಬಂದ ಕೂಡಲೇ ಸಮುದ್ರದಲ್ಲಿ ನೀರು ಆವಿಯಾಗಿ ಮೇಘಗಳಾಗಿ ಬದಲಾಗಿ ಬಿಡುತ್ತದೆ. ಆದರೆ ಸಮುದ್ರ ಕರುಗುವುದಿಲ್ಲ, ಇಂಗುವುದಿಲ್ಲ. ಅಂದರೆ ನದಿಗಳು ಬಂದು ಸೇರಿದವು ಎಂದು ಉಬ್ಬದು,

ಎಷ್ಟು ಆವಿಯಾದರೂ ಕಡಿಮೆಯಾಗುವುದಿಲ್ಲ. ಹಾಗೆಯೇ ಯಾವುದು ಬಂದರೂ ಉಬ್ಬಿ ಹೋಗದೆ, ಏನೂ ಬರಲಿಲ್ಲವೆಂದು ಕುಗ್ಗಿ ಹೋಗದೆ ಇರಬೇಕೆಂದು ಸಮುದ್ರವನ್ನು ನೋಡಿ ಕಲಿತುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಅಷ್ಟೇ ಅಲ್ಲ ಸಮುದ್ರವು ಎಷ್ಟೋ ಜಲಚರಗಳಿಗೆ ವಾಸ್ಥಾನವಾಗಿದೆ ಉಪಯೋಗವಾಗಿದೆ. ಅಲ್ಲದೆ ಅವುಗಳ ಜೀವನಕ್ಕೆ ಎಷ್ಟೋ ಸಹಕರಿಸುತ್ತದೆ. ಹಾಗೆ ಯಾರಾದರೂ ಸರಿ ಇತರರಿಗೆ ಜೀವನಕ್ಕೆ ಸಹಕರಿಸಬೇಕು ಎಂದು ಸಮುದ್ರವನ್ನು ನೋಡಿ ಕಲಿತೆನು ಎಂದು ದತ್ತಾತ್ರೇಯರು ಹೇಳಿದರು.

## 12. ಹೆಬ್ಬಾವು

ಹೆಬ್ಬಾವು ಏನು ದೊರಕಿದರೂ ಅದನ್ನೇ ತಿನ್ನುತ್ತದೆ. ಏನೂ ಸಿಗದಿದ್ದರೆ ಅದು ಉಪವಾಸ ಇರುತ್ತದೆಯೋ ಹೊರತು ತಿಂಡಿಗಾಗಿ ಅದು ಎಂದಿಗೂ ಪ್ರಯತ್ನಿಸದು. ಅದು ತನ್ನ ಬಳಿಗೆ ಯಾವ ಜೀವಿಯಾದರೂ ಬಂದರೆ ಊಟಕ್ಕೆಂದು ಹಿಡಿಯುತ್ತದೆಯಂತೆ. ಹಾಗೆ ಹಿಡಿದ ಜೀವಿಯನ್ನು ಜೀರ್ಣಿಸಿಕೊಳ್ಳುವ ಶಕ್ತಿ ಅದಕ್ಕೆ ಇದೆ ಆದರೆ ಅದು ಆಹಾರಕ್ಕಾಗಿ ಪ್ರಯತ್ನಿಸದು.

ಹಾಗೆಯೇ ನಾನು ಕೂಡ ದೊರಕಿದವುಗಳೊಂದಿಗೆ ಇರುತ್ತೇನೆ. ಏನೂ ದೊರಕದಿದ್ದರೆ ನಿರಾಹಾರಿಯಾಗಿ ಇರುತ್ತೇನೆ. ಆದರೆ ಆಹಾರಕ್ಕಾಗಿ ಎಂದಿಗೂ ಪ್ರಯತ್ನಿಸುವುದಿಲ್ಲ. ಆಹಾರವು ದೊರಕಿದರೆ ಸ್ವೀಕರಿಸುತ್ತೇನೆ. ಇಲ್ಲದಿದ್ದರೆ ಸುಮ್ಮನೆ ಇರುತ್ತೇನೆ ಎಂದು ಹೆಬ್ಬಾವನ್ನು ನೋಡಿ ನಾನು ಕಲಿತೆನು ಎನ್ನುತ್ತಾರೆ ದತ್ತಾತ್ರೇಯರು.

## 13. ಜಿಂಕೆ

ಜಿಂಕೆಯು ಸಂಗೀತವನ್ನು ಕೇಳಿ ಮೈ ಮರೆಯುತ್ತದೆ. ಆದ್ದರಿಂದ ಜಿಂಕೆಯನ್ನು ಹಿಡಿಯಲು ಬೇಡಲು ಶಿಳ್ಳೆ ಹಾಕಿ ಸಂಗೀತವನ್ನು ಕೇಳಿಸುತ್ತಾನೆ. ಜಿಂಕೆಯು ಆ ಸಂಗೀತವನ್ನು ಕೇಳಿ ಮೈಮರೆತು ಓಡೋಡಿ ಹೋಗಿ ಬಲೆಯಲ್ಲಿ ಬಿದ್ದು, ಬೇಡನ ಕೈ ಸಿಕ್ಕಿ ಬಿಡುತ್ತದೆ.

ಜಿಂಕೆಯಂತೆ ಸಂಗೀತದ ಧ್ವನಿಗಾಗಲಿ, ನಾಟ್ಯ, ನೃತ್ಯಕ್ಕಾಗಲಿ, ಇಂತಹ ಕಲೆಗಳು ಇರುವಲ್ಲಿ ನಾವು ಮನಸ್ಸನ್ನು ಇಡಬಾರದು. ಅಂತಹವುಗಳ ಮೇಲೆ ಮನಸ್ಸು ವಾಲಿದರೆ

ಅವುಗಳ ಆಕರ್ಷಣೆಗೆ ಗುರಿಯಾಗಿ ಹೊಂದಬೇಕಾದ ಜ್ಞಾನವು ನಷ್ಟವಾಗುವ ಆಪತ್ತು ಇದೆ ಎಂದು ತಿಳಿದುಕೊಂಡೆನು. ಆದ್ದರಿಂದ ಅಂತಹವುಗಳ ಮೇಲೆ ದೃಷ್ಟಿ ಇಟ್ಟರೆ ಜನ್ಮವನ್ನೇ ನಷ್ಟ ಪಡಿಸಿಕೊಳ್ಳಬೇಕಾಗುತ್ತದೆ ಎಂದು ತಿಳಿದುಕೊಂಡೆನು ಎಂದು ದತ್ತಾತ್ರೇಯರು ಹೇಳಿದರು.

ನೋಡಿ ಋಷ್ಯ ಶೃಂಗನು ಸ್ತ್ರೀಯರ ಮೋಹವನ್ನು ತಿಳಿಯದಂತೆ ಬೆಳೆದನು. ಆದರೆ ಆ ಸ್ತ್ರೀಯರಿಂದಲೆ ಮತ್ತೆ ಸಂಸಾರದಲ್ಲಿ ಬೀಳಬೇಕಾಯಿತು. ಆದ್ದರಿಂದ ನಾನು ಅಂದವಾದ ಸ್ತ್ರೀಗಳ ಕಡೆಗಾಗಲಿ, ಸಂಗೀತ ನಾಟ್ಯಗಳು ಇರುವ ಕಡೆಗಾಗಲಿ ನಾನು ಹೋಗುವುದಿಲ್ಲ, ಮನಸ್ಸು ಆ ಕಡೆಗೆ ಇಡುವುದಿಲ್ಲ. ನನ್ನ ಕಣ್ಣನ್ನು ಆ ಕಡೆಗೆ ತಿರುಗಿಸೆನು ಎಂದು ದತ್ತಾತ್ರೇಯರು ಹೇಳಿದರು.

## 14. ವೇಶ್ಯೆ

ವೇಶ್ಯೆ ಕೂಡ ನನಗೆ ಗುರುವೆ ಎಂದರು ದತ್ತಾತ್ರೇಯರು. ವೇಶ್ಯೆ ಕೂಡ ಗುರುವೇನು? ವೇಶ್ಯೆ ಹತ್ತಿರ ಕಲಿತುಕೊಳ್ಳಬೇಕಾದದ್ದು ಏನು? ಎಂದು ಬಹಳ ಜನರಿಗೆ ಅನುಮಾನ ಬರುತ್ತದೆ. ಒಬ್ಬ ವೇಶ್ಯೆ ಕೂಡ ಆತನಿಗೆ ಗುರುವೆ. ಹೇಗೆಂದರೆ? ಒಂದು ಬಾರಿ ಅವರು ಹೋಗುತ್ತಿದ್ದರೆ, ಪಿಂಗಳಾ ಎಂಬ ವೇಶ್ಯೆ ಬೆಳಗಿನ ಜಾವದವರೆಗೂ ವಿಟರಿಗೆ ಕಾದರೆ, ಎದುರು ನೋಡಿದರೆ ಯಾವ ವಿಟರೂ ಬರಲಿಲ್ಲವಂತೆ. ಆಗ ಆಕೆ ಹೀಗೆ ಅಂದಳಂತೆ.

ನಾನು ವಿಟರಿಗಾಗಿ ಎದುರು ನೋಡಿದೆನು. ಆದರೆ ಆ ವಿಟರಿಗಾಗಿ ಎದುರು ನೋಡುವ ಬದಲು, ಆ ವಿಶ್ವೇಶ್ವರನಿಗಾಗಿ ಎದುರು ನೋಡಿದ್ದರೆ ನನಗೆ ಯಾವಾಗಲೋ ಮೋಕ್ಷ ಬರುತ್ತಿತ್ತು ಎಂದು ಆಕೆ ಎಂದ ಮಾತುಗಳನ್ನು ಆತನು ಕೇಳಿಸಿಕೊಂಡನು.

ಆಗ ಅವರು ಅಂದುಕೊಂಡರಂತೆ ಪ್ರಪಂಚದಲ್ಲಿರುವ ಸುಖಗಳಿಗಾಗಿ ಕಳೆಯುವ ಸಮಯ, ಧನವನ್ನು ವಿಶ್ವೇಶ್ವರನಿಗಾಗಿ ವ್ಯಯಿಸಿದರೆ ಮೋಕ್ಷವೆ ಬರುತ್ತದೆ ಎಂದು ಆ ವೇಶ್ಯೆಯನ್ನು ನೋಡಿ ಕಲಿತುಕೊಂಡೆ ಎಂದು ದತ್ತಾತ್ರೇಯರು ಹೇಳಿದರು.

## 15. ಸರ್ಪ

ಸರ್ಪವು ಯಾವುದರಲ್ಲಿ ತಿರುಗಾಡಿದರೂ, ಹೇಗೆ ತಿರುಗಾಡಿದರೂ ಅದು

ಶುಭ್ರವಾಗಿ ಇರುತ್ತದೆ, ಶುಚಿಯಾಗಿ ಇರುತ್ತದೆ. ಅದು ಎಂದಿಗೂ ತನಗಾಗಿ ಗೂಡು ಕಟ್ಟಿಕೊಳ್ಳಬೇಕೆಂದು ಅಂದು ಕೊಳ್ಳುವುದಿಲ್ಲ. ಕೆಸರಿನಲ್ಲಿ ಹೋದರೂ ಸರ್ಪಕ್ಕೆ ಕೆಸರು ಅಂಟುವುದಿಲ್ಲ.

ಹಾಗೆಯೇ ನಾವು ಕೂಡ ಯಾವುದನ್ನು ಅಂಟಿಸಿಕೊಳ್ಳದೆ ಜೀವಿಸಬೇಕು. ಅಷ್ಟೇ ಅಲ್ಲ ಹಾವು ಎಂದಿಗೂ ಮನೆ ನಿರ್ಮಿಸಿಕೊಳ್ಳುವುದಿಲ್ಲ. ಅದು ಇರುವೆಗಳು ಕಟ್ಟಿದ ಗೂಡಿನಲ್ಲೇ ತನ್ನ ವಾಸವನ್ನು ಏರ್ಪಾಡು ಮಾಡಿಕೊಳ್ಳುತ್ತದೆ.

ಹಾಗೆಯೇ ನಾವು ಕೂಡ ನಮಗಾಗಿ ಪ್ರಯತ್ನಿಸದೆ ಭಗವಂತನ ಮಾರ್ಗದಲ್ಲಿ ಇದ್ದರೆ, ಆ ಭಗವಂತನೆ ಯಾವುದೋ ರೂಪದಲ್ಲಿ, ಯಾವುದೋ ವಿಧವಾಗಿ ನಮಗೆ ಮನೆಯನ್ನು ತಯಾರು ಮಾಡುತ್ತಾನೆ. ನನಗೆ ಮನೆ ಇಲ್ಲ, ಅರಮನೆ ಇಲ್ಲವಲ್ಲ ಎಂದು ನೋವು ಪಡುವ ಅವಸರವಿಲ್ಲ. ನಮ್ಮ ಅರ್ಹತೆಗೆ ಅನುಗುಣವಾಗಿ ನಮಗೆ ಲಭಿಸುತ್ತದೆ, ನಾವು ಎಂದಿಗೂ ಅದಕ್ಕಾಗಿ ಆಲೋಚಿಸುವ ಅವಸರವಿಲ್ಲವೆಂದು ತಿಳಿದುಕೊಂಡೆ ಎಂದು ದತ್ತಾತ್ರೇಯರು ಹೇಳಿದ್ದಾರೆ.

## 16. ಹಸುಗೂಸು

ದತ್ತಾತ್ರೇಯರಿಗೆ ಹಸುಗೂಸು ಕೂಡಾ ಗುರುವೆ. ಏಕೆಂದರೆ ಹಸುಗೂಸು ಯಾವ ಮಾಯ ಮರ್ಮವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಹಸುಗೂಸಿನಲ್ಲಿ ಯಾವ ಕಲ್ಮಷವು ಇರದು. ಅದಕ್ಕೆ ಯಾವಾಗಲೂ ನಗುತ್ತಾ ಇರುತ್ತಾನೆ. ಹಸಗೂಸಿಗೆ ಎಲ್ಲಾ ಒಂದೆ! ಎಲ್ಲರೂ ಒಂದೇ! ಯಾವ ಮಾಯೆ ಮರ್ಮ ಇರದು. ಯಾರ ಮೇಲೂ ರಾಗ ದ್ವೇಷಗಳು ಇರುವುದಿಲ್ಲ. ಅದಕ್ಕೆ ಕೂಸನ್ನು ದೈವಕ್ಕೆ ಹೋಲಿಸುತ್ತಾರೆ. ಆದ್ದರಿಂದ ಯಾವ ಮಾಯಾ ಮರ್ಮಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು ಎಂದು ನಾನು ಹಸುಗೂಸಿನಿಂದ ತಿಳಿದುಕೊಂಡೆನು ಎಂದು ದತ್ತಾತ್ರೇಯರು ಹೇಳಿದರು.

## 17. ಮೀನು

ಮೀನನ್ನು ನೋಡಿರಿ, ನಾಲಿಗೆ ರುಚಿಗಾಗಿ ಬೆಸ್ತನ ಗಾಳದಲ್ಲಿ ಸಿಕ್ಕಿ ಬಿದ್ದು ಸತ್ತು ಹೋಗುತ್ತದೆ. ಹಾಗೆ ಜಿಹ್ವೆಯ ಚಾಪಲ್ಯಕ್ಕೆ ಒಳಗಾಗಬಾರದು ಎಂದು ನಾನು ನಿರ್ಣಯಿಸಿಕೊಂಡಿದ್ದೇನೆ ಎಂದು ದತ್ತಾತ್ರೇಯರು ಹೇಳಿದ್ದಾರೆ.

ಹಾಗೆಯೆ ನಾವು ಒಂದೊಂದನ್ನು ನೋಡಿ ಕಲಿತು ಕೊಳ್ಳುತ್ತಿರುವಾಗ, ಒಬ್ಬ ಸಾಧಕನು ಹೇಗೆ ಬೆಳೆಯಬೇಕು? ಯಾವ ಅಭ್ಯಾಸಗಳನ್ನು ಮಾಡಿಕೊಳ್ಳಬೇಕು? ಎನ್ನುವವು ಎಲ್ಲಾ ಕೂಡಾ ಬಹಳ ಚೆನ್ನಾಗಿ ನಮಗೆ ಅರ್ಥವಾಗುತ್ತವೆ.

ಆದ್ದರಿಂದ ಹೇಗೆ ಇದ್ದರೆ ಯೋಗಿಯಾಗುತ್ತಾನೆ? ಹೀಗೆ ಇದ್ದರೆ ಶ್ರೇಷ್ಠನಾಗುತ್ತಾನೆ? ಎಂಬುದನ್ನು ತಿಳಿದುಕೊಳ್ಳಬೇಕು. ಸಹಜವಾಗಿ ಮಾನವನು ತಾನೇ ಶ್ರೇಷ್ಠನು ಎಂದು ಅಂದುಕೊಂಡರೆ ಏನನ್ನು ಕಲಿಯಲಾರನು.

## 18. ಬಿಲ್ಲುಗಾರ

ಯಾರಾಗಲಿ ಯಾವುದನ್ನು ಹಿಡಿಸಿಕೊಳ್ಳದೆ ಒಂದರ ಮೇಲೆ ದೃಷ್ಟಿ ಇಟ್ಟಾಗ ಅದನ್ನು ಖಂಡಿತವಾಗಿ ಸಾಧಿಸುತ್ತಾನೆ. ಶ್ರೀ ಕೃಷ್ಣ ಮರಣಿಸುವ ಮೊದಲು ಒಂದು ಸಮಯದಲ್ಲಿ ಉದ್ಧವನು ಬರುತ್ತಾನೆ. ಬಂದಾಗ ನೀನು ಹೊರಟು ಹೋಗುತ್ತಿರುವೆ ಅಲ್ಲವೇ? ನನಗೆ ಸ್ವಲ್ಪ ಜ್ಞಾನವನ್ನು ಬೋಧಿಸು ಅಂದರೆ? ಆಗ ಶ್ರೀ ಕೃಷ್ಣನು ಬಹಳ ವಿಷಯಗಳನ್ನು ಹೇಳುತ್ತಾ ಒಂದು ವಿಷಯವನ್ನು ಹೇಳುತ್ತಾನೆ. ನೀನು ಆತ್ಮ ಜ್ಞಾನವನ್ನು ಹೊಂದಬೇಕೆಂದರೆ, ಸಾಧನೆ ಮಾಡುವಾಗ ಎಷ್ಟೋ ಏಕಾಗ್ರತೆಯಿಂದ ಇರಬೇಕು ಎಂದು ಹೇಳುತ್ತಾ, ಅದಕ್ಕೆ ಒಂದು ಸಣ್ಣ ಉದಾಹರಣೆ ಹೇಳಿದನು ಶ್ರೀ ಕೃಷ್ಣನು

ನೀನು ಹೊರಗೆ ಹೋಗಿ ಬರುವಾಗ ಎಷ್ಟೋ ದಾಹದಿಂದ ಮನೆಗೆ ಬರುವೆ. ಮನೆಗೆ ಬಂದಾಗ ನಿನ್ನ ಹೆಂಡತಿ ಎಷ್ಟೋ ವಿಷಯಗಳನ್ನು ನಿನ್ನ ಜೊತೆ ಮಾತನಾಡುತ್ತಾ ಇರುತ್ತಾಳೆ. ಆದರೆ ನಿನ್ನ ದೃಷ್ಟಿ ಯಾವುದರ ಮೇಲೆ ಇರುತ್ತದೆ? ನಿನ್ನ ದೃಷ್ಟಿ ಎಲ್ಲಾ ನೀರು ಕುಡಿಯುವುದರ ಮೇಲೆ ಇರುತ್ತದೆ. ಆದ್ದರಿಂದ ಆಕೆಯು ಹೇಳಿದ್ದು ನೀನು ಸರಿಯಾಗಿ ಕೇಳಿಸಿಕೊಳ್ಳುವುದಿಲ್ಲ. ನೀನು ನೀರು ಕುಡಿದ ಮೇಲೆ ಮತ್ತೆ ಕೇಳುತ್ತೀಯಾ? ಆಂ ನೀನು ಇಷ್ಟೊತ್ತು ಏನೋ ಹೇಳಿದೆ. ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ. ಈಗ ಹೇಳು, ಎಂದು ಕೇಳುತ್ತೀಯಾ? ಏಕೆಂದರೆ, ನಿನ್ನ ಹೆಂಡತಿ ಹೇಳಿದ್ದನ್ನು ನೀನು ಏಕಾಗ್ರತೆಯಿಂದ ಕೇಳಿಸಿಕೊಳ್ಳಲಿಲ್ಲ. ಅದಕ್ಕೆ ಆಕೆಯು ಹೇಳಿದ್ದು ನಿನಗೆ ಅರ್ಥವಾಗಲಿಲ್ಲ. ಆದ್ದರಿಂದ ಏಕಾಗ್ರತೆ ಅಂದರೆ ಪಕ್ಕದಲ್ಲಿ ಏನು ನಡೆಯುತ್ತಿದ್ದರೂ ಹಿಡಿಸಿಕೊಳ್ಳದೆ ಅಂದು ಕೊಂಡದ್ದರ ಮೇಲೆ ದೃಷ್ಟಿ ಇಡುವಂತಹುದು.

ಆದ್ದರಿಂದ ನಮ್ಮ ದೃಷ್ಟಿ ಯಾವುದರ ಮೇಲಾಗಲಿ ನಿಶ್ಚಲವಾಗಿ ಇದ್ದಾಗ, ನಮಗೆ

ಪಕ್ಕದಲ್ಲಿ ಏನು ನಡೆಯುತ್ತಿದ್ದರೂ ಕೇಳಿಸುವುದಿಲ್ಲ. ಕಾರಣ ನಮ್ಮ ಗಮನ ಅದರ ಮೇಲೆ ಇರುತ್ತದೆ. ಆದ್ದರಿಂದ.

ಹಾಗೆಯೆ ಬಿಲ್ಲುಗಾರನ ದೃಷ್ಟಿ ಬಾಣವನ್ನು ತಯಾರು ಮಾಡುವುದರ ಮೇಲೆಯೇ ಇರುತ್ತದೆ. ಹಾಗೆ ಇರುವಾಗ ಪಕ್ಕದಲ್ಲಿ ಎಷ್ಟು ಮಂದಿ ಹೋಗುತ್ತಿದ್ದರೂ, ಕೊನೆಗೆ ಅರಸನು ಹೋಗುತ್ತಿದ್ದರೂ ಗಮನಿಸುವುದಿಲ್ಲ.

ಹಾಗೆಯೇ ನಾವು ಧ್ಯಾನ ಮಾಡುತ್ತಿರುವಾಗ, ಜ್ಞಾನವನ್ನು ಕೇಳುತ್ತಿರುವಾಗ ಧ್ಯಾನವನ್ನು ಕುರಿತು ಹೇಳುತ್ತಿರುವಾಗ ಅತ್ಯಂತ ಏಕಾಗ್ರತೆಯಿಂದ ಇರಬೇಕು. ಆ ಏಕಾಗ್ರತೆ ಧ್ಯಾನಿಗೆ ಬಹಳ ಬಹಳ ಅಗತ್ಯ. ಆದ್ದರಿಂದ ಬಿಲ್ಲುಗಾರನಿಂದ ಏಕಾಗ್ರತೆಯನ್ನು ಕಲಿತೆನು ಎಂದು ದತ್ತಾತ್ರೇಯರು ಹೇಳಿದರು.

## 19. ಕಣಜ (ಕಡುತರ ಹುಳು)

ಕಣಜವು ಮಣ್ಣಿನಿಂದ ಗೂಡನ್ನು ಕಟ್ಟಿ ಸಣ್ಣ ಕೀಟವನ್ನು ತಂದು ಗೂಡಿನಲ್ಲಿ ಇಟ್ಟು, ಹೊರಗೆ ಕೆಲವು ದಿನ ಜುಂ ಎಂದು ಶಬ್ದವನ್ನು ಮಾಡುತ್ತದೆ. ಕೀಟವು ಆ ಝೇಂಕಾರ ಶಬ್ಧವನ್ನು ಕೇಳುತ್ತಾ ಇದ್ದರೆ ತಿಳಿಯದಂತೆಯೆ ಆದರ ಶರೀರವು ಭ್ರಮರವಾಗಿ ಬದಲಾಗುತ್ತದೆ. ಆ ಸಣ್ಣ ಕೀಟವು ಸ್ವಲ್ಪ ಭ್ರಮರದಂತೆ ಬದಲಾಗಿ ಆ ಗೂಡನ್ನು ಒಡೆದು ಎಗರುತ್ತಾ ಹೊರಗೆ ಬರುತ್ತದೆ.

ಇದೆಲ್ಲಾ ಯಾವುದರಿಂದ ನಡೆಯಿತು? ಆ ಝೇಂಕಾರ ಶಬ್ದವನ್ನು ಕೇಳಿ, ಕೇಳಿ ಕೀಟವೂ ಕೂಡಾ ಕೊನೆಗೆ ಭ್ರಮರವಾಗಿ ತಯಾರಾಯಿತು. ಅದರಂತೆ ನೀನು ಧ್ಯಾನದಲ್ಲಿ ಆ ಪರಮಾತ್ಮನೊಂದಿಗೆ ಇದ್ದಾಗ, ನೀನು ಪರಮಾತ್ಮನಂತೆ ಬದಲಾಗಿ ಹೋಗುವೆ. ಆ ಪರಮಾತ್ಮನ ಸಾನಿಧ್ಯವನ್ನು ಸೇರಿಕೊಳ್ಳುವೆ, ಎಂದು ದತ್ತಾತ್ರೇಯರು ಕಣಜವನ್ನು ನೋಡಿ ನಾನು ತಿಳಿದುಕೊಂಡೆನು ಎಂದು ಹೇಳಿದರು. ಇದನ್ನೇ "ಭ್ರಮರಕೀಟಕ ನ್ಯಾಯ" ಅನ್ನುತ್ತಾರೆ.

## 20 ಜೇಡ

ಜೇಡ ಏನು ಮಾಡುತ್ತದೆ ಎಂದರೆ ತನ್ನ ಸುತ್ತಲೂ ಗೂಡನ್ನು ಹೆಣೆದುಕೊಳ್ಳುತ್ತದೆ. ಅದರ ಬಾಯಿಯಿಂದ ಒಂದು ದ್ರವ ಬರುತ್ತದೆ. ಆ ದ್ರವದಿಂದ ಗೂಡನ್ನು ಹೆಣೆಯುತ್ತದೆ. ಕೊನೆಗೆ ಅದನ್ನೆಲ್ಲಾ ತಾನೆ ಒಳಗೆ ತೆಗೆದುಕೊಳ್ಳುತ್ತದೆಯೆಂತೆ.

ಜೇಡನ ಹಾಗೆ ಪರಮಾತ್ಮನಿಂದ ಬಂದ ಈ ಸೃಷ್ಟಿ ಎಲ್ಲಾ ಕೂಡಾ ಆತನಲ್ಲಿಯೆ ಲಯವಾಗುತ್ತದೆ ಎಂದು ನಾನು ತಿಳಿದುಕೊಂಡೆನು. ಎಂದು ದತ್ತಾತ್ರೇಯರು ಹೇಳಿದರು.

ಅವರು ಇನ್ನು ಜ್ಞಾನ ಅಕ್ಷಾಂಕಿಯಾಗಿ ಸಾಧಕನು ಹೇಗೆ ಇರಬೇಕು? ಹೇಗೆ ಇದ್ದರೆ ಜೀವನು ದೇವನಾಗುತ್ತಾನೆ, ಇವಗಳನ್ನೆಲ್ಲಾ ನಾನು ತಿಳಿದುಕೊಂಡೆನು ಎಂದು ಯದು ಮಹಾರಾಜರಿಗೆ ಹೇಳಿದರು. ಅವರು ಇನ್ನು ಇವುಗಳಲ್ಲದೆ ನನ್ನ ಶರೀರವನ್ನು ನೋಡಿಕೊಳ್ಳುತ್ತಾ, ನನ್ನಿಂದ ಕೂಡ ನಾನು ಎಷ್ಟೋ ಕಲಿತೆನು ಎಂದರು.

## 21. ಜೇನು ಬಿಡಿಸುವವನು

ಜೇನು ತೆಗೆಯುವವನಿಂದ ಕಲಿತುಕೊಂಡದ್ದು ಏನೆಂದರೆ, ಸದ್ವಿನಿಯೋಗ ಮಾಡದೆ, ಬಚ್ಚಿಟ್ಟ ಧನವು ಕಳ್ಳರನ್ನು ಆಕರ್ಷಿಸಿ, ಆಪತ್ತನ್ನು ತಂದಿಡುತ್ತದೆ. ಆದ್ದರಿಂದ ಸಂಗ್ರಹಣ ಶಕ್ತಿಯನ್ನು, ಲೋಭ ಪ್ರವೃತ್ತಿಯನ್ನು ಹತ್ತಿರಕ್ಕೆ ಕರೆಯಬಾರದೆಂದು ತಿಳಿದುಕೊಂಡೆನು ಎಂದು ದತ್ತಾತ್ರೇಯರು ಹೇಳಿದರು.

## 22. ಪಾರಿವಾಳ

ಒಂದು ಪಾರಿವಾಳವು ಒಂದು ಮರದ ಮೇಲೆ ಗೂಡು ಕಟ್ಟಿಕೊಂಡು ಹೆಣ್ಣು ಪಾರಿವಾಳವನ್ನು ಜೊತೆ ಮಾಡಿಕೊಂಡಿತು. ಎರಡು ಪಕ್ಷಿಗಳು ಅನನ್ಯವಾಗಿ ಜೀವಿಸತೊಡಗಿದವು. ಅವು ಮೊಟ್ಟೆ ಇಟ್ಟು, ಹುದುಗಿಸಿ ಮರಿಗಳನ್ನು ಸಾಕತೊಡಗಿದವು. ಆ ಮರಿಗಳಿಗಾಗಿ ಅವು ದಿನವೆಲ್ಲಾ ಶ್ರಮಿಸಿ ಆಹಾರವನ್ನು ತಂದು ಅವುಗಳನ್ನು ಪೋಷಿಸಿ ಬೆಳಸಿದವು. ಮರಿ ಪಕ್ಷಿಗಳು ಆ ಮರದ ಕೆಳಗೆ ಬಂದು ಆಡುತ್ತಾ ಒಬ್ಬ ಬೇಟೆಗಾರನ ಬಲೆಯಲ್ಲಿ ಸಿಕ್ಕಿಬಿದ್ದವು. ಮರಿಗಳನ್ನು ಬಿಡಿಸಲು ಹೋಗಿ ಹೆಣ್ಣು ಪಕ್ಷಿಯು ಬೇಟೆಗಾರನ ಬಲೆಯಲ್ಲಿ ಸಿಕ್ಕಿಕೊಂಡಿತು. ಗಂಡು ಪಾರಿವಾಳವು ಬಂದು ಗೂಡಿನಲ್ಲಿ ಹೆಂಡತಿ ಮಕ್ಕಳು ಇಲ್ಲದ್ದನ್ನು ನೋಡಿ, ಅವುಗಳ ವಿಯೋಗ ಭಾದೆಯನ್ನು ಭರಿಸಲಾಗದೆ ತಾನು ಕೂಡ ಬಲೆಯಲ್ಲಿ ಸಿಕ್ಕಿ ಬಿದ್ದಿತು. ಪರಿವಾಳವನ್ನು ಬಿಟ್ಟು ಹೋಗಲಾರದೆ, ಅವುಗಳನ್ನು ಬಿಡಿಸಬೇಕೆಂದು ಪ್ರಯತ್ನಿಸಿ ತಾನೂ ಕೂಡ ಬಲೆಯಲ್ಲಿ ಬಿದ್ದಿತು. ಆಗ ಆ ಪಾರಿವಾಳವು ಹೀಗೆ ರೋದಿಸಿತು. ಹುಟ್ಟಿದಾಗಿನಿಂದ ಸ್ವೇಚ್ಛಾವಿಹಾರಿಯಾದ ನಾನು ಸ್ತ್ರೀ ವ್ಯಾಮೋಹದಲ್ಲಿ ಬಿದ್ದು, ಈ ಬಲೆಯಲ್ಲಿ ಸಿಕ್ಕಿ ಬಿದ್ದೆನು. ಈಗ ನನ್ನನ್ನು ರಕ್ಷಿಸುವವರಾರು? ಎಂದು ಅಂದುಕೊಂಡಿತು.

ಈ ಪಾರಿವಾಳಗಳಿಂದ ದತ್ತಾತ್ರೇಯರು ಏನು ಕಲಿತುಕೊಂಡರು ಎಂದರೆ? ಮಾನವನು ಹೆಂಡತಿ–ಮಕ್ಕಳು ಬಗ್ಗೆ ಮಮಕಾರವನ್ನು ಬೆಳೆಸಿಕೊಂಡರೆ ಸಂಸಾರವೆಂಬ ಬಲೆಯಲ್ಲಿ ಸಿಕ್ಕಿಕೊಂಡು ತನ್ನ ಜೀವನ ಲಕ್ಷ್ಯವಾದ ಮೋಕ್ಷ ಸಾಧನೆಯನ್ನು ಮರೆತು ಹೋಗುತ್ತವೆ ಎಂದು ಕಲಿತುಕೊಂಡೆ ಎಂದು ಹೇಳಿದರು. ಆದ್ದರಿಂದ ಹಾಗೆ ಮಾಡಬಾರದೆಂದು ತಿಳಿದುಕೊಂಡೆನು ಎಂದು ಹೇಳಿದ್ದಾರೆ.

## 23 ಕುರರ

ಕುರರ ಎಂಬ ಪಕ್ಷಿ ಕೆಲವು ಮಾಂಸದ ತುಂಡುಗಳನ್ನು ತಂದುಕೊಂಡು ಗೂಡಿನಲ್ಲಿ ಬಚ್ಚಿಡುತ್ತದೆ. ಅವುಗಳನ್ನು ಕಾಪಾಡುವುದಕ್ಕಾಗಿ ನಿದ್ರೆ ಆಹಾರಗಳನ್ನು ಬಿಟ್ಟು ಕಾವಲು ಕಾಯುತ್ತದೆ. ಒಂದು ದಿನ ಆ ಮರದ ಮೇಲಿದ್ದ ಇತರ ಪಕ್ಷಿಗಳು ಆಹಾರವು ದೊರಕದೆ ಆ ಕುರರದ ಗೂಡಿಗೆ ತೂರಿ ಅದರೊಂದಿಗೆ ಕಾದಾಡಿ ಅದರ ಮಾಂಸದ ತುಂಡುಗಳನ್ನು ತೆಗೆದುಕೊಂಡು ಹೋದವು. ಆಗಿನಿಂದ ಆ ಕುರರ ಪಕ್ಷಿಯು ನಿಶ್ಚಿಂತೆಯಾಗಿ ಇರತೊಡಗಿತು. ಸಿಕ್ಕಿದನ್ನೇ ತಿನ್ನುತ್ತಾ ಏನನ್ನು ಬಚ್ಚಿಟ್ಟುಕೊಳ್ಳದೆ ಪರಮ ಶಾಂತಿಯನ್ನು ಹೊಂದಿತು. ಇದರಿಂದ ದತ್ತಾತ್ರೇಯರು ಏನು ತಿಳಿದುಕೊಂಡರು ಎಂದರೆ? ಸಂಗ್ರಹಿಸಿಕೊಂಡು ಬಚ್ಚಿಟ್ಟುಕೊಳ್ಳುವುದು ದುಃಖಕರವಾದದ್ದು. ಆದ್ದರಿಂದ ನನ್ನದು ಏನು ಇಲ್ಲದೆ ಹೋದರೆ ನಾನು ಪರಮ ಸುಖವಾಗಿ ಸಂತೋಷವಾಗಿ ಇರಬಲ್ಲೆನು ಎಂದು ತಿಳಿದುಕೊಂಡೆನು ಎಂದ ದತ್ತಾತ್ರೇಯರು ಹೇಳಿದ್ದಾರೆ.

## 24 ಕನ್ಯೆ

ಒಬ್ಬ ಕನ್ಯೆಯ ತಂದೆ ತಾಯಿಯರು ಬೇರೆ ಗ್ರಾಮಕ್ಕೆ ಹೋದರು. ಆ ಸಮಯದಲ್ಲಿ ಅತಿಥಿಗಳು ಬಂದರು. ಅಡುಗೆ ಅಕ್ಕಿಯು ಇರಲಿಲ್ಲವಾದ್ದರಿಂದ ಆಕೆ ಸ್ವಲ್ಪ ಭತ್ತವನ್ನು ಕುಟ್ಟಬೇಕಾಯಿತು. ಅವರು ಧ್ಯಾನ ಮಾಡಿಕೊಳ್ಳುತ್ತಿದ್ದಾರೆ. ಪರಿಸ್ಥಿತಿ ಅತಿಥಿಗಳಿಗೆ ತಿಳಿಯಬಾರದೆಂದು ಅಂಗಳದಲ್ಲಿ ಧಾನ್ಯವನ್ನು ಕುಟ್ಟುತ್ತಿದ್ದರೆ ಬಳೆಯ ಶಬ್ಧವು ಕೇಳಿಸಬಾರದೆಂದು ಎರಡೇ ಬಳೆಗಳನ್ನು ಹಾಕಿಕೊಂಡು ಉಳಿದವನ್ನು ತೆಗೆದುಬಿಟ್ಟಳು. ಆಕೆಯು ನೆಮ್ಮದಿಯಾಗಿ ಕೆಲಸ ಮುಗಿಸಿಕೊಂಡಳು.

ಈಕೆಯಿಂದ ದತ್ತಾತ್ರೇಯರು ಕಲಿತದ್ದು ಏನೆಂದರೆ? ಧ್ಯಾನ ಮಾಡುವಾಗ

ಯಾವುದೇ ತರಹದ ಶಬ್ಧಗಳು ಇರಬಾರದೆಂದು ತಿಳಿದುಕೊಂಡೆನು. ಏಕಾಂತವೆ, ನಿಶ್ಯಬ್ಧವೆ ಧ್ಯಾನ ಸಿದ್ಧಿಗೆ ಮಾರ್ಗವೆಂದು ತಿಳಿದುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

## ವೃಕ್ಷಗಳು

ಅಷ್ಟೇ ಅಲ್ಲ, ನಾನು ವೃಕ್ಷಗಳಿಂದ ಕೂಡ ಎಷ್ಟೋ ಕಲಿತುಕೊಂಡೆನು ಎಂದು ಅವರು ಹೇಳಿದರು.

ವೃಕ್ಷಗಳು ಇಲ್ಲದಿದ್ದರೆ 84 ಲಕ್ಷ ಜೀವರಾಶಿಗೆ ಆಹಾರವೆ ಇರದು. ಹಾಗೆ ನೋಡಿದರೆ ಕೆರೆಯಲ್ಲಿಯ ಪಾಚಿ ಕೂಡ ಮೀನುಗಳಿಗೆ ಆಹಾರ. ಹಾಗೆ ಎಲ್ಲರಿಗೆ ಆಹಾರ ಕೊಡುವುದು ಜೀವನ ಕೊಡುವುದು ವೃಕ್ಷ ಜಾತಿಯ ಲಕ್ಷಣ. ಹಾಗೆ ವೃಕ್ಷ ಜಾತಿ ಲೋಕಕ್ಕೆ ಎಷ್ಟೋ ಉಪಯೋಗವಾಗಿದೆ.

ಅಷ್ಟೇ ಅಲ್ಲ, ಒಣಗಿದ ಮರದಿಂದಲೂ ಕಟ್ಟಿಗೆ ಮಾನವರಿಗೆ ಓಲೆ ಉರಿಯುದಕ್ಕೆ ಉಪಯೋಗವಾಗುತ್ತದೆ. ಅಷ್ಟೇ ಅಲ್ಲ ವೃಕ್ಷಗಳ ಕಾಂಡವನ್ನು ಮಾನವರು ಬಾಗಿಲು, ಕಿಟಕಿ, ಬೀರುವಾಗಳನ್ನಾಗಿ ಎಷ್ಟೋ ವಿಧವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹಾಗೆ ಮಾನವನು ಸಹ ಲೋಕಕ್ಕೆ ಉಪಯೋಗವಾಗಬೇಕೆಂದು ನಾನು ಕಲಿತೆನು ಎಂದು ದತ್ತಾತ್ರೇಯರು ಹೇಳಿದ್ದಾರೆ. ಅಂದರೆ ಒಂದು ಮರ ಬದುಕಿದ್ದರೂ ಒಣಗಿದರೂ ಜೀವ ಜಾತಿಗೆ ಏನೋ ಒಂದು ಕೊಟ್ಟು ಉಪಯೋಗವಾಗುತ್ತದೆ.

ಅಷ್ಟೇ ಅಲ್ಲ ಮಾನವರು, ಜಂತುಗಳು ಹೊರಗೆ ಹಾಕಿದ ಇಂಗಾಲದ ಡೈ ಆಕ್ಸೈಡ್ ತೆಗೆದುಕೊಂಡು ಆ ಜೀವಿಗಳಿಗೆ ಉಪಯೋಗವಾಗುವ ಆಮ್ಲಜನಕವನ್ನು ವೃಕ್ಷಗಳು ಕೊಡುತ್ತಿವೆ. ಅಂದರೆ ಮಾನವರಿಗೆ ಉಪಯೋಗವಿಲ್ಲದ ಇಂಗಾಲದ ಡೈ ಆಕ್ಸೈಡ್‌ನ್ನು ತೆಗೆದುಕೊಂಡು ಆಮ್ಲಜನಕವಾಗಿ ಬದಲಾಯಿಸಿ ಮತ್ತೆ ಮಾನವರಿಗೆ, ಜೀವಿಗಳಿಗೆ ವೃಕ್ಷ ಜಾತಿ ಕೊಡುತ್ತಿದೆ.

ಅಷ್ಟೇ ಅಲ್ಲ ವೃಕ್ಷಗಳು ಎಲ್ಲಾ ರೀತಿಯ ಜೀವಿಗಳಿಗೆ ನೆರಳನ್ನು ಕೊಡುತ್ತವೆ. ಆ ನೆರಳಿನಲ್ಲಿ ಮಾನವರು, ಎಷ್ಟೋ ಜಾತಿಯ ಜೀವಿಗಳು ಎಷ್ಟೋ ಆಯಾಸವನ್ನು ತೀರಿಸಿಕೊಳ್ಳುತ್ತವೆ, ವಿಶ್ರಾಂತಿ ಪಡೆಯುತ್ತವೆ. ಅಷ್ಟೇ ಅಲ್ಲ ಗಿಡ–ಮರಗಳು ಅನೇಕ ರೀತಿಯ ಪಕ್ಷಿಗಳಿಗೆ, ಕೀಟಗಳಿಗೆ ಆವಾಸ ಸ್ಥಾನವಾಗಿ ಉಪಯೋಗವಾಗಿವೆ.

ಮಾನವರು ಕಲ್ಲಿನಿಂದ ಹೊಡೆದರು, ಕಡಿದರೂ ಏನು ಭಾದೆ ಬೀಳುವುದಿಲ್ಲ ಎಲ್ಲರಿಗೆ ಉಪಯೋಗವಾಗುತ್ತಿದ್ದೇನೆ ಎಂದು ಆತ್ಮಾರ್ಪಣೆ ಮಾಡಿಕೊಳ್ಳುತ್ತವೆ. ಹಾಗೆ ವೃಕ್ಷಗಳಿಂದ, ಗಿಡಗಳಿಂದ ಎಷ್ಟೋ ಕಲಿತೆನು ಎಂದು ದತ್ತಾತ್ರೇಯರು ಹೇಳಿದರು.

ಹಾಗೆಯೇ ದತ್ತಾತ್ರೇಯರು ಪ್ರಕೃತಿಯಿಂದ ಅಂತ್ಯವಿಲ್ಲದ ಜ್ಞಾನವನ್ನು ಸಂಪಾದಿಸಿಕೊಂಡರು, ಅವರು ಭೂಮಿಯ ಮೇಲೆ ಸಂಚರಿಸಿದಾಗ ಮಾತ್ರವಲ್ಲದೆ ಇಲ್ಲದಿರುವಾಗಲು ಕೂಡಾ ಎಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ.

ಹಾಗೆ ಪ್ರತಿಯೊಂದನ್ನು ಪ್ರಕೃತಿಯಿಂದ ಕಲಿತುಕೊಳ್ಳುವುದು ಎನ್ನುವುದನ್ನು ನಾವು ದತ್ತಾತ್ರೇಯರಿಂದ ಕಲಿಯಬಹುದು. ಅದಕ್ಕೆ ನಮ್ಮ ಋಷಿಗಳು ಏನು ಹೇಳಿದ್ದಾರೆ ಎಂದರೆ ಪ್ರಕೃತಿಯನ್ನು ನೋಡಿ ಪಾಠಗಳನ್ನು ಕಲಿಯಿರಿ ಎಂದರು, ಅಷ್ಟೇ ಅಲ್ಲ ಮರಗಳು ಬೆಳೆಯುತ್ತಾ ನಿಧಾನವಾಗಿ ಹೂ, ಕಾಯಿ, ಹಣ್ಣುಗಳನ್ನು ಕೊಡುತ್ತವೆ. ಆ ಹಣ್ಣಿನಿಂದ ಬೀಜಗಳು ಸಿಗುತ್ತವೆ. ಅವು ಭೂಮಿಗೆ ಬಿದ್ದು ಪುನಃ ಗಿಡಮರಗಳಾಗಿ ಬೆಳೆಯುತ್ತವೆ.

ಹಾಗೇ ಜೀವನು ಅಂದರೆ ಮಾನವನು ಶರೀರದಿಂದ ಸಾಧನೆ ಮಾಡಿ ಪರಮಾತ್ಮನನ್ನು ಸೇರಿಕೊಳ್ಳಬೇಕೆಂಬ ಆಶಯದೊಂದಿಗೆ ಭೂಮಿಯ ಮೇಲೆ ಬರುವನು. ಆದರೆ ಬಂದ ಮೇಲೆ, ತಾನು ಭೂಮಿಗೆ ಏಕೆ ಬಂದೆನು ಎಂದು ತಿಳಿದುಕೊಳ್ಳದೆ ಯಾವ ಕೆಲಸ ಮಾಡಲು ಬಂದಿದ್ದೇನೋ ಎಂದು ತಿಳಿಯದೆ, ಬಂದ ಕೆಲಸ ಮರೆತು ಬಂಧನಗಳಿಗೆ ಸೆರೆಯಾಗುತ್ತಿದ್ದಾನೆ.

ಬಂಧನಗಳು ಎಂದರೆ ಇಂದ್ರಿಯ ಸುಖಗಳು, ಶರೀರಕ್ಕೆ ಹೆಂಡತಿ ಮಕ್ಕಳಿಗೆ ಸಂಸಾರಕ್ಕೆ, ಸಮಾಜಕ್ಕೆ ಮಹತ್ವ ಕೊಟ್ಟು ಅವರಿಗಾಗಿ ಎಷ್ಟೋ ಕರ್ಮಗಳನ್ನು ಮಾಡುತ್ತಾ, ಆ ಕರ್ಮ ಫಲಗಳನ್ನು ಅನುಭವಿಸುವುದಕ್ಕಾಗಿ ಮತ್ತೆ, ಮತ್ತೆ ಜನ್ಮ ತೆಗೆದುಕೊಳ್ಳುತ್ತಾನೆ. ಮತ್ತೆ ಕರ್ಮಗಳನ್ನು ಮಾಡುತ್ತಾನೆ. ಹಾಗೆ ಜನ್ಮಗಳನ್ನು ತೆಗೆದುಕೊಳ್ಳುವುದು ಬರುವುದು, ಹೋಗುವುದು, ಅಂದರೆ "ಪುನರಪಿ ಜನನಂ" "ಪುನರಪಿ ಮರಣ"ವಾಗಿ ನಡೆಯುತ್ತದೆ.

ಇವನ್ನೆಲ್ಲಾ ನೋಡುತ್ತಿದ್ದರೆ ನನಗೇನು ಅನಿಸುತ್ತದೆ ಎಂದರೆ? ಮಾನವನ್ನು ಶರೀರವನ್ನು ತೆಗೆದುಕೊಂಡು, ಇಷ್ಟು ಅವಸ್ಥೆ ಬೀಳುವುದಕ್ಕಿಂತ! ಶರೀರ ಇರುವಾಗಲೇ ಪರಮೇಶ್ವರನನ್ನು ಅಂದರೆ ಭಗವಂತನನ್ನು ತಿಳಿದುಕೊಂಡರೆ? ಮೋಕ್ಷವನ್ನೇ ಹೊಂದಬಹುದಲ್ಲವೆ? ಅಂದರೆ ಶರೀರಧಾರಣೆ ಮಾಡದಂತೆ

ಮಾಡಿಕೊಳ್ಳಬಹುದಲ್ಲವೇ? ಎಂದು ತಿಳಿದುಕೊಂಡೆನು ಎನ್ನುತ್ತಾರೆ ದತ್ತಾತ್ರೇಯರು.

## ಶರೀರ

ದತ್ತಾತ್ರೇಯರು ಶರೀರದಿಂದಲೂ ಕೂಡಾ ಏನನ್ನು ತಿಳಿದುಕೊಂಡೆನು ಎಂಬುದನ್ನು ಹೇಳಿದ್ದಾರೆ. ಈ ಶರೀರ ಅಂತ್ಯ, ಅಶಾಶ್ವತ ಪಂಚಭೂತಗಳಿಂದ ತಯಾರಾದ ಈ ಶರೀರ ಮರಣಿಸಿದ ನಂತರ ಸುಟ್ಟು ಬೂದಿಯಾಗುತ್ತದೆ. ಇಲ್ಲಾ ಯಾವುವೋ ಕ್ರಿಮಿಕೀಟಗಳಿಗೆ ಆಹಾರವಾಗುತ್ತದೆ. ಹೀಗೆ ಈ ಸೃಷ್ಟಿಯಲ್ಲಿ ಯಾವುದು ಶಾಶ್ವತವಲ್ಲ. ಸೃಷ್ಟಿಸಲ್ಪಟ್ಟವೆಲ್ಲವೂ ಕೂಡಾ ನಶಿಸಿ ಹೋಗುವಂತಹವೆ ಎಂದು ಶರೀರದಿಂದ ನಾನು ತಿಳಿದುಕೊಂಡೆನು ಎಂದು ದತ್ತಾತ್ರೇಯರು ಹೇಳಿದ್ದಾರೆ.

ಭಗವಂತನು ಎಷ್ಟೋ ಜೀವಿಗಳನ್ನು ಸೃಷ್ಟಿಸಿ, ತೃಪ್ತಿಯಾಗದೆ ಕೊನೆಯಲ್ಲಿ ಮಾನವನ ಶರೀರವನ್ನು ಸೃಷ್ಟಿಸಿದನು. ಆದರೆ ಇತರ ಜೀವಿಗಳಿಗೆ ಬುದ್ದಿಯು ಇಲ್ಲದ ಕಾರಣ, ಪರಮಾತ್ಮನನ್ನು ತಿಳಿಯಲಾರವು. ಆದರೆ ಮಾನವ ಶರೀರವಿರುವ ಮಾನವರಿಗೆ ತನ್ನನ್ನು ತಾನು ತಿಳಿದುಕೊಳ್ಳಲು ಬುದ್ಧಿಯನ್ನು ಪ್ರಸಾದಿಸಲಾಗಿದೆ. ಈ ಬುದ್ಧಿಯಿಂದಲೇ ಮಾನವನು ಪರಮಾತ್ಮನನ್ನು ತಿಳಿದುಕೊಳ್ಳಬಲ್ಲವನಾಗಿದ್ದಾನೆ. ಆದಕಾರಣ ಮಾನವ ಶರೀರದ ಶ್ರೇಷ್ಠತೆಯನ್ನು ತಿಳಿದುಕೊಂಡೆನು ಎನ್ನುತ್ತಾರೆ ದತ್ತಾತ್ರೇಯರು.

ಅದಕ್ಕೆ ಬುದ್ಧಿವಂತನಾದವನು ಈ ಶರೀರದಿಂದ ಸಾಧನೆ ಮಾಡಿ, ಜ್ಞಾನವನ್ನು ಪಡೆದು ಆ ಪರಮಾತ್ಮನನ್ನು ತಿಳಿಯಬೇಕು ಎಂದು ನಾನು ಕಲಿತೆನು. ಆದರೆ ಬಹಳ ಜನ ಈಗಲೇ ಮೋಕ್ಷವೇತಕ್ಕೆ? ಎಂದು ಕೊಳ್ಳುತ್ತಾರೆ. ಅವರಿಗೆ ಧ್ಯಾನವು ಬಾಲ್ಯದಲ್ಲಿ ಕಲಿಸಿದರೆ ಒಳ್ಳೆಯದು ಎಂದು ಹೇಳಿದರೂ, ಈಗಿನಿಂದಲೇ ಏತಕ್ಕೆ? ಇನ್ನೂ ಬಹಳ ಸಮಯವಿದೆಯಲ್ಲ ಎಂದು ಅನ್ನುತ್ತಾರೆ. ಆದರೆ ಧ್ಯಾನ ಚಿಕ್ಕಂದಿನಿಂದಲೇ ತಿಳಿದುಕೊಳ್ಳಬೇಕು, ಚಿಕ್ಕಂದಿನಿಂದಲೆ ಧ್ಯಾನವನ್ನು ಕಲಿತರೆ ಅವರ ಪ್ರವರ್ತನೆ ಉತ್ತಮವಾಗಿರುತ್ತದೆ, ಎಷ್ಟೊಂದು ಜ್ಞಾನವನ್ನು ಕಲಿಯುತ್ತಾರೆ. ಆದಕಾರಣ ಯಾರಾದರಾಗಲಿ ಸರಿ ಈ ಭೂಮಿಯ ಮೇಲೆ ಶರೀರವು ಇರುವಾಗಲೆ ತಿಳಿಯಲು ಪ್ರಯತ್ನಿಸಿದರೆ ಇನ್ನು ಜನ್ಮರಾಹಿತ್ಯ ಮೋಕ್ಷ ಸ್ಥಿತಿಯನ್ನು ಹೊಂದಬಹುದು. ಇದನ್ನು ತಿಳಿದವರು ಬಹಳ ಧನ್ಯರು.

ಆದ್ದರಿಂದ ಹಿರಿಯರಿಂದ, ಯೋಗಿಗಳಿಂದ ಅಲ್ಲದೆ, ಪ್ರಕೃತಿಯಿಂದ ಕೂಡಾ

ದತ್ತಾತ್ರೇಯರಂತೆ ಕಲಿಯುತ್ತಾ ಇರಬೇಕು. ಅದಕ್ಕೆ ಪತ್ರೀಜಿಯವರು ಪ್ರತಿಯೊಬ್ಬರಿಂದ ಕಲಿತುಕೊಳ್ಳಬೇಕೆಂದು ಹೇಳುತ್ತಾರೆ.

ಹಾಗಾದರೆ ಏಕೆ ಕಲಿತುಕೊಳ್ಳಲಾಗುತ್ತಿಲ್ಲ? ಅಂದರೆ ಅಜ್ಞಾನ, ಅಹಂಕಾರದ ಕಾರಣದಿಂದ ಅವರಿಂದ ಕಲಿತುಕೊಳ್ಳುವುದೇನು? ನನಗೆ ಎಲ್ಲ ಗೊತ್ತು ಎನ್ನುವ ಅಹಂಕಾರ. ಅಷ್ಟೇ ಅಲ್ಲ ಹೆಂಡತಿ ಮಕ್ಕಳ ಮೇಲೆ ದೃಷ್ಟಿ ಇಡುವುದಕ್ಕೆ ಸಮಯವನ್ನು ವ್ಯಯಿಸುವುದರಿಂದ ಕೂಡಾ ಜ್ಞಾನ ಕಲಿಯಲಾಗುತ್ತಿಲ್ಲ.

ಮನಸ್ಸು ಎಷ್ಟು ಹಣವಿರುತ್ತದ್ದೋ, ಎಷ್ಟೊಂದು ಪದವಿಗಳು ಇದ್ದರೆ ಅಷ್ಟು ಶ್ರೇಷ್ಠನು ಎಂದುಕೊಳ್ಳುತ್ತದೆ. ಅಷ್ಟೇ ಅಲ್ಲ ಪ್ರಾಪಂಚಿಕವಿದ್ಯೆ ಬಹಳ ಶ್ರೇಷ್ಠವೆಂದು ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆಧ್ಯಾತ್ಮಿಕ ವಿದ್ಯೆಯನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ.

## ರಮಣ ಮಹರ್ಷಿ

ರಮಣ ಮಹರ್ಷಿಗಳನ್ನು ನೋಡಿ, ಅವರು ಯಾವ ಓದು ಓದಲಿಲ್ಲ. ಆದರೆ ಆ ಪರಮಾತ್ಮನನ್ನು ಕುರಿತು ತಿಳಿದುಕೊಳ್ಳುವ ವಿದ್ಯೆಯನ್ನು ಓದಿದರು. ಅದೇ ಪರಾವಿದ್ಯೆ, ಅಂದರೆ ಪರಮಾತ್ಮನ ಕುರಿತು ಇರುವ ವಿದ್ಯೆ, ಅಂದರೆ ಆತ್ಮವಿದ್ಯೆ ಎಂದುಕೊಂಡರು.

ಪರಮಾತ್ಮನನ್ನು ಸೇರಬೇಕೆಂದರೆ ಈ ಶರೀರದಿಂದ ಪ್ರಾಪಂಚಿಕ ಡಿಗ್ರಿಗಳನ್ನು ಸಂಪಾದಿಸಿದರೆ ಸಾಧ್ಯವಾಗುವುದಿಲ್ಲ. ಯಾರಾದರೂ ಧ್ಯಾನ ಸಾಧನೆ ಮಾಡುತ್ತಾರೋ ಅವರಿಗೆ ಇದು ಸಾಧ್ಯ. ಆದಕಾರಣ ಇರುವುದರಿಂದಲೆ ತೃಪ್ತಿ ಪಡುತ್ತಾ, ಇತರ ಜೀವಿಗಳಿಗೆ ಹಿಂಸಿಸದೆ ಜೀವಿಸಬೇಕು.

ಪಕ್ಷಿಗಳನ್ನು, ಜಂತುಗಳನ್ನು, ಮೀನುಗಳನ್ನು ಸಾಯಿಸಿ ತಿನ್ನುವುದಲ್ಲ, ಅವು ಕೂಡಾ ಬದುಕುವುದಕ್ಕೆ ಭೂಮಿಯ ಮೇಲೆ ಬಂದಿವೆ. ಆದ್ದರಿಂದ ಸಸ್ಯಗಳಿಂದ ತರಕಾರಿಗಳಿಂದ, ಹಣ್ಣುಗಳಿಂದ ತೃಪ್ತಿ ಪಡಬೇಕು.

## ಸೃಷ್ಟಿ ಕರ್ತನ ಸಹಾಯ

ಸೃಷ್ಟಿ ಕರ್ತನು ಮಾನವರನ್ನು ಸೃಷ್ಟಿಸುವ ಮೊದಲೆ ಮಾನವರಿಗೆ ಬೇಕಾದ ಆಹಾರವನ್ನು ಎಲ್ಲಾ ಸೃಷ್ಟಿಯಲ್ಲಿ ಸಿದ್ಧಮಾಡಿ ಇಟ್ಟಿದ್ದಾನೆ. ಯಾರನ್ನೂ ಉಪವಾಸವಿರಿಸುವುದಿಲ್ಲ.

ಒಂದು ಸಾರಿ ವಿವೇಕಾನಂದರು ಒಂದು ಊರಿಗೆ ಹೋದಾಗ ರೈಲು ಇಳಿಯುವ ಹೊತ್ತಿಗೆ ರಾತ್ರಿ 10.00 ಗಂಟೆ ಆಯಿತು.

ಅವರು ಬಹಳ ಹಸಿವಿನಿಂದ ಇದ್ದರು. ಇಂತಹ ರಾತ್ರಿ 10.00 ಗಂಟೆಗೆ ಯಾರ ಮನೆಗೆ ಹೋಗಬೇಕು? ಯಾರು ನನಗೆ ಗೊತ್ತಿಲ್ಲವಲ್ಲ? ಎಂದು ರೈಲ್ವೆ ಸ್ಟೇಷನ್ನಿನಲ್ಲಿರುವ ಸೋಫಾದಲ್ಲಿ ಕುಳಿತು ಧ್ಯಾನ ಮಾಡಿಕೊಳ್ಳುತ್ತಾ ಇದ್ದಾನೆ. ಆಗ ಸ್ಟೇಷನ್ ಮಾಸ್ಟರ್ ಒಂದು ಲ್ಯಾಟಿನ ಜೊತೆ ಊಟವನ್ನು ಹಿಡಿದು ತಂದನು.

ಆಗ ವಿವೇಕಾನಂದನು ನಾನು ಉಪವಾಸ ಇದ್ದೇನೆಂದು ನಿಮಗೆ ಹೇಗೆ ಗೊತ್ತು? ನೀವು ನನ್ನನ್ನು ಹುಡುಕುತ್ತಾ ಬಂದಿದ್ದೀರೇನು? ಎಂದು ಸ್ಟೇಷನ್ ಮಾಸ್ಟರನ್ನು ಕೇಳಿದರು.

ಆಣ ಆತನು, ನಾನು ಮಲಗಿದಾಗ ರಾಮನು ಕನಸಿನಲ್ಲಿ ಬಂದು ಅಲ್ಲಿ ಸ್ಟೇಷನ್ನಿನಲ್ಲಿ ಒಬ್ಬ ಯೋಗಿ ಧ್ಯಾನದಲ್ಲಿ ಕುಳಿತಿದ್ದಾನೆ. ಹಸಿವಿನಿಂದ ಇದ್ದಾನೆ. ಊಟವನ್ನು ತೆಗೆದುಕೊಂಡು ಹೋಗಿ ಆತನಿಗೆ ಕೊಡು ಎಂದು ಹೇಳಿದನಂತೆ. ಆದ್ದರಿಂದ ನಾನು ಊಟವನ್ನು ತೆಗೆದುಕೊಂಡು ಬಂದೆನು ಎಂದನು.

ಇಲ್ಲಿ ಗುರುತಿಟ್ಟುಕೊಳ್ಳಬೇಕಾಗಿರುವುದು, ಒಬ್ಬ ಯೋಗಿ ಊಟ ಮಾಡದೆ ಇದ್ದರೆ ಪರಮಾತ್ಮ ಯಾವುದೋ ಒಂದು ರೂಪದಲ್ಲಿ ಆ ಭೋಜನವನ್ನು ತಂದು ಕೊಡುವುದು ಆಗುತ್ತದೆ.

ಆದ್ದರಿಂದ ತಿಳಿದುಕೊಳ್ಳಿ ಭಗವಂತನ ಮಾರ್ಗದಲ್ಲಿ ಬಂದವರು ಪ್ರಕೃತಿಯನ್ನು ಗೌರವಿಸುತ್ತಾ, ಪರಮಾತ್ಮನ ಮೇಲೆ ನಂಬಿಕೆಯಿಂದ ಇದ್ದರೆ ಅವರಿಗೆ ಯಾವ ಕೊರತೆಯು ಇರುವುದಿಲ್ಲ.

ಸಹಜವಾಗಿ ಎಲ್ಲರೂ ಏನೆಂದುಕೊಳ್ಳುತ್ತಾರೆಂದರೆ ವ್ಯಾಪಾರವನ್ನು ಬಿಟ್ಟು ಬಿಟ್ಟರೆ, ಈ ಉದ್ಯೋಗವನ್ನು ಬಿಟ್ಟರೆ ಹೇಗೆ ಬದುಕುತ್ತೇವೆ? ಎಂದು ಅಂದುಕೊಳ್ಳುತ್ತಾರೆ. ಆದರೆ ಏನು ಆಗದು, ಧರ್ಮಕ್ಕಾಗಿ ಸಂಪಾದಿಸಿ 10 ಮಂದಿಗೆ ಇಡುತ್ತಾ, ತಾನು ತಿನ್ನುತ್ತಿದ್ದರೆ ಅವರಿಗೆ ಯಾವ ಕೊರತೆಯು ಇರುವುದಿಲ್ಲ.

ಆದ್ದರಿಂದ ಧ್ಯಾನ ಮಾಡುವ ಯೋಗಿ ಯಾವಾಗಲೂ ತ್ರಿಕರಣ ಶುದ್ಧಿಯಾಗಿ ಸಾಧನೆ ಮಾಡುತ್ತಾ, ಧ್ಯಾನ ಮಾರ್ಗದಲ್ಲಿ ಇದ್ದಾಗ, ಪ್ರಕೃತಿ ಎಂದಿಗೂ ಉಪವಾಸ ಇರಗೊಡುವುದಿಲ್ಲ. ಯಾವುದೋ ರೀತಿಯಲ್ಲಿ ಬೇಕಾದವುಗಳನ್ನು ಒದಗಿಸುತ್ತದೆ.

# ಸ್ವಾಮಿ ರಾಮ ತೀರ್ಥ

ಹಾಗೆಯೇ ಸ್ವಾಮಿ ರಾಮತೀರ್ಥರ ಜೀವನದಲ್ಲಿ ಕೂಡಾ ಒಂದು ಸಂಘಟನೆ ಜರುಗಿತು. ರಾಮತೀರ್ಥ ಹಿರಿಯ ಪ್ರೊಫೆಸರ್ ಅವರು ಅಮೇರಿಕಾಗೆ ಕೂಡಾ ಹೋಗಿ ತಿರುಗಿ ಭಾರತಕ್ಕೆ ಬಂದರು. ರಾಮತೀರ್ಥರು ಬಂದ ಸಂಬಳವನ್ನು ಲೋಕಕ್ಕಾಗಿ ಹೊರಗೆ ಖರ್ಚು ಮಾಡುತ್ತಿದ್ದರು. ಹೆಂಡತಿ ಅವರೊಡನೆ ಬಂದ ಸಂಬಳವನ್ನೆಲ್ಲಾ ಖರ್ಚು ಮಾಡಿದರೆ, ನಾವು ಮಕ್ಕಳ ಪರಿಸ್ಥಿತಿ ಏನು? ಎಂದು ಕೇಳುತ್ತಿದ್ದರು. ಅವರು ಒಂದು ಮಾತು ಹೇಳುತ್ತಿದ್ದರು. "ವಿಶ್ವಕ್ಕಾಗಿ ನಾವು ಶ್ರಮಿಸಿದರೆ ವಿಶ್ವೇಶ್ವರನು ನನ್ನ ಮಕ್ಕಳನ್ನು ನೋಡಿಕೊಳ್ಳಲಾರೆನೆ? ಎಂದು ಹೇಳುತ್ತಿದ್ದರು. ಆತನ ಮಕ್ಕಳು ಆಮೇಲೆ ಉನ್ನತವಾದ ಸ್ಥಾನಗಳಲ್ಲಿ ಇದ್ದರಂತೆ.

ವಿಶ್ವಕ್ಕಾಗಿ ಕೆಲಸ ಮಾಡಿದರೆ, ವಿಶ್ವೇಶ್ವರನು ನಮ್ಮನ್ನು, ನಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂದು ತಿಳಿಯುವುದಕ್ಕಾಗಿ ನಿಮಗೆ ಈ ವಿಷಯವನ್ನು ಹೇಳಲಾಗಿದೆ.

ರಾಮತೀರ್ಥರ ಜೀವನದಲ್ಲಿ ನಡೆದ ಇನ್ನೊಂದು ಘಟನೆಯು ಕೂಡ ಇದೆ. ಅವರಿಗೆ 40 ವರ್ಷಗಳಾದಾಗ ಅವರಿಗೆ ವೈರಾಗ್ಯ ಬಂದಿತು. ಹಿಮಾಲಯಕ್ಕೆ ಹೋಗಿ ಧ್ಯಾನ ಮಾಡಿಕೊಂಡು, ಉಳಿದ ಜೀವನವನ್ನು ಕಳೆಯಬೇಕು ಎಂದು ಎಲ್ಲವನ್ನು ಮಾರಿ ಹೆಂಡತಿ ಮಕ್ಕಳಿಗೆ ಮಾಡಬೇಕಾದ ಏರ್ಪಾಟುಗಳನ್ನು ಮಾಡಿ ಸ್ವಲ್ಪ ಹಣವನ್ನು ತೆಗೆದುಕೊಂಡು ಹಿಮಾಲಯಕ್ಕೆ ಹೋದರು. ಗಂಗಾ ನದಿ ದಾಟಿ ದಂಡೆಯಲ್ಲಿ ಸೇರಿಕೊಂಡು ಅಲ್ಲಿ ಧ್ಯಾನ ಮಾಡಿಕೊಳ್ಳೋಣವೆಂದರೆ, ಅವರಿಗೆ ಒಂದು ಆಲೋಚನೆ ಬಂದಿತಂತೆ. ಹೌದು! ಭಗವಂತನಿಗಾಗಿ ನಾನು ಧ್ಯಾನವನ್ನು ಮಾಡುತ್ತಿರುವೆನಲ್ಲ? ಈ ಹಣವನ್ನು ನನಗಾಗಿ ಏಕೆ ಬಚ್ಚಿಟ್ಟುಕೊಳ್ಳಬೇಕು, ಈ ಹಣವು ಇರದಿದ್ದರೆ ಇನ್ನೂ ಒಳ್ಳೆಯದಲ್ಲವೆ? ಎಂದು ಬಟ್ಟೆಗಳು, ಸಾಮಾನುಗಳು ಎಲ್ಲಾ ಇರುವ ಮೂಟೆಯನ್ನು ಗಂಗಾನದಿಯಲ್ಲಿ ಬಿಸಾಡಿಬಿಟ್ಟರು. ಹೋಗಿ ಧ್ಯಾನದಲ್ಲಿ ಕುಳಿತರು. ಆಗ ಅವರ ಹತ್ತಿರ ಏನೂ ಇಲ್ಲ ಉಟ್ಟಿರುವ ಪಂಚೆ ಒಂದೆ ಇದೆ.

ಹಿಮಾಲಯಕ್ಕೆ ಸುತ್ತ ಮುತ್ತ ಸಣ್ಣ ಸಣ್ಣ ಕುಟೀರಗಳು ಇದ್ದವು. ಒಬ್ಬಾತನು ರಾಮತೀರ್ಥರ ಬಳಿ ಬಂದು. ತಿಂಡಿ ತಿನಿಸುಗಳನ್ನು ಅಲ್ಲೇ ಪಕ್ಕದಲ್ಲಿ ಇಟ್ಟು ಕುಳಿತುಕೊಂಡನು. ರಾಮತೀರ್ಥರು ಕಣ್ಣು ಬಿಟ್ಟೊಡನೆ ಆತನು ಮಾತನಾಡಿಸಿದನು.

ಸ್ವಾಮಿ ಕ್ಷೇಮವೇ? ಎಂದು.

ಆಗ ರಾಮತೀರ್ಥರು ನಾನು ಇಲ್ಲಿ ಇರುವೆನೆಂದು ನಿಮಗೆ ಹೇಗೆ ಗೊತ್ತು? ಇಲ್ಲಿಗೆ ಏಕೆ ಬಂದಿರಿ? ಎಂದು ಆತನನ್ನು ಕೇಳಿದರು.

ಬಂಡಿಯಲ್ಲಿ ಬಂದ ಆತನು ಸಣ್ಣ ಜಮೀನುದಾರನು. ಆತನು ಹೇಳಿದನು ರಾತ್ರಿ ಶ್ರೀರಾಮನು ನನ್ನ ಕನಸಿನಲ್ಲಿ ಬಂದು ಗಂಗಾ ನದಿ ತೀರದಲ್ಲಿ ಒಬ್ಬ ವ್ಯಕ್ತಿಯ ಸಾಧನೆ ಮಾಡುತ್ತಾ ಇದ್ದಾನೆ. ಆತನ ಬಳಿ ಇರುವ ಹಣವನ್ನು ಕೂಡಾ ಗಂಗಾ ನದಿಯಲ್ಲಿ ಎಸೆದು ಬಿಟ್ಟನು ಪರಮಾತ್ಮನೆ ನೋಡಿಕೊಳ್ಳುತ್ತಾನೆ ಎನ್ನುವ ನಂಬಿಕೆಯಿಂದ ಕುಳಿತಿದ್ದಾನೆ.

ಆದ ಕಾರಣ ನೀನೊಂದು ಬಾರಿ ಹೋಗಿ ಆತನನ್ನು ಭೇಟಿಯಾಗು ಎಂದು ಹೇಳಿದರು, ನಾನು ಬಂದೆನು ಸ್ವಾಮಿ ಎಂದು ಹೇಳಿದನು. ಈ ದಿನದಿಂದ ನಿಮ್ಮ ಸಾಧನೆ ನೀವು ಮಾಡಿಕೊಳ್ಳಿ. ಸರಿಯಾಗಿ ದಿನವೂ ನಿಮಗೆ ಬೇಕಾದ ಊಟವನ್ನು 2 ಹೊತ್ತು ನಾನೆ ಕಳುಹಿಸುತ್ತೇನೆ. ನೀವು ಎಷ್ಟು ದಿನವಾದರೂ ಸಾಧನೆ ಮಾಡಿಕೊಳ್ಳಿ ಎಂದರಂತೆ

ನೋಡಿದಿರಾ ಈ ಎರಡು ಸಂಘಟನೆಗಳು ನೋಡಿದರೆ ನಮಗೇನು ಅರ್ಥವಾಗುತ್ತದೆ. ನಾವು ಎಲ್ಲಾ ಅನುಮಾನಗಳನ್ನು ಬಿಟ್ಟು, ಯೋಗ ಮಾರ್ಗದಲ್ಲಿ ಇದ್ದು, ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ, ಆ ಪರಮಾತ್ಮನ ಮೇಲೆ ನಂಬಿಕೆಯಿಂದ ಇರುವಾಗ ಪ್ರಕೃತಿಯ ಮೂಲಕ ನಮ್ಮ ಯೋಗಕ್ಷೇಮಗಳು ನೋಡಿಕೊಳ್ಳಲು ಪರಮಾತ್ಮ ಯಾವಾಗಲೂ ಸಿದ್ದವಾಗಿ ಇರುತ್ತಾನೆ ಎಂದು ತಿಳಿಯಬೇಕು.

ಈ ವಿಷಯವೇ ಭಗವದ್ಗೀತೆಯಲ್ಲಿ 9ನೇ ಅಧ್ಯಾಯ 22 ಶ್ಲೋಕದಲ್ಲಿ ಶ್ರೀ ಕೃಷ್ಣನು ಏನು ಹೇಳಿದ್ದಾರೆಂದರೆ?

**ಶ್ಲೋಕ ॥ ಅನನ್ಯಾಶ್ಚಿಂತಯನ್ತೋಮಾಂ ಯೇಜನಾಃಪರ್ಯುಪಾಸತೆ**

**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮ ವಹಾಮ್ಯಹವ್.**

**(ಭ. ಗಿ. 9–22)**

**ತಾತ್ಪರ್ಯ :** ಯಾರಾದರೂ ಇತರೆ ಚಿಂತೆಗಳು ಇಲ್ಲದಂತೆ ನನ್ನನ್ನೇ ನಿಷ್ಠೆಯುಳ್ಳವರಾಗಿದ್ದವರ ಯೋಗಕ್ಷೇಮಗಳನ್ನು ನಾನು ನೋಡಿಕೊಳ್ಳುತ್ತೇನೆ ಎಂದರು.

## ರಾಮ ಲಕ್ಷಣರಿಗೆ ಕೊಟ್ಟ ಸಲಹೆ

ರಾಮನಿಗೆ ರಾವಣನಿಗೆ ಯುದ್ಧ ನಡೆಯುತ್ತಿರುವಾಗ, ರಾಮನು ಲಕ್ಷ್ಮಣನನ್ನು ಯುದ್ಧ ನೀತಿ ಎಂದರೆ ಏನು? ರಾವಣಾಸುರನ ಬಳಿಗೆ ಹೋಗಿ ಕಲಿತುಕೊಂಡು ಬಾ ಎಂದು ಹೇಳಿದನು.

ಆಗ ಲಕ್ಷ್ಮಣನು ಕೇಳುತ್ತಾನೆ, ಅಣ್ಣಯ್ಯ ರಾವಣಾಸುರನು ನಮ್ಮ ಶತೃವು ಅಲ್ಲವೆ? ಆತನ ಬಳಿಗೆ ನನ್ನನ್ನು ಕಳುಹಿಸುತ್ತಿರುವೆಯಲ್ಲ ಎಂದು ಕೇಳಿದರೆ! ಆಗ ರಾಮನು ಇಲ್ಲ, ಆತನು ಅಧರ್ಮವಾಗಿ ಏನು ಇರುವುದಿಲ್ಲ, ಯುದ್ಧ ನೀತಿಯನ್ನು ಹೇಳುತ್ತಾನೆ! ಹೋಗು ಎಂದನು.

ಆಗ ರಾವಣಾಸುರನು ಯುದ್ಧವೆಂದರೇನು? ಯುದ್ಧವನ್ನು ಹೇಗೆ ಮೊದಲು ಮಾಡಬೇಕು? ಹೇಗೆ ಮಾಡಬೇಕು? ಎನ್ನುವ ನೀತಿ ಎಲ್ಲಾ ಲಕ್ಷಣನಿಗೆ ಬಹಳ ಉತ್ತಮವಾಗಿ ಹೇಳಿದನು.

ಏಕೆಂದರೆ ರಾವಣಾಸುರನು 4 ವೇದಗಳನ್ನು ಓದಿದ್ದಾನೆ. ಎಲ್ಲಾ ಗೊತ್ತು ಆದರೆ ಕಾಮವೆನ್ನುವುದು ಬಿಡಲಾರದೆ, ತಪ್ಪು ಎಂದು ತಿಳಿದರೂ ಘನತೆಗಾಗಿ ಯುದ್ಧವನ್ನು ಮಾಡಬೇಕಾಗಿ ಬಂದಿತು.

## ಬುದ್ಧನು ಏನು ಹೇಳಿದ್ದಾನೆಂದರೆ ?

ಬುದ್ಧನು ಒಂದು ಮಾತು ಹೇಳುತ್ತಾನೆ. ನಿನಗೆ ಒಬ್ಬ ವ್ಯಕ್ತಿಯು ಪರಿಚಯ ಆದನೆಂದರೆ? ಆತನಿಂದ ನಿನಗೆ ಏನೋ ಅವಸರವಾದಾಗಲೇ, ಆತನಿಂದ ನೀನು ಏನೋ ಕಲಿತುಕೊಳ್ಳಬೇಕಾದಾಗಲೇ ನಿನಗೆ ಆ ವ್ಯಕ್ತಿ ಎದುರಾಗುತ್ತಾನೆ. ನಿನಗೆ ಏನೋ ಪಾಠಗಳನ್ನು ಕಲಿಸಿಕೊಡಲು ಆ ಸಂಘಟನೆ ನಿನ್ನ ಜೀವನದಲ್ಲಿ ನಡೆಯುತ್ತದೆ ಎಂದು ತಿಳಿಯಬೇಕು.

ಅಂದರೆ ನಮಗೆ ಈಗ ಒಬ್ಬ ವ್ಯಕ್ತಿ ಎದುರಾದನು. ಅಂದರೆ ಪ್ರಕೃತಿ ನಮ್ಮ ಮುಂದೆ ನಿಲ್ಲಿಸಿದೆ ಅಂದರೆ ಆ ವ್ಯಕ್ತಿಯಿಂದ ನಾವು ಏನನ್ನೂ ಕಲಿತುಕೊಳ್ಳಬೇಕಾದ ಪಾಠ ಇದೆ ಎಂದು ಅರ್ಥ. ಕಾರಣ ಎಲ್ಲರಲ್ಲಿ ಒಳ್ಳೆಯ ಗುಣಗಳು ಇರುವುದಿಲ್ಲ. ಎಲ್ಲರಲ್ಲಿ ಕೆಟ್ಟ ಗುಣಗಳು ಇರುವುದಿಲ್ಲ. ಆದ್ದರಿಂದ ಯಾರಿಂದ ಏನು ಕಲಿಯಬೇಕೋ ಎನ್ನುವುದು ನಂತರ ತಿಳಿಯುತ್ತದೆ. ಆದಕ್ಕೆ ನಾವೆಲ್ಲರೂ ಪತ್ರೀಜಿಯವರಿಗೆ ಆಕರ್ಷಿತರಾಗಿದ್ದೇವೆ.

ಹಾಗೆಯೇ ಬುದ್ದನು ಏನು ಹೇಳಿದ್ದಾನೆಂದರೆ ಪ್ರತಿ ವ್ಯಕ್ತಿಯು ಶ್ರೇಷ್ಠ

ವ್ಯಕ್ತಿಯಾಗುತ್ತಾನೆ. ಕೆಟ್ಟವರಾದರೂ ಅವರಲ್ಲಿ ಕೂಡಾ ಏನೋ ಒಂದು ಶ್ರೇಷ್ಠತನ ಇರುತ್ತದೆ. ಆದ್ದರಿಂದ ಆ ಶ್ರೇಷ್ಠತೆಯನ್ನು ನೀನು ಕಲಿಯಬೇಕು ಎನ್ನುತ್ತಾನೆ. ಎದುರಿಗಿರುವ ವ್ಯಕ್ತಿಯಲ್ಲಿ 99 ತಪ್ಪುಗಳಿದ್ದರೂ ಒಂದು ಒಳ್ಳೆಯದು ಇದ್ದರೆ ಆ ಒಳ್ಳೆಯದನ್ನು ನೀನು ಕಲಿಯಲು ಪ್ರಯತ್ನಿಸು ಎಂದು ಹೇಳುತ್ತಾನೆ. ಬುದ್ಧನು ನಿನ್ನಲ್ಲಿ 99 ಒಳ್ಳೆಯದಿದ್ದು ಒಂದು ತಪ್ಪು ಇದ್ದರೆ ಆ ತಪ್ಪನ್ನು ಸರಿಮಾಡಿಕೊಳ್ಳುವುದಕ್ಕೆ ಪ್ರಯತ್ನಿಸು ಎನ್ನುತ್ತಾನೆ ಬುದ್ಧನು.

ಹಾಗೆ ನಮ್ಮ ಎದುರಿಗೆ ಇರುವ ವ್ಯಕ್ತಿಯಿಂದ ಕಲಿಯಬೇಕು, ನಮಗೆ ಎದುರಾಗುವ ಸಂಘಟನೆಗಳಿಂದ ಕೂಡಾ ಕಲಿಯಬೇಕು, ಪ್ರಕೃತಿಯಿಂದ ಕಲಿಯಬೇಕು, ಮಹಾತ್ಮರಿಂದ ಕಲಿಯಬೇಕು, ಎಷ್ಟೋ ಪುಸ್ತಕಗಳಿಂದಲೂ ಕಲಿಯಬೇಕು.

## ಧ್ಯಾನಿ ಏನು ಮಾಡಬೇಕು?

ಒಬ್ಬ ದತ್ತಾತ್ರೇಯರಂತೆ ತಯಾರಾಗಬೇಕೆಂದರೆ ಎಷ್ಟೋ ಜನರನ್ನು ಗುರುಗಳಾಗಿ ಆಯ್ಕೆ ಮಾಡಿಕೊಂಡು ಸೂಕ್ಷ್ಮಾತಿ ಸೂಕ್ಷ್ಮವಾಗಿ ಗ್ರಹಿಸಬೇಕು. ಒಂದು ಕಣಜದಿಂದ, ಒಂದು ಹಾವು, ಪಂಚ ಭೂತಗಳು ಹಾಗೆ ಎಷ್ಟು ಕಡೆಯಿಂದ ಕಲಿತರು ದತ್ತಾತ್ರೇಯರು ನಾವು ಇವನ್ನೆಲ್ಲಾ ಹಿಡಿಸಿಕೊಳ್ಳುವುದಿಲ್ಲ, ಆದರೆ ದತ್ತಾತ್ರೇಯರು ಇವುಗಳಿಂದಲೇ ಎಷ್ಟೋ ಜ್ಞಾನವನ್ನು ಕಲಿತುಕೊಂಡರು.

ಧ್ಯಾನಿಗಳು ಯಾವಾಗಲು ಒಂದು ಮಾತು ನೆನಪಿಟ್ಟುಕೊಳ್ಳಬೇಕು ಏನೆಂದರೆ? ನಾವೆಲ್ಲ ಈ ಭೂಮಿಗೆ ಸತ್ಯಾನ್ವೇಷಣೆಗಾಗಿ ಬಂದ ನಿರಂತರ ವಿದ್ಯಾರ್ಥಿಗಳು. ನಿನಗೆ ಸತ್ಯದರ್ಶನ ಆಗುವವರೆಗೂ ನೀನು ವಿದ್ಯಾರ್ಥಿಯೆ ಹೊರಿತು, ಮಾಸ್ಟರ್ ಆಗಲಾರೆ. ನಾನು ವಿದ್ಯಾರ್ಥಿ ಎಂದುಕೊಳ್ಳುತ್ತಾ ನೀನು ವಿನಯದಿಂದ ಇದ್ದಾಗ ನಿನಗೆ ಪಾಠಗಳೆಲ್ಲ ಬರುತ್ತವೆ.

ನಿನಗೆ ಕಲಿಸಲು ಪ್ರಕೃತಿ ಯಾವಾಗಲೂ ಸಿದ್ಧವಾಗಿ ಇರುತ್ತದೆ. ಒಂದು ಪುಸ್ತಕದ ಮೂಲಕವೂ, ಒಬ್ಬ ಗೆಳೆಯನಿಂದಲೋ, ಒಬ್ಬ ಗುರುವಿನಿಂದಲೋ, ಹೀಗೆ ಧ್ಯಾನ ಸತ್ಸಂಗ ತರಗತಿಗಳಿಂದಲೋ, ನೀನು ಕಲಿತುಕೊಳ್ಳಬೇಕಾದ ವಿಷಯಗಳು ಬಹಳ ಕಲಿಸಲ್ಪಡುತ್ತಿರುತ್ತವೆ. ಯಾವಾಗಲೂ ಸಹ ನಾವು ಕಲಿತುಕೊಳ್ಳಲು ಪ್ರಯತ್ನಿಸುತ್ತಿರಬೇಕು. ನಾವು ಯಾವಾಗಲೂ ವಿದ್ಯಾರ್ಥಿಗಳೆ.

ಈ ಭೂಮಿಯ ಮೇಲೆ ಮಾನವ ದೇಹವನ್ನು ತೆಗೆದುಕೊಂಡಿದ್ದೇವೆ. ಅಂದರೆ

ನಾವು ಸತ್ಯಾನ್ವೇಷಣೆಗೆ ಬಂದಂತೆಯೆ. ಮಾನವ ಜನ್ಮ ಬಂದ ಕೂಡಲೆ ಸಹ ಬಹಳ ಮಂದಿ ಈ ಸತ್ಯಾನ್ವೇಷಣೆ ಮಾಡರು. ಏಕೆಂದರೆ? ಕೆಲವು ಜನ್ಮಗಳು ತಮೋ ಗುಣದಲ್ಲಿ, ಕೆಲವು ಜನ್ಮಗಳು ರಜೋಗುಣದಲ್ಲಿ, ಕೆಲವು ಜನ್ಮಗಳು ಸಾತ್ವಿಕ ಗುಣದಲ್ಲಿ ಇರುತ್ತಾರೆ.

ಈ ಮೂರು ಗುಣಗಳಿಂದ ಕೂಡಿದ ಜನ್ಮಗಳಲ್ಲಿ ಕರ್ಮಗಳು ಬೆಳೆಯುತ್ತವೆ. ಅಂದರೆ ತಮೋಗುಣ, ರಜೋಗುಣಗಳಲ್ಲಿ ಪಾಪ ಕರ್ಮಗಳನ್ನು ಹೆಚ್ಚಾಗಿ ಮಾಡುತ್ತಾರೆ. ಸಾತ್ವಿಕ ಗುಣದಲ್ಲಿ ಪುಣ್ಯ ಕರ್ಮಗಳನ್ನು ಮಾಡುತ್ತಾರೆ. ಈ ಕರ್ಮಗಳೆಲ್ಲಾ ನಮಗೆ ಬಂಧಗಳಾಗುತ್ತವೆ. ಈ ಬಂಧಗಳೆಲ್ಲಾ ಮರು ಜನ್ಮಕ್ಕೆ ಕಾರಣವಾಗುತ್ತವೆ. ಆದ ಕಾರಣ ಈ ಮೂರು ಗುಣಗಳನ್ನು ಬಿಡಬೇಕು. ಈ ವಿಷಯವನ್ನೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣರು ಹೀಗೆ ಹೇಳಿದ್ದಾರೆ.

**ಶ್ಲೋಕ ॥ ತ್ರೈಗುಣ್ಯ ವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ**

**ನಿರ್ದ್ವನ್ದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನೆ (ಭ.ಗಿ 2.45)**

ತಾತ್ಪರ್ಯ : ಓ ಅರ್ಜುನ ವೇದಗಳು ತ್ರಿಗುಣಾತ್ಮಕಗಳಾದ ಸಂಸಾರ ವಿಷಯಗಳನ್ನು ತಿಳಿಸುತ್ತಿವೆ. ನೀನು ತ್ರಿಗುಣಗಳನ್ನು ಬಿಟ್ಟಿರುವವನಾಗಿ ದ್ವಂದ್ವರಹಿತನಾಗಿ ನಿರಂತರವು ಶುದ್ಧ ಸತ್ಯವನ್ನು ಆಶ್ರಯಿಸಿದವನಾಗಿ, ಯೋಗ ಕ್ಷೇಮಗಳ ದೃಷ್ಟಿ ಇಲ್ಲದವನಾಗಿ, ಆತ್ಮಜ್ಞಾನಿಯಾಗು.

ಅಂದರೆ ಈ ಮೂರು ಗುಣಗಳನ್ನು ದಾಟಿ ಹೋಗಬೇಕು ಎಂದರು. ವೇದಗಳು ಮೂರು ಗುಣಗಳ ಬಗ್ಗೆ ಹೇಳಿವೆ. ಅಂದರೆ ಪ್ರಕೃತಿ ದೇವತೆಗಳನ್ನು ಆರಾಧಿಸುವುದು, ಅದಕ್ಕೆ ಬೇಕಾದ ಮಂತ್ರಗಳು, ಸ್ವರ್ಗ ಸೌಖ್ಯಗಳ ಕುರಿತು ಬೇಕಾದ ಮಂತ್ರಗಳು, ಇವೆಲ್ಲಾ ಇವೆ. ಎಲ್ಲಿಯೂ ಸ್ವಲ್ಪ ಜ್ಞಾನವನ್ನು ಕೊಡಲ್ಪಟ್ಟಿದೆ.

ಅಂದರೆ ಈ ಮೂರು ಗುಣಗಳಿಂದ ಮಾಡುವ ಕೆಲಸಗಳನ್ನೇ ವೇದಗಳು ಹೇಳಿವೆ. ಈ ಮೂರು ಗುಣಗಳು ದಾಟಿ ನಿರ್ಗುಣ ಸ್ಥಿತಿಗೆ ಹೋಗದ ಹೊರತು ನೀನು ನಾನಿರುವ ಲೋಕಕ್ಕೆ ಬರಲಾರೆ ಎಂದು ಹೇಳಲಾಗಿದೆ.

## ಪತ್ರೀಜಿಯವರು

ಅಚಿದರೆ ಈಗಿರುವ ಪಿರಮಿಡ್ ಮಾಸ್ಟರ್ಸ್‌ಗಳೆಲ್ಲಾ ಕೂಡಾ ಶುದ್ಧ ಸಾತ್ವಿಕ ಗುಣದಲ್ಲಿ ಇದ್ದಾರೆ. ಆದ್ದರಿಂದ ಧ್ಯಾನ, ಜ್ಞಾನ ಎರಡನ್ನು ಹಿಡಿದುಕೊಂಡಿದ್ದಾರೆ. ಅದಕ್ಕೆ

ಪತ್ರೀಜಿಯವರು ಪಿರಮಿಡ್ ಮಾಸ್ಟರ್ಸ್‌ಗಳೆಲ್ಲಾ ಸಾಮಾನ್ಯ ವ್ಯಕ್ತಿಗಳಲ್ಲ ಎನ್ನುತ್ತಾರೆ. ಅವರು ನೋಡಲು ಬಹಳ ಸಾಧಾರಣವಾಗಿ ಕಾಣಿಸುತ್ತಾರೆ. ಸಾಮಾನ್ಯ ವ್ಯಕ್ತಿಗಳಾಗಿ ಕಾಣಿಸುತ್ತಾರೆ, ಆದರೆ ಬಹಳ ಶ್ರೇಷ್ಠರು ಅವರು.

ಅದಕ್ಕೆ ಧ್ಯಾನ ಮಾಡುತ್ತಾರೆ, ಧ್ಯಾನ ಹೇಳುತ್ತಾರೆ. ಎಲ್ಲರೂ ಚೆನ್ನಾಗಿರಬೇಕು ಎಂದು ಬಯಸುತ್ತಾರೆ. ಎಲ್ಲಾ ಜೀವಿಗಳು ಕ್ಷೇಮವಾಗಿ ಇರಬೇಕೆಂದು ಕೋರುತ್ತಾ ಶಾಖಾಹಾರವನ್ನು ಪಾಲಿಸುತ್ತಾರೆ.

ಒಂದು ಕಾಲದಲ್ಲಿ ಸಾವಿರ ವರ್ಷಗಳು ಧ್ಯಾನ ಮಾಡದ ಹೊರತು ದೊರಕದ ಜ್ಞಾನವು ಪತ್ರೀಜಿಯವರಿಂದ ಈ ದಿನಗಳಲ್ಲಿ ಬಹಳ ಸುಲಭವಾಗಿ ದೊರುಕುತ್ತಿದೆ. ಎಲ್ಲರೂ ಕೂಡಾ ಬಹಳಷ್ಟು ಶೀಘ್ರವಾಗಿ ಕಲಿತುಕೊಳ್ಳುತ್ತಿದ್ದಾರೆ, ತಿಳಿದುಕೊಳ್ಳುತ್ತಿದ್ದಾರೆ.

ನಾನು ಭಾಗವತವನ್ನು ಓದದಿದ್ದರೆ ಈ ದತ್ತಾತ್ರೇಯರ ಕುರಿತು ಹೇಳಲು ಆಗುತ್ತಿರಲಿಲ್ಲ. ಹಾಗೆಯೇ ಉದ್ಧವನ ಕುರಿತು ಹೇಳಲಾಗುತ್ತಿರಲಿಲ್ಲ. ಪತ್ರೀಜಿಯವರು ಯಾವಾಗಲೂ ಸ್ವಾಧ್ಯಾಯ, ಸ್ವಾಧ್ಯಾಯ ಎಂದು ಹೇಳುತ್ತಾರೆ. ನಾವು ಪ್ರಾಪಂಚಿಕ ಜೀವನದಲ್ಲಿ ಕಾದಂಬರಿಗಳು, ವಾರ ಪತ್ರಿಕೆಗಳು ಓದಿ, ಏನೋ ಕಾಲ್ಪನಿಕ ಕಥೆಗಳು ಓದುತ್ತಾ ಅವು ನಮ್ಮ ಜೀವನಕ್ಕೆ ಅನ್ವಯಿಸಿಕೊಂಡು ದುಃಖ ಪಡುತ್ತಾ ಇರುತ್ತೇವೆ.

ಯಾವಾಗಾದರೆ ಪತ್ರೀಜಿಯವರು ನಮ್ಮ ಜೀವನದಲ್ಲಿ ಬಂದರೊ ಸದ್ಗ್ರಂಥಗಳನ್ನು ಸ್ವಾಧ್ಯಾಯ ಮಾಡುತ್ತಿದ್ದೇವೆ. ಸತ್ ಅಂದರೆ ಸತ್ಯ ಅಂದರೆ ಭಗವಂತನ ಕುರಿತು ಹೇಳುವ ಗ್ರಂಥಗಳು. ಅದು ಭಾಗವತ ಆಗಬಹುದು, ರಾಮಾಯಣ ಆಗಬಹುದು, ಹಾಗೆಯೆ ಭಗವದ್ಗೀತೆ ಆಗಬಹುದು, ಉಪನಿಷತ್ತುಗಳು ಆಗಬಹುದು, ಇವುಗಳಲ್ಲಿ ಭಗವಂತನ ಕುರಿತು ಇರುತ್ತದೆ. ಅವು ಯಾವುವನ್ನೂ ಕಲಿತುಕೊಳ್ಳಬೇಕು? ಯಾವುವನ್ನು ಬಿಡಬೇಕು? ಏನನ್ನು ಹೊಂದಬೇಕು? ಎನ್ನುವುದು ತಿಳಿಯುತ್ತದೆ.

ಭಾಗವತವೆಲ್ಲಾ ಹೇಗೆ ಇರುತ್ತದೆ ಎಂದರೆ ಸೃಷ್ಟಿ ಕುರಿತು ಆದಿಯಿಂದ ಇರುವುದರ ಕುರಿತೆ ತಿಳಿದುಕೊಳ್ಳುತ್ತೇವೆ. ಒಬ್ಬೊಬ್ಬರು ಇಷ್ಟು ಶ್ರೇಷ್ಠರಾಗಿ ಬೆಳೆಯಲು ಕಾರಣ ಏನು ಎಂದು ನಾವು ತಿಳಿದುಕೊಳ್ಳುತ್ತೇವೆ. ಭಾಗವತವನ್ನು ಓದದೆ ಇದ್ದರೆ ದತ್ತಾತ್ರೇಯರ ಕುರಿತು ತಿಳಿಯುತ್ತಿರಲಿಲ್ಲ.

ಇಷ್ಟು ಉತ್ತಮವಾಗಿ, ಇಷ್ಟು ಸೂಕ್ಷ್ಮ ದೃಷ್ಟಿಯಿಂದ ಪ್ರಕೃತಿಯಿಂದ 24 ಮಂದಿ ಗುರುಗಳನ್ನು ಆಯ್ಕೆ ಮಾಡಿಕೊಂಡು 24 ಮಂದಿ ಗುರುಗಳಿಂದ ದತ್ತಾತ್ರೇಯರು ಜ್ಞಾನವನ್ನು ಹೊಂದಿದ್ದರು. ಅವರಿಗೆ ಒಬ್ಬ ವ್ಯಕ್ತಿಯಲ್ಲ. ಪ್ರಕೃತಿಯೆ ಗುರುವಾಯಿತು

ಅಂತಹ ದತ್ತಾತ್ರೇಯರು ಪರಶುರಾಮರಿಗೆ ಗುರುವಾದರು. ನೋಡಿರಿ ಪರಶುರಾಮರು ಎಂತಹ ಉತ್ತಮರೋ! ಅಂತಹವರಿಗೆ ದತ್ತಾತ್ರೇಯರು ಗುರುವಾದರು.

ಅವರದು ಸಾಧಾರಣ ಜೀವನವಲ್ಲ. ಈ 64 ಕಲೆಗಳು ಅವರು ಕಲಿತುಕೊಂಡರು ಹಾಗೆ ಕಲಿತುಕೊಂಡದ್ದರಿಂದ, ಅಸ್ತ್ರವಿದ್ಯೆ ಬರುತ್ತದೆ, ಶಸ್ತ್ರ ವಿದ್ಯೆ ಬರುತ್ತದೆ. ಪಾಂಡಿತ್ಯ ಬರುತ್ತದೆ, ಜ್ಞಾನ ಬರುತ್ತದೆ. 64 ಕಲೆಗಳು ಅವರಿಗೆ ಬರುತ್ತಿರುತ್ತವೆ. ಅಂತಹ ಜ್ಞಾನ ಇದೆಯಾದ್ದರಿಂದ ಅಂತಹ ವಿಶೇಷವಾಗಿ ನಾವು ಹೇಳಿಕೊಳ್ಳುತ್ತಿದ್ದೇವೆ.

ಅಂದರೆ ಈಗ ಈ ದಿನಗಳಲ್ಲಿ ಈ ಜ್ಞಾನವನ್ನು ಹೊಂದಲು ಪುಸ್ತಕಗಳ ಮೂಲಕ ಮಾಸ್ಟರ್‌ಗಳ ಮೂಲಕ, ಗುರುಗಳ ಮೂಲಕ ಬಹಳ ಸುಲಭವಾಗಿ ನಾವು ಜ್ಞಾನವನ್ನು ಕಲಿತುಕೊಳ್ಳುತ್ತಿದ್ದೇವೆ. ಇವೆಲ್ಲಾ ಪತ್ರೀಜಿಯವರು ಏಕೆ ಓದು ಎಂದು ಹೇಳುತ್ತಾರೆ. ಅಂದರೆ ಅಷ್ಟು ಉತ್ತಮರಾಗಿ ನೀವು ಕೂಡ ಬೆಳೆಯಬೇಕೆಂದು **"ಜೀವನು ಜೀವನಾಗಿ ಇರಬಾರದು, ಜೀವನು ದೇವರಾಗಿ ಬೆಳೆಯಬೇಕು ಎಂದು ಹೇಳುತ್ತಾರೆ."**

ನೀನು ದೇವರು ಹೇಗೆ ಆಗುತ್ತೀಯಾ ಅಂದರೆ? ಮನಸ್ಸಿಗೆ ಇರುವ ಮಾಲಿನ್ಯಗಳನ್ನು ತೊಲಗಿಸಿಕೊಂಡು ಯಾವುದನ್ನು ಇರಿಸಿಕೊಳ್ಳಬೇಕೋ ಅದನ್ನು ಇಟ್ಟುಕೊಂಡು ಇತರರಿಗೆ ಏನು ಕೊಡಬೇಕೋ ಅದನ್ನು ಕೊಡುತ್ತಾ, ನನಗೆ ಎನ್ನುವ ಸ್ವಾರ್ಥವನ್ನು ಬಿಟ್ಟು ನಾನು ಎನ್ನುವ ಅಹಂಕಾರ, ನನ್ನದು ಎನ್ನುವ ಮಮಕಾರ ಈ ಎರಡನ್ನು ಬಿಟ್ಟರೆ ನೀನು ಉತ್ತಮನಾಗಿ ಬೆಳೆಯಬಹುದು.

ಮುಖ್ಯವಾಗಿ ನಾನು, ನನ್ನದು ಎನ್ನುವುದನ್ನು ಬಿಡಬೇಕು. ನಿನ್ನದ್ದಲ್ಲದ್ದನ್ನು ನನ್ನದು ಎನ್ನುತ್ತಿರುವೆ, ನೀನು ಅಲ್ಲದ್ದನ್ನು ನೀನು ಎನ್ನುತ್ತಿರುವೆ. ನೋಡಿರಿ, ಈ ಶರೀರ ನಾನು ಅಂದುಕೊಂಡರೆ ನಾನು ರಾಜ್ಯಲಕ್ಷ್ಮಿ ಎಂದು ಅಂದುಕೊಳ್ಳಬಹುದು. ಆದರೆ ಈ ಶರೀರ ನಾನು ಅಲ್ಲ, ನಾನು ಆತ್ಮನು.

ನಾನು ಅಲ್ಲದ ಈ ಶರೀರ ಅಂದರೆ ಎಷ್ಟು ಮಮಕಾರ ಏತಕ್ಕೆ? ನಾನು ಶ್ರೇಷ್ಠ. ನಾನು ವಿದ್ಯೆವುಳ್ಳವಳು, ನಾನು ಹಣವುಳ್ಳವಳು ಎಂದು ಅಂದುಕೊಂಡರೆ ಅಹಂಕಾರವೆ. ಶರೀರವೆ ನಾನು ಅಲ್ಲದಿರುವಾಗ ಅವು ನಿನ್ನವೆ? ಅಲ್ಲವಲ್ಲ?

ಆದರೆ ಸೃಷ್ಟಿಯಲ್ಲಿ ಎಲ್ಲೆಲ್ಲೂ ಇರುವುದು ಆ ಪರಮಾತ್ಮನೆ, ಎಲ್ಲಾ ಅತನದೆ ನನ್ನದು ಎಂದುಕೊಳ್ಳುತ್ತಿರುವೆ, ಆದರೆ ನೀನು ಮೇಲೆ ಹೋದಾಗ ಏನನ್ನ ತೆಗೆದುಕೊಂಡು ಹೋಗಲಾರೆ. ನಿನ್ನ ಶರೀರವನ್ನೇ ನೀನು ತೆಗೆದುಕೊಂಡು ಹೋಗಲಾರೆ. ಆದರೆ ನನಗೆ ಅಷ್ಟು ಆಸ್ತಿ ಇದೆ, ಇಷ್ಟು ಆಸ್ತಿ ಇದೆ, ಎನ್ನುವ ಅಹಂಕಾರದಲ್ಲಿರುವೆ.

ಆದ ಕಾರಣ ಏನನ್ನಾಗಲಿ ನಾಲ್ಕು ಜನರಿಗೆ ಹಂಚಿ ನೀನು ತಿಂದಾಗ ಅದು ಯಜ್ಞ ಫಲಂ ಸೇವಿಸಿದಂತೆ.

ಭಗವಂತನು ಯಾರು? "ಆತ್ಮ". ಆತ್ಮ ಎಲ್ಲಾ ಕಡೆ ಇದೆಯಲ್ಲಾ? ಇರುವೆಯಿಂದ ಬ್ರಹ್ಮದೇವನವರೆಗೆ ಎಲ್ಲಾ ಆತ್ಮ ಸ್ವರೂಪರೆ! ಆತ್ಮ ಸ್ವರೂಪರಿಗೆ ನೀನು ಇಟ್ಟು ಸೇವಿಸಿದರೆ ಅದು ಯಜ್ಞ ಫಲವಾಗುತ್ತದೆ. ಎಂದು ಭಗವದ್ಗೀತೆ ನಮಗೆ ಬೋಧಿಸುತ್ತದೆ. ಯಾರಿಗೆ ಇಡದಿದ್ದರೆ ಹಾಗೆ ತಿಂದರೆ ಅದು ಕಳ್ಳತನದ ಊಟ ಆಗುತ್ತದೆ.

ಇವನ್ನೆಲ್ಲಾ ಯಾವಾಗಾದರೆ ತಿಳಿದುಕೊಳ್ಳುತ್ತೀರೋ! ಅಂದರೆ ಯಾರಾದರೆ ಸ್ವಾರ್ಥ ಬಿಟ್ಟು ನಿಸ್ವಾರ್ಥದಿಂದ ಜೀವಿಸುತ್ತಾರೋ! ನಾಲ್ಕು ಜನರಿಗೆ ಪ್ರತಿಯೊಂದು ಹಂಚುತ್ತಾ ತಿಂದು ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ನಾನು ಭೂಮಿಯ ಮೇಲೆ ಹೇಗೆ ಬಂದೆನೋ ಎಲ್ಲರೂ ಹಾಗೆ ಕಲಿತುಕೊಳ್ಳಲು ಬಂದಿದ್ದಾರೆ ಎಂದು ಗುರುತಿಸಲು ಪ್ರಯತ್ನಿಸಿ, ಎಲ್ಲರೂ ಒಂದೇ ಎಂದು ಭಾವಿಸಿ ಎಲ್ಲರಿಗಾಗಿ ಶ್ರಮಪಟ್ಟ ದಿನ ನೀನು ದೈವವಾಗಿಯೇ ಇರುತ್ತೀಯಾ.

ಇದನ್ನೇ ದತ್ತಾತ್ರೇಯರಿಂದ ನಾವು ಕಲಿತುಕೊಳ್ಳಬೇಕಾದದ್ದು

**ತಟವರ್ತಿ ದಂಪತಿಗಳ ವೆಬ್‌ಸೈಟ್ ಮೂಲಕ ಹೊಂದುವ ಸಮಾಚಾರಗಳು**

website address : www.tst.org.in

a. Google maps location

b. Pdf, download

c. Concept, you tube play list

D. ಕೊಟೇಶನ್ಸ್

e. ದಂಪತಿಗಳ ಭಾವಚಿತ್ರ

f 1, 2, 3 ದಿನಗಳಲ್ಲಿ ಉಚಿತ ಆತ್ಮಜ್ಞಾನ ಶಿಕ್ಷಣ ತರಗತಿಗಳು
ಸಿಂಧೂರ 8555995217

# ಗುರುವಿನ ಬಳಿ ಶಿಷ್ಯನ ವರ್ತನೆ ಹೇಗಿರಬೇಕು?

ಗುರುವಿನ ಬಳಿ ಶಿಷ್ಯನು ಹೇಗೆ ಇರಬೇಕು? ಹೇಗೆ ಇದ್ದರೆ ವಿದ್ಯೆಯನ್ನು ಕಲಿಯಬಲ್ಲನು? ಎನ್ನುವುದನ್ನು ತಿಳಿದುಕೊಳ್ಳೋಣ. ಪೂರ್ವದಲ್ಲಿ ಗುರುಕುಲಗಳಲ್ಲಿ ವಿದ್ಯೆ ಕಲಿಯಬೇಕೆಂದಾಗ ಎಲ್ಲಾ ಭೋಗಗಳನ್ನು ಬಿಟ್ಟು ಗುರುಗಳನ್ನು ಆಶ್ರಯಿಸಲು ಆಶ್ರಮಗಳಿಗೆ ಹೋಗುತ್ತಿದ್ದರು. ಅಲ್ಲಿ ಗುರುಗಳ ಸೇವೆಯನ್ನು ಮಾಡುತ್ತಿದ್ದರಂತೆ ಅಲ್ಲಿ ಗುರುಗಳು ಆ ಶಿಷ್ಯರನ್ನು 12 ವರ್ಷಗಳ ಕಾಲ ಇರಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರಂತೆ.

ಶಿಷ್ಯರು ಎಲ್ಲರೂ ಒಂದೇ ರೀತಿಯಲ್ಲಿ ಇರಬೇಕು ಎಂದು ಅವರಿಗೆ ಒಂದು ಆಶ್ರಮ ಜೀವನ ಅಭ್ಯಾಸ ಮಾಡಿಸಿ, ಸರಿಯಾಗಿ ವಿದ್ಯೆ ಕಲಿಸಿ ಕಳುಹಿಸುತ್ತಿದ್ದರಂತೆ. ಈ ಕಲಿಯುಗದಲ್ಲಿ ಕಲಿತುಕೊಳ್ಳಬೇಕು ಅಂದರೆ? ಅಂತಹ ಆಶ್ರಮಗಳು ಇಲ್ಲ. ಮುಖ್ಯವಾಗಿ ಆಧ್ಯಾತ್ಮಿಕ ವಿದ್ಯೆ ಕಲಿಸುವವರೆ ಇಲ್ಲದೆ ಹೋಗಿದ್ದಾರೆ.

ಆದ್ದರಿಂದ ಆತ್ಮವಿದ್ಯೆ ಎಂದರೆ ಬ್ರಹ್ಮ ವಿದ್ಯೆ ಕಲಿತುಕೊಳ್ಳಬೇಕೆಂದು ಅಂದು ಕೊಳ್ಳುತ್ತಿದ್ದರು. ಗುರುಗಳ ಬಳಿ ಹೇಗೆ ಇರಬೇಕು? ಹೇಗೆ ವರ್ತಿಸಬೇಕು? ಎನ್ನುವುದನ್ನು ತಿಳಿದುಕೊಳ್ಳೋಣ

**"ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ।"**

**"ಗುರು ಸಾಕ್ಷಾತ್ ಪರಬ್ರಹ್ಮ, ತಸ್ಮೈಶ್ರೀ ಗುರುವೇ ನಮಃ"**

ಎಂದು ಹಿರಿಯರು ಹೇಳಿದ್ದಾರೆ

ಈ ಶ್ಲೋಕವನ್ನು ನೋಡಿದಾಗ, ಗುರುವು ಬ್ರಹ್ಮ, ವಿಷ್ಣು, ಶಿವ ಸ್ವರೂಪರೆಂದು ಅರ್ಥ. ಅಂದರೆ ಪರಬ್ರಹ್ಮ, ಈ ಮೂರು ಸ್ವರೂಪಗಳಲ್ಲಿ ಗುರುಗಳನ್ನು ಕೊಡುತ್ತಾನೆ ಎಂದು ಅರ್ಥ. ಹೇಗೆ ಅಂದರೆ ಗುರುವು ಶಿಷ್ಯನಿಗೆ ಜ್ಞಾನವನ್ನು ಉಂಟು ಮಾಡುತ್ತಿರುವಾಗ ಬ್ರಹ್ಮ ಸ್ವರೂಪನು, ಶಿಷ್ಯನಿಗೆ ಜ್ಞಾನವನ್ನು ನಿರಂತರ ತನ್ನ ಬೋಧನೆಯಿಂದ ಹೆಚ್ಚಿಸಿ ಪೋಷಿಸುತ್ತಿರುವಾಗ ವಿಷ್ಣು ಸ್ವರೂಪನು, ಶಿಷ್ಯನ ಅಜ್ಞಾನವನ್ನು ನಾಶ ಮಾಡುತ್ತಿರುವಾಗ ಶಿವನ ಸ್ವರೂಪನು ಎಂದು ತಿಳಿದುಕೊಳ್ಳಬೇಕು. ಈ ಮೂರು ರೂಪಗಳು ಸೇರಿಸಿದರೇನೆ ಪರಬ್ರಹ್ಮ ಸ್ವರೂಪನು. ಅಂದರೆ ಪರಬ್ರಹ್ಮನೆ ಗುರುವಾಗಿ ಬರುತ್ತಾನಂತೆ. ಆದ್ದರಿಂದ ಗುರುವನ್ನು ಗೌರವಿಸಬೇಕು.

ಪ್ರಾಪಂಚಿಕ ಜೀವನದಲ್ಲಿರುವಾಗ ಗುರುವು ಅವಸರವಿಲ್ಲ ಎಂದು ಅಂದುಕೊಳ್ಳುತ್ತೇವೆ. ಅಷ್ಟೇ ಅಲ್ಲ ವಿಗ್ರಹವನ್ನು ಪೂಜಿಸಿದರೆ ಸಾಕು. ಸ್ತೋತ್ರ ಮಾಡಿದರೆ ಸಾಕು, ಯಜ್ಞ ಯಾಗಾದಿಗಳನ್ನು ಮಾಡಿದರೆ ಸಾಕು, ಹಾಗೆ ದೈವದ ಮೇಲೆ ಭಕ್ತಿ ತೋರಿಸಿದರೆ ಸಾಕು ಎಂದು ಅಂದುಕೊಳ್ಳುತ್ತಾರೆ. ಆದರೆ ಇವೆಲ್ಲಾ ಮಾನವರಿಗೆ ಭೋಗಗಳು ಎಂದರೆ ಸುಖಗಳನ್ನು ಕೊಡುತ್ತವೆ ಹೊರತು ಮೋಕ್ಷವನ್ನು ಕೊಡಲಾರವು.

ಮೋಕ್ಷವನ್ನು ಹೊಂದಬೇಕೆಂದರೆ? ಅಂದರೆ ದುಃಖದಿಂದ ಶಾಶ್ವತವಾಗಿ ಹೊರಬರಬೇಕು ಅಂದರೆ, ಖಡ್ಡಾಯವಾಗಿ ಆಧ್ಯಾತ್ಮಿಕ ವಿದ್ಯೆ ಅಂದರೆ ಆತ್ಮ ವಿದ್ಯೆ ಅಭ್ಯಾಸ ಮಾಡಬೇಕಾದದ್ದೇ! ಅದಕ್ಕೆ ಸದ್ಗುರುವನ್ನು ಆಶ್ರಯಿಸಬೇಕಾದದ್ದೆ.

ಸದ್ಗುರುಗಳನ್ನು ಆಶ್ರಯಿಸಿದಾಗ, ಅವರು ನೀನು ಶರೀರವಲ್ಲ, ನೀನು ಆತ್ಮನು, ನೀನೇ ಅಲ್ಲಾ ಪ್ರತಿಯೊಬ್ಬರು ಆತ್ಮ ಸ್ವರೂಪರೆ! ಶರೀರಗಳು ಬೇರೆ, ಆದರೆ ಆತ್ಮ ಒಂದೆ. ಇರುವುದು ಒಂದೆ ಚೈತನ್ಯ ಅದೆ ಆತ್ಮ ಎಂದು ಗುರುವು ರೂಪದಲ್ಲಿ ಪರಮಾತ್ಮನು ಬೋಧಿಸುತ್ತಾನೆ.

ಅಲ್ಲಿಯವರೆಗೆ ವಿಧ ವಿಧವಾದ ಆರಾದನೆಗಳನ್ನು ಮಾಡುತ್ತಾ, ಬಹಳ ಭಕ್ತಿಯುಳ್ಳವರು ಎಂದು ಅಂದು ಕೊಳ್ಳುತ್ತೇವೆ. ಅದಕ್ಕೆ ಈ ಅಜ್ಞಾನವನ್ನು ತೊಲಗಿಸುವುದಕ್ಕೆ ಒಬ್ಬ ಸದ್ಗುರುವಿನ ರೂಪದಲ್ಲಿ ಆ ಪರಮಾತ್ಮ ನಮ್ಮ ಬಳಿಗೆ ಬರುತ್ತಾನೆ.

ಪತ್ರೀಜಿಯವರು ಬರುವವರೆಗೂ ಅಂತಹ ಮೂಢ ಭಕ್ತಿಯಲ್ಲಿಯೇ ಎಲ್ಲರೂ ಇದ್ದರು. ಅವರು ಎಲ್ಲರ ಶರೀರದಲ್ಲಿ ಇರುವುದು ಆ ಪರಮಾತ್ಮನೆ! ಅದೇ ಆತ್ಮ ಎಂದು ಹೇಳಿದ್ದು ಅಲ್ಲದೆ, ನೀನೆ ಆ ದೇವರು, ಅಂದರೆ ಆತ್ಮನು ಒಂದು ಪತ್ರೀಜಿಯವರು ಹೇಳಿದ್ದಾರೆ. ಆದರೆ ಅಜ್ಞಾನದಲ್ಲಿ ಇರುವುದರಿಂದ ಅವರಿಗೆ ಅವರೆ ಮಾನವರು ಎಂದು ಅಂದುಕೊಳ್ಳುತ್ತಿದ್ದಾರೆ ಎಂದು ಪತ್ರೀಜಿಯವರು ಹೇಳಿದ್ದಾರೆ.

ಹಾಗೆ ಪತ್ರೀಜಿಯವರಂತಹ ಸದ್ಗುರುವು ಬರುವವರೆಗೂ ನಾನೆ ದೈವ ಎನ್ನುವ ಸಂಗತಿ ಯಾರಿಗೂ ತಿಳಿಯದು. ಆದರೆ ಅವರ ನಿರಂತರ ಬೋಧನೆಯಿಂದ ನಾನು ಆತ್ಮನು ಅಂದರೆ ದೈವವೆಂದು ಎಷ್ಟೋ ಮಂದಿ ತಿಳಿದುಕೊಂಡರು.

ಅಷ್ಟೇ ಅಲ್ಲ, ಆತ್ಮನಾದ ನಾನು ಎಲ್ಲಿಂದ ಬಂದೆನು? ಎಲ್ಲಿಗೆ ಹೋಗಬೇಕು? ನನ್ನ ಲಕ್ಷ್ಯವೇನು? ಎನ್ನುವುದು ವಿಷ್ಣು ಸ್ವರೂಪದಲ್ಲಿರುವ ಗುರುವಿನಿಂದ ತಿಳಿದುಕೊಳ್ಳುತ್ತೇವೆ.

ಅಷ್ಟೇ ಅಲ್ಲ, ಈ ಶರೀರವೆ ನಾನು ಅಂದುಕೊಂಡವರಿಗೆ ಆತ್ಮ ನಾನು ಎನ್ನುವ

ಜ್ಞಾನವನ್ನು ಕೊಟ್ಟ ಅವರ ಅಜ್ಞಾನವನ್ನು ತೊಲಗಿಸಿದರು. ಆದ್ದರಿಂದ ಪತ್ರೀಜಿಯವರು ಶಿವ ಸ್ವರೂಪರಾಗುತ್ತಾರೆ.

ಅದಕ್ಕೆ ಗುರುವನ್ನು ಮೂರು ರೂಪಗಳನ್ನು ಕೂಡಿಸಿ ಪರಮಾತ್ಮ ಸ್ವರೂಪ ಎಂದೆನ್ನುತ್ತಾರೆ. ಇಂತ ಉತ್ತಮ ಗುರುಗಳ ಹತ್ತಿರ ಕಲಿತು, ಸತ್ಯವೇನೆಂದು ತಿಳಿದುಕೊಂಡು, ಸತ್ಯದ ಕಡೆ ಪಯಣಿಸುತ್ತಿರುವ ಶಿಷ್ಯನು ಹೇಗಿರಬೇಕು? ಹೇಗೆ ಇದ್ದರೆ ಗುರುಗಳಿಗೆ ಇಷ್ಟವಾಗುತ್ತಾರೆ? ಎನ್ನುವುದನ್ನು ತಿಳಿಯೋಣ. ಮುಖ್ಯವಾಗಿ "ಶಿಷ್ಯನಿಗೆ ಗುರುವು ಇಷ್ಟವಾಗುವುದಲ್ಲ, ಗುರುವಿಗೆ ಇಷ್ಟವಾಗುವಂತೆ ಶಿಷ್ಯನು ಇರಬೇಕು", ಅಷ್ಟೇ ಹೊರತು ನಾನು ಉತ್ತಮನು, ಧ್ಯಾನವನ್ನು ಮಾಡುತ್ತಿದ್ದೇನೆ, ಸೇವೆಗಳನ್ನು ಮಾಡುತ್ತಿದ್ದೇನೆ ಎನ್ನುತ್ತಾ ಅಹಂಕಾರದಿಂದ ಇರಬಾರದು. 'ಈ ನಾನು, ನಾನು' ಎನ್ನುವ ಅಹಂಕಾರವನ್ನು ಗುರುಗಳ ಬಳಿ ಕಳೆದುಕೊಳ್ಳಬೇಕು.

ಯೋಗಿಗಳು ಗುರುವನ್ನು, ಶಿಷ್ಯನನ್ನು ತಕ್ಕಡಿಗೆ ಹೋಲಿಸಿದ್ದಾರೆ. ತಕ್ಕಡಿಗೆ ಎರಡು ಕಡೆ ಎರಡು ತಟ್ಟೆಗಳನ್ನು ಸರಪಳಿಗಳಿಂದ ಸಮಾನವಾಗಿ ಕಟ್ಟಿ ಇರುತ್ತವೆ. ಆ ತಟ್ಟೆಗಳಂತೆ ಒಂದು ಕಡೆ ಗುರುವು, ಇನ್ನೊಂದು ಕಡೆ ಶಿಷ್ಯನು ಸಮಾನವಾಗಿ ಇರುತ್ತಾರಂತೆ. ಆದರೆ ಗುರುವು ಜ್ಞಾನದಿಂದ ತೂಗಿದರೆ, ಶಿಷ್ಯನು ಅಜ್ಞಾನದಿಂದ ತೂಗುತ್ತಾನಂತೆ.

ಆ ಮೇಲೆ ಗುರುವಿನ ಜ್ಞಾನ ಬೋಧನೆಯಿಂದ ಶಿಷ್ಯನು ತನ್ನ ಅಜ್ಞಾನವನ್ನು ನಿಧಾನವಾಗಿ ತೊಲಗಿಸಿಕೊಂಡು ಜ್ಞಾನವನ್ನು ಹೊಂದುತ್ತಾ ಶಿಷ್ಯನು ಕೂಡ ಗುರುವಿನಂತೆ ತಯಾರಾಗುತ್ತಾನೆ.

ಆದ್ದರಿಂದ ಶಿಷ್ಯನು ಎಷ್ಟು ತಿಳಿದುಕೊಂಡರೂ, ಗುರುವಿನ ಬಳಿ ನನಗೇನೂ ತಿಳಿಯದು ಎನ್ನುವಂತೆ ಇರಬೇಕು. ಅಷ್ಟೇ ಅಲ್ಲ ಶಿಷ್ಯನು ತನ್ನಲ್ಲಿ ಎಳ್ಳಷ್ಟೂ ದುಃಖವಿದ್ದರೂ, ನನ್ನಲ್ಲಿ ಇನ್ನು ಅಜ್ಞಾನ ಇದೆಯೆಂದು ತಿಳಿದುಕೊಳ್ಳಬೇಕು. ಆ ದುಃಖವನ್ನು ಹೋಗಲಾಡಿಸಿ ಕೊಳ್ಳಲೆಂದೆ ಗುರುವಿನ ಬಳಿ ಬಂದಿದ್ದೇನೆ ಎಂದು ಗುರುವಿನ ಬಳಿ ಸೊನ್ನೆಯಾಗಿ ಹೋಗಬೇಕು. ಅಂದರೆ ಒಂದು ಬಿಳಿ ಹಾಳೆಯಂತೆ ಇರಬೇಕು. ಆಗಲೆ ಗುರುವಿನ ಮಾತುಗಳು ಜ್ಞಾನವು ಚೆನ್ನಾಗಿ ಹತ್ತುತ್ತದೆ ಎಂದು ಶಿಷ್ಯನು ತಿಳಿದುಕೊಳ್ಳಬೇಕು.

ಸತ್ಯ ಸಾಯಿ ಬಾಬಾ ಹೇಳುತ್ತಿದ್ದರಂತೆ, ಒಂದು ನ್ಯೂಸ್ ಪೇಪರ್ ಮೇಲೆ ಅಕ್ಷರಗಳನ್ನು ಬರೆಯಲಾರೆವು, ಆದರೆ ಬಿಳಿ ಹಾಳೆಯ ಮೇಲೆ ಬರೆದರೆ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಆದ್ದರಿಂದ ನಿಮ್ಮ ಮನಸ್ಸು ನ್ಯೂಸ್ ಪೇಪರ್‌ನಂತೆ ಇರಬಾರದು ಒಂದು ಬಿಳಿ ಹಾಳೆಯಂತೆ ಇರಬೇಕು ಅನ್ನುತ್ತಾರೆ.

ಆದ್ದರಿಂದ ಶಿಷ್ಯನು ಗುರುವಿನ ಬಳಿ ಹಾಳೆಯಂತೆ ಇರಬೇಕೆಂದರೆ? ಆ ಗುರುವು ಹೇಳಿದ ಪ್ರತಿ ವಿಷಯವು ಚೆನ್ನಾಗಿ ಅರ್ಥವಾಗುವುದು ಅಲ್ಲದೆ, ಆಳವಾಗಿ ಅಂದರೆ ಹೃದಯದೊಳಗೆ ಹೋಗಿ ಬಿಡುತ್ತದೆ ಎಂದು ಶಿಷ್ಯನು ತಿಳಿದುಕೊಳ್ಳಬೇಕು.

ಪ್ರಾಪಂಚಿಕ ವಿಷಯಗಳನ್ನು ಬೋಧಿಸುವ ಗುರುಗಳು ವಿಗ್ರಹಾರಾಧನೆ ಅಂದರೆ ಪೂಜೆ ಮಾಡು ಎನ್ನುತ್ತಾರೆ. ಆದರೆ ಸದ್ಗುರುವು ವಿಗ್ರಹಾರಾಧನೆ ಬೇಡ, ಸತ್ಯಾರಾಧನೆ ಅಂದರೆ ಆತ್ಮಾರಾಧನೆ ಎಂದರೆ ಧ್ಯಾನವನ್ನು ಮಾಡು ಎನ್ನುತ್ತಾರೆ. ಏಕೆಂದರೆ? ಸದ್ಗುರುವು ಸತ್ಯದಲ್ಲಿ ಜೀವಿಸುತ್ತಾರೆ. ಸತ್ಯವನ್ನೇ ಹೇಳುತ್ತಾನೆ ಆದ್ದರಿಂದ.

ಈ ಸೃಷ್ಟಿಯೆಲ್ಲಾ ಭಗವಂತನಿಂದ ಸೃಷ್ಟಿಸಲ್ಪಟ್ಟಿದೆ. ಪಂಚಭೂತಗಳು ಶಿಲೆಗಳು, ಲೋಹಗಳು, ವೃಕ್ಷಗಳು, ಪ್ರಾಣಿಗಳು, ಮಾನವರು ಎಲ್ಲಾ ಈ ಸೃಷ್ಟಿಯಲ್ಲಿ ಒಂದು ಭಾಗ ಮಾತ್ರವೆ! ಅಷ್ಟೇ ಅಲ್ಲ, ಆ ಸೃಷ್ಟಿ ಕರ್ತನೆ ಎಲ್ಲದರಲ್ಲಿದ್ದು, ಎಲ್ಲವನ್ನು ನಡೆಸುತ್ತಿದ್ದಾನೆಂದು ಗುರುವು ಹೇಳುತ್ತಾನೆ. ಆ ಪರಮಾತ್ಮನನ್ನು ಸೇರುವ ವಿಧಾನವನ್ನು ಹೇಳಲೆಂದೆ ಆ ಗುರುವು ಬರುತ್ತಾನೆ. ಈ ಭೂಮಿ ಮೇಲೆ ದೈವವನ್ನು ಒಬ್ಬ ಸದ್ಗುರುವು ಮಾತ್ರವೇ ತಿಳಿಸಿ ಹೇಳಬಲ್ಲನು.

ಇನ್ನು ಯಾರಾದರು ಸರಿ, ಅಂದರೆ ತಂದೆ–ತಾಯಿಯಾಗಲಿ, ಬಂಧುಗಳಾಗಲಿ ಹೆಂಡತಿಯಾಗಲಿ, ಗಂಡನಾಗಲಿ, ಆ ಭಗವಂತನ ಕುರಿತು, ಆ ಭಗವಂತನನ್ನು ದೈವದ ಬಳಿ ನಮ್ಮನ್ನು ಸೇರಿಸ ಬಲ್ಲವನು. ಅಂತಹ ಸದ್ಗುರುವು ನಮ್ಮ ಜೀವನದಲ್ಲಿ ಹೇಗೆ ಬರುತ್ತಾನೆಂದರೆ? ಪರಮಾತ್ಮನ ಕುರಿತು ಪರಿತಪಿಸಿದರೆ ಆವಾಗ ನಿನ್ನ ಜೀವನದಲ್ಲಿ ಒಬ್ಬ ಸದ್ಗುರುವು ಬರುತ್ತಾನೆ.

ಮೀರಾಬಾಯಿ ಕೃಷ್ಣನಿಗಾಗಿ ಪರಿತಪಿಸಿದಾಗ, ಆಕೆಗೆ ಜ್ಞಾನವನ್ನು ಬೋಧಿಸಲು ರವಿದಾಸ್ ಎನ್ನುವ ಗುರುವು ಬಂದನು. ಆತನು ಮಹಾಜ್ಞಾನಿ, ಆತನು ಮೀರಾಬಾಯಿಗೆ ಹೇಗೆ ಆರಾಧಿಸಿದರೆ ಕೃಷ್ಣನನ್ನು ಸೇರಬಲ್ಲೆವು ಎನ್ನುವುದನ್ನು ಹೇಳಿದರು.

ಯಾರಿಗಾಗಲಿ ಭಕ್ತಿಯು ಪರಾಕಾಷ್ಟೆಯನ್ನು ತಲುಪಿದಾಗ ಧ್ಯಾನದಲ್ಲಿ ಬರುತ್ತಾರೆ. ಆಗ ಗುರುವು ನೀನು ಹುಡುಕುವ ಭಗವಂತನು ಹೊರಗಡೆ ಇಲ್ಲ, ನಿನ್ನ ಶರೀರದಲ್ಲಿ ಇದ್ದಾನೆ, ನೀನು ಅಂತರ್ಮುಖಿಯಾದರೇನೆ ದಕ್ಕುತ್ತಾನೆ ಎಂದು ಶಿಷ್ಯರಿಗೆ ಬೋಧಿಸುತ್ತಾರೆ. ಆದ್ದರಿಂದ ದೈವವನ್ನು ತೋರಿಸುವವನು ಗುರುವು ಆದ ಕಾರಣ, ಗುರುವಿನ ಬಳಿ ಹೇಗೆ ವರ್ತಿಸಬೇಕು? ಹೇಗೆ ಇರಬೇಕು? ಎಂದು ಶಿಷ್ಯನು ಕಲಿತುಕೊಂಡರೇನೆ ಆ ವಿದ್ಯೆ ಶಿಷ್ಯನಿಗೆ ಬರುತ್ತದೆ. ಗುರುಗಳು ತಮ್ಮ ಬಾಯಿಂದ ಏನನ್ನೂ ಹೇಳುವುದಿಲ್ಲ. ಶಿಷ್ಯನೆ ಹೇಗೆ ಇರಬೇಕೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಶಿಷ್ಯನು

ಗುರುವಿನ ಬಳಿ (1) ಪ್ರೇಮ, (2) ಸತ್ ಪ್ರವರ್ತನೆ (3) ವಿನಯ (4) ನಂಬಿಕೆ (5) ವಿಶ್ವಾಸದಿಂದ ಇರುವುದನ್ನು ಕಲಿತುಕೊಳ್ಳಬೇಕು.

## 1. ಪ್ರೇಮ

ಮೊದಲು ಶಿಷ್ಯನಿಗೆ ಗುರುವಿನ ಮೇಲೆ ಪ್ರೇಮವಿರಬೇಕು. ಅಷ್ಟೇ ಅಲ್ಲ ಆಸ್ತಿ ಪಾಸ್ತಿಗಳ ಮೇಲೆ, ತಂದೆ ತಾಯಿಗಳ ಮೇಲೆ, ಹೆಂಡತಿ ಮಕ್ಕಳ ಮೇಲೆ ಬಂಧುಗಳ ಮೇಲೆ, ಕುಲದ ಮೇಲೆ, ಮತದ ಮೇಲೆ, ದೇಶದ ಮೇಲೆಗಿಂತಲೂ ಗುರುವಿನ ಮೇಲೆ ಪ್ರೇಮವನ್ನು ತೋರಿಸಬೇಕು. ಏಕೆಂದರೆ? ಇವರು ಯಾರೂ ದೈವವನ್ನು ತೋರಿಸಲಾರರು. ಒಬ್ಬ ಗುರುವು ಮಾತ್ರವೆ ದೈವವನ್ನು ಸೇರುವ ಮಾರ್ಗವನ್ನು ತೋರಿಸಬಲ್ಲನು, ಆದ್ದರಿಂದ ಎಲ್ಲರ ಮೇಲೆಗಿಂತಲೂ ಗುರುವಿನ ಮೇಲೆ ಹೆಚ್ಚಿನ ಪ್ರೇಮ ತೋರಿಸಬೇಕು.

ಆಗ ಅವರ ಮಾತು, ಅವರ ಬೋಧನೆಗಳು, ಅವರ ಜ್ಞಾನ ಹತ್ತುತ್ತವೆ. ಈ ಪ್ರಪಂಚದಲ್ಲಿ ಅಜ್ಞಾನಿಗೆ ಎಷ್ಟು ದುಃಖವಿರುತ್ತದೆ. ಕಾರಣ ಸತ್ಯವಲ್ಲದ್ದನ್ನು ಸತ್ಯವೆಂದು ಅಂದುಕೊಳ್ಳುವುದು. ಹಾಗಾದರೆ ಸತ್ಯವಲ್ಲದ್ದನ್ನು ಹಿಡಿದುಕೊಂಡಾಗ ಅವರ ಜೀವನದಲ್ಲಿ ಆನಂದ ಹೇಗೆ ಇರುತ್ತದೆ? ಯಾವಾಗಲು ದುಃಖವೆ ಇರುತ್ತದೆ. ಆ ದುಃಖ ಕಳೆಯುವ ಮಾರ್ಗವೆ ಜ್ಞಾನ, ಆ ಜ್ಞಾನವನ್ನು ಕೊಡುವುದು ಗುರುವೆ ಆದ ಕಾರಣ ಗುರುವಿನ ಬಗ್ಗೆ ಪ್ರೇಮದಿಂದ ಇರಬೇಕು.

## 2. ಸತ್ ಪ್ರವರ್ತನೆ

ಸತ್ ಪ್ರವರ್ತನೆ ಅಂದರೆ, ನಾನು ಹೇಳದ ಹೊರತು ಗುರುವಿಗೆ ತಿಳಿಯದು ಎಂದು ಶಿಷ್ಯನು ಅಂದುಕೊಳ್ಳಬಾರದು, ಅಸತ್ಯವನ್ನು ಹೇಳಬಾರದು, ಸತ್ಯವನ್ನು ಹೇಳಬೇಕು. ಪಕ್ಕದವರ ಮೇಲಾಗಲಿ, ಹೊರಗಿನವರ ಮೇಲಾಗಲಿ, ನಿನಗೆ ಇಷ್ಟವಾದವರ ಕುರಿತಾಗಲಿ, ಯಾರ ಕುರಿತು ಕೂಡ ಗುರುವಿನ ಬಳಿ ಶಿಷ್ಯನು ಮಾತನಾಡಬಾರದು. ಗುರುವಿನ ಮುಂದೆ ಶಿಷ್ಯನು ಯಾರನ್ನೂ ಕೇವಲವಾಗಿ ನೋಡಬಾರದು. ಬಹಳ ಎಚ್ಚರದಿಂದ ಅಂದರೆ, ದೈವವೇ ನನ್ನ ಮುಂದೆ ಬಂದು ನಿಂತಿದ್ದಾನೆ, ಆತನಿಗೆ ಏನು ತಿಳಿಯದೆ ಇರುವುದಿಲ್ಲ, ಅಂದರೆ ಗುರುವಿಗೆ ತಿಳಿಯಲಾರದ್ದು ಎನ್ನುವುದು ಏನೂ ಇರುವುದಿಲ್ಲ ಎಂದು  ಶಿಷ್ಯನು ತಿಳಿದುಕೊಳ್ಳಬೇಕು. ಒಬ್ಬ ಸದ್ಗುರುವಿಗೆ ಎಷ್ಟು ಶಕ್ತಿ

ಇರುತ್ತದೆ, ಅದಕ್ಕೆ ವ್ಯರ್ಥವಾದ ಮಾತುಗಳು, ವ್ಯರ್ಥ ಸಂಭಾಷಣೆಗಳು, ಅವಸರವಿಲ್ಲದ ಮಾತುಗಳು, ಪಕ್ಕದವರ ಮೇಲೆ ಚಾಡಿಗಳು ಯಾವುದೂ ಕೂಡಾ ಗುರುಗಳ ಬಳಿ ಶಿಷ್ಯನು ಹೇಳಬಾರದು. ಆತನಿಗೆ ಎಲ್ಲಾ ತಿಳಿಯುತ್ತವೆ ಎಂದು ತಿಳಿಯಬೇಕು. ಅತ್ಯವಸರವಾದ ಮಾತುಗಳನ್ನೇ ಮಾತನಾಡಬೇಕು, ಅವಸರವಿಲ್ಲದಿದ್ದರೆ ಮೌನವಾಗಿರಬೇಕು. ಅಷ್ಟೇ ಅಲ್ಲ ಗುರುವು ಮಾತನಾಡುತ್ತಿರುವಾಗ ಶಿಷ್ಯನು ಕೇಳುತ್ತಿರಬೇಕು ಗುರುವು ಸಲಿಗೆ ಕೊಟ್ಟನೆಂದು ಸುಮ್ಮನೆ ಗಲಗಲವೆಂದು ಮಾತನಾಡಬಾರದ. ಇನ್ನೊಂದು ವಿಷಯವೇನೆಂದರೆ? ಎದುರಿಗೆ ಇರುವವರ ಕುರಿತು ಮಾತನಾಡುತ್ತಿದ್ದರೆ ನಾನು ಹೇಳಿದ ಪಾಠಗಳು ಶಿಷ್ಯನಿಗೆ ಎನ್ನು ಅರ್ಥವಾಗಿಲ್ಲ ಎಂದು ಗುರುವು ಅಂದುಕೊಳ್ಳುತ್ತಾರೆ. ಎಲ್ಲರಲ್ಲಿರುವುದು ಒಂದೆ ಆತ್ಮ ಎಂದು ಹೇಳಿದರೂ ಇವನು ಇನ್ನು ಹೇಗೆ ಮಾತನಾಡುತ್ತಿದ್ದಾನಲ್ಲ ಎಂದು ಗುರುಗಳು ಅಂದುಕೊಳ್ಳುತ್ತಾರೆ. ಅಂದರೆ ಅವರು ಹೇಳಿದ ಪಾಠ ಶಿಷ್ಯನಿಗೆ ಇನ್ನೂ ಹತ್ತಿಲ್ಲವೆಂದು ಗುರುಗಳು ಗ್ರಹಿಸುತ್ತಾರೆ. ಅದಕ್ಕೆ ಪತ್ರೀಜಿಯವರು "ನಿನ್ನ ಮಾತು ನಿನಗಾಗಲಿ ಉಪಯೋಗವಾಗಬೇಕು, ಇಲ್ಲಾ ಎದುರಿಗಿರುವವರಿಗಾದರೂ ಉಪಯೋಗವಾಗಬೇಕು, ಹಾಗೆ ಉಪಯೋಗವಿಲ್ಲದ ಮಾತುಗಳನ್ನು ಮಾತನಾಡಬಾರದು" ಎಂದು ಹೇಳುತ್ತಾರೆ. ಅವರು "ನೋ ಕಾಮೆಂಟ್ಸ್, ನೋ ಜಡ್ಜ್‌ಮೆಂಟ್ ಎನ್ನುತ್ತಾರೆ. ಅಂದರೆ ಈ ಸಂದೇಶದಲ್ಲಿ ಎಷ್ಟೋ ಅರ್ಥವಿದೆ. ಆದ್ದರಿಂದ ಗುರುವಿನ ಬಳಿ ಶಿಷ್ಯನು ಬಹಳ ಜಾಗೃತವಾಗಿ, ಎಚ್ಚರದಿಂದ ಮಾತನಾಡಬೇಕು. ಅವರು ಕೇಳಿದ್ದಕ್ಕೆ ಮಾತ್ರವೇ ಉತ್ತರವನ್ನು ಕೊಡಬೇಕು, ಹಾಗೆ ಶಿಷ್ಯನ ಪ್ರವರ್ತನೆ ಇರಬೇಕು.

## 3. ವಿನಯ

ಗುರುವಿನ ಬಳಿ ಶಿಷ್ಯನು ಬಹಳ ವಿನಯದಿಂದ ಇರಬೇಕು. ಆ ವಿನಯ ರಾಜನ ಬಳಿ ಭಟ್ಟನು ಇದ್ದಂತೆ, ಯಜಮಾನಿಯ ಹತ್ತಿರ ಸೇವಕನು ಇದ್ದಂತೆ ಗುರುವಿನ ಬಳಿ ಶಿಷ್ಯನು ಎಷ್ಟೋ ವಿನಯದಿಂದ ಇರಬೇಕು. ಹಾಗೆ ವಿನಯದಿಂದ ಇದ್ದರೇನೆ ಶಿಷ್ಯನಿಗೆ ಜ್ಞಾನ ಬರುತ್ತಿರುತ್ತದೆ.

ಅದಕ್ಕೆ ಉಪನಿಷತ್ತುಗಳು ಕೂಡ ಅಹಂಕಾರಿಗೆ ಆತ್ಮಜ್ಞಾನವು ಹತ್ತುವುದಿಲ್ಲ ಎಂದು ಹೇಳಿವೆ. ಶಿಷ್ಯನು ತಲೆ ಎಗರಿಸಿ ಈ ವಿಷಯ ನನಗೆ ಗೊತ್ತುಬಿಡು ಎಂದು ಅಂದುಕೊಳ್ಳಬಾರದು. ಗುರುವಿನ ಬಾಯಿಯಿಂದ ಬಂದಿತೆಂದರೆ? ಆ ವಿಷಯಗಳು ಅಲ್ಲಿ ಯಾರಿಗೂ ಅವಶ್ಯಕವಿತ್ತು ಆದಕಾರಣ ಹೇಳುತ್ತಿದ್ದಾರೆಂದು ತಿಳಿದುಕೊಳ್ಳಬೇಕು.

ಶಿಷ್ಯನು ತನ್ನ ಮಟ್ಟಿಗೆ ಮಾತ್ರ ನೋಡಿಕೊಳ್ಳುತ್ತಾನೆ. ಆದರೆ ಗುರುವು ಅಲ್ಲಿ ಇರುವವರಿಗೆ ಕೂಡ ಆ ವಿಷಯವು ಅವಶ್ಯವೆಂದು ಹೇಳುತ್ತಾರೆ. ಶಿಷ್ಯನು ತನ್ನ ಒಳಿತನ್ನೇ ನೋಡಿಕೊಳ್ಳುತ್ತಾನೆ. ಆದರೆ ಗುರುವು ಎಲ್ಲರೂ ಚೆನ್ನಾಗಿರಬೇಕು, ಎಲ್ಲರೂ ಕಲಿತುಕೊಳ್ಳಬೇಕು ಎಂದು ಹೇಳಿದ್ದನ್ನೇ ಪದೇ ಪದೇ ಒಂದನ್ನು ನಾಲ್ಕು ಸಾರಿ ಹೇಳುತ್ತಾರೆ. ಅದರ ಅರ್ಥ ಅಲ್ಲಿ ಯಾರ ತಲೆಗೂ ಏರುತ್ತಿಲ್ಲವಾದ್ದರಿಂದ ಅವರಿಗೆ ಅರ್ಥವಾಗುವುದಕ್ಕೆ ಗುರುವು ಪ್ರಯತ್ನಿಸುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ?

ಕೆಲವು ಶಿಷ್ಯರು ಚೆನ್ನಾಗಿ ಗ್ರಹಿಸಿಬಲ್ಲವರಾಗಿರುತ್ತಾರೆ. ಕೆಲವರು ಬೇಗನೆ ಗ್ರಹಿಸಲಾರರು. ಕೆಲವರಿಗೆ ಇದು ಹಳೆಯ ವಿಷಯವಲ್ಲವೆ? ಎಂದು ಕೂಡ ಅಂದುಕೊಳ್ಳುತ್ತಾರೆ. ಆದರೆ ಅಲ್ಲಿ ನಿನಗೆ ಅಹಂ ಬಂದಂತೆ ಗುರುವಿನಿಂದ ಪ್ರಕೃತಿ ಆ ಮಾತುಗಳನ್ನು ಪುನಃ ಹೇಳಿಸುತ್ತದೆ, ಅಂದರೆ ಕೆಲವರು ಅದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ತಿಳಿದುಕೊಳ್ಳಬೇಕು.

ಅಷ್ಟೇ ಅಲ್ಲ ಒಂದೊಂದು ಸಾರಿ ಯಾರಾದರೂ, ಏನಾದರೂ ಚಿಕ್ಕ ವಿಷಯ ಹೇಳಿದರೂ, ಸಣ್ಣ ಅನುಭವವನ್ನು ಹೇಳಿದರೂ ಚಪ್ಪಾಳೆ ಹೊಡೆಸಿ ಗುರುಗಳು ಅವರನ್ನು ಪ್ರಶಂಸಿಸುತ್ತಾರೆ. ಆಗ ಸೀನಿಯರ್‌ಗಳು ಏನೆಂದು ಕೊಳ್ಳುತ್ತಾರೆಂದರೆ? ಅಷ್ಟು ಮಾತ್ರಕ್ಕೆ ಚಪ್ಪಾಳೆ ಹೊಡೆಸಬೇಕೆ? ಆ ವಿಷಯಗಳು ನನಗೆ ಯಾವಾಗಲೋ ಗೊತ್ತು ಅದಕ್ಕಿಂತಲೂ ದೊಡ್ಡ ಅನುಭವ ನನಗೆ ಬಂದಿದೆ, ಅದೇನು ಅಷ್ಟು ದೊಡ್ಡದು ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ.

ಆದರೆ ಗುರುಗಳು ಅಷ್ಟು ಸಣ್ಣ ವಿಷಯಕ್ಕೆ ಕೂಡ ಅಷ್ಟೊಂದು ಚಪ್ಪಾಳೆ ಹೊಡೆಸಲು ಕಾರಣವಿಲ್ಲದಿಲ್ಲ. ಒಂದು ಉದಾಹರಣೆ ನೋಡೋಣ. ನೋಡಿರಿ ಹೊಸದಾಗಿ ನಡಿಗೆ ಕಲಿತ ಚಿಕ್ಕ ಮಗು ತಪ್ಪು ಹೆಜ್ಜೆಗಳನ್ನು ಇಡುತ್ತಾನೆ. ಆಗ ಎಲ್ಲರೂ ಚಪ್ಪಾಳೆ ಹೊಡೆದು ಅವನನ್ನು ಪ್ರೋತ್ಸಾಹಿಸುತ್ತಾರೆ. ಅಷ್ಟೇ ಹೊರತು ಅವನೇನೋ ದೊಡ್ಡ ಕೆಲಸ ಮಾಡಿದ್ದಾನೆಂದು ಅಲ್ಲ, ಅವನ ವಿಷಯದಲ್ಲಿ ಅವನು ದೊಡ್ಡ ವಿದ್ಯೆ ಕಲಿತಂತೆಯೆ.

ಅದನ್ನು ನೋಡಿ ನಾನು ಓಡುತ್ತಿದ್ದೇನೆ, ಆದರೆ ಯಾರು ನನಗೆ ಚಪ್ಪಾಳೆ ಹೊಡೆಯುತ್ತಿಲ್ಲವಲ್ಲ? ಆ ಮಾತ್ರಕ್ಕೆ ಚಪ್ಪಾಳೆ ಹೊಡೆಯಬೇಕೆ ಎಂದು ಅಂದುಕೊಂಡರೆ ಅವನು ಮೂರ್ಖನ ಕೆಳಗೆ ಲೆಕ್ಕ ಏಕೆಂದರೆ? ಆ ಸಣ್ಣ ಮಗುವಿನ ಸ್ಥಾಯಿಗೆ ಅದು ಬಹಳ ದೊಡ್ಡದೆ!

ಹಾಗೆಯೆ ಹೊಸದಾಗಿ ಈ ಧ್ಯಾನಮಾರ್ಗದಲ್ಲಿ ಬಂದವನಿಗೆ ಸಣ್ಣದಾದ

ಅನುಭವಗಳು ಬಂದರೂ ಹಾಗೆಯೇ ಸ್ವಲ್ಪವೇ ಕಲಿತರು, ಅದು ಅವರಿಗೆ ದೊಡ್ಡದೆ. ಅದಕ್ಕೆ ಗುರುಗಳು ಅವರನ್ನು ಹಾಗೆ ಪ್ರೋತ್ಸಾಹಿಸುತ್ತಾರೆ. ಆದರೆ ಇದು ಶಿಷ್ಯರಿಗೆ ಅರ್ಥವಾಗುವುದಿಲ್ಲ.

ಆದ್ದರಿಂದ ಸದ್ಗುರುಗಳು ಯಾವಾಗ ಏನು ಮಾಡುತ್ತಾರೆ ಯಾರಿಗೂ ಅರ್ಥವಾಗದು. ಆದ್ದರಿಂದ ಗುರುಗಳು ಮಾಡುವ ಕೆಲಸಗಳ ಕುರಿತಾಗಲಿ, ಹೇಳುವ ಮಾತುಗಳನ್ನು ಕುರಿತಾಗಲಿ ಶಿಷ್ಯನು ಆಲೋಚಿಸಬಾರದು, ಅವರು ಮಾಡುವ ಪ್ರತಿಯೊಂದನ್ನೂ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು, ಅಷ್ಟೇ ಅಲ್ಲ ಗುರುಗಳು ಹೇಳುವ ಪ್ರತಿಯೊಂದಕ್ಕೂ ಏನೋ ಅರ್ಥ, ಕಾರಣವಿರುತ್ತದೆ. ಅದು ಶಿಷ್ಯರಿಗೆ ಅರ್ಥವಾಗುವುದಿಲ್ಲ.

ಶಿಷ್ಯನು ಮೊದಲ ಬಾರಿ ಕೇಳಿದಾಗ ಶ್ರವಣವಾಗುತ್ತದೆ. 2ನೇ ಬಾರಿ ಕೇಳಿದಾಗ ಮನನವಾಗುತ್ತದೆ. ಆದರೂ ಶಿಷ್ಯನು ಇನ್ನು ಆಳವಾಗಿ ಹೋಗುತ್ತಿಲ್ಲ. ಆದ್ದರಿಂದ ತಿಳಿಯುವವರೆಗೂ ಗುರುಗಳು ಹೇಳುತ್ತಿದ್ದಾರೆ ಎಂದು ವಿನಯವಾಗಿ ಇರಬೇಕು, ಅಹಂಕಾರದಿಂದ ಮನಸ್ಸನ್ನು ಇನ್ನೊಂದು ಕಡೆಗೆ ಹೋಗಗೊಡಬಾರದು. ಶಿಷ್ಯನು ಏನು ಮಾಡುತ್ತಿದ್ದರೂ ಗುರುಗಳಿಗೆ ಎಲ್ಲಾ ತಿಳಿಯುತ್ತಿರುತ್ತವೆ ಆದ್ದರಿಂದ, ಶಿಷ್ಯನು ಮನಸ್ಸನ್ನು ನಿಶ್ಚಲವಾಗಿ ಮಾಡಿಕೊಳ್ಳಬೇಕು. ಶಿಷ್ಯನ ದೃಷ್ಟಿ ಗುರುಗಳ ಮೇಲೆ ಹೊರತು ಪಕ್ಕಕ್ಕೆ ಹೋಗದಂತೆ ನಿಶ್ಚಲವಾಗಿದ್ದಾಗಲೆ ಅಮೂಲ್ಯವಾದ ರತ್ನದಂತಹ ಗುರುಗಳ ಮಾತುಗಳು ಶಿಷ್ಯನಲ್ಲಿ ಆಳವಾಗಿ ಬೇರೂರುತ್ತವೆ.

## 4. ನಂಬಿಕೆ

ಶಿಷ್ಯನಿಗೆ ಸದ್ಗುರುವು ಹೇಳುವ ಸಾಧನೆಯ ಮೇಲೆ ಬೋಧನೆಗಳ ಮೇಲೆ ನಂಬಿಕೆ ಇರಬೇಕು. ಆ ಸಾಧನೆ ಮಾಡುತ್ತಿರುವಾಗ ಸರಿಯಿಲ್ಲದ ಸಾಧನೆಗಳನ್ನು ಯಾರು ಹೇಳಿದರೂ ನಂಬಬಾರದು. ಸದ್ಗುರುವು ಏನು ಹೇಳುತ್ತಿದ್ದರೂ ಅದನ್ನು ಪರಮಾತ್ಮ ಹೇಳುತ್ತಿದ್ದಾನೆ ಎನ್ನುವ ನಂಬಿಕೆಯಿಂದ ಕೇಳಬೇಕು. ಸದ್ಗುರುವು "ಶ್ವಾಸದ ಮೇಲೆ ಗಮನ" ವಿಟ್ಟು ಧ್ಯಾನ ಮಾಡಬೇಕು ಎಂದು ಹೇಳಿದಾಗ ಅದು ಅಲ್ಲವೆಂದು ಹತ್ತು ಮಂದಿ ಹೇಳಿದ್ದನ್ನು ಕೇಳಿದರೆ ನಷ್ಟ ಹೋಗುವುದು ಶಿಷ್ಯನೆ.

ಏಕೆಂದರೆ? ಸದ್ಗುರುವು ಏನನ್ನಾಗಲಿ ಅನುಭವ ಜ್ಞಾನದಿಂದ ಹೇಳುತ್ತಾನೆ. ಆದ್ದರಿಂದ ಯಾವ ಶಿಷ್ಯನಾಗಲಿ ಮೊದಲು ತಾನು ಆಶ್ರಯಿಸಿದ್ದು ಸದ್ಗುರುವನ್ನು ಎಂದು ನಿರ್ಧರಿಸಿಕೊಳ್ಳಬೇಕು, ಸದ್ಗುರುವಿನ ಲಕ್ಷಣಗಳನ್ನು ತಿಳಿದುಕೊಳ್ಳಬೇಕು, ಅಂತಹ ಸದ್ಗುರುವನ್ನು ನಂಬಿದರೂ ಕೂಡಾ ಶಿಷ್ಯನು ನಷ್ಟ ಹೊಂದುವುದಿಲ್ಲ.

ಅಷ್ಟೇ ಅಲ್ಲ ಶಿಷ್ಯನು ಈ ಶ್ವಾಸದ ಮೇಲೆ ಗಮನ ಧ್ಯಾನ ಕುರಿತು ಆಳವಾಗಿ ಅಧ್ಯಯನ ಮಾಡಿದರೆ, ಅದು ಎಷ್ಟು ಶ್ರೇಷ್ಠವಾದದ್ದು ಎಂದು ಅರ್ಥವಾಗುತ್ತದೆ. ಅಷ್ಟೇ ಅಲ್ಲ ನೀನೇ ದೇವರು ಎಂದು ಗುರುಗಳು ಅದು ಸತ್ಯವೆಂದು ನಂಬಿ, ದೈವ ಹೇಗೆ ಆಗುತ್ತೇನೆ? ದೈವ ಆಗಲು ಬೇಕಾದ ಜ್ಞಾನವನ್ನು ಹೇಗೆ ಹೊಂದಬೇಕು? ಯಾವ ಸಾಧನ ಮಾಡಬೇಕು? ಎಂದು ಆಲೋಚಿಸಬೇಕು. ಅಷ್ಟೇ ಹೊರತು ನಾನು ದೇವರೆಂದರೇನು? ನನಗೆ ಮಹಿಮೆಗಳು ಇಲ್ಲವಲ್ಲ? ನಾನು ಹೇಗೆ ದೇವರಾಗುತ್ತೇನೆ? ನಾನು ದೇವರಾದರೆ ಈ ಕಷ್ಟಗಳೆಲ್ಲಾ ಏತಕ್ಕೆ? ಎಂದು ನಿರುತ್ಸಾಹ ಪಟ್ಟರೆ ಎಷ್ಟು ಜನ್ಮಗಳನ್ನು ಪಡೆದರೂ ನೀನು ದೇವರಾಗಲಾರೆ.

ಆದರೆ ಜೀವನಾಗಿ ಹುಟ್ಟಿದ ಪ್ರತಿಯೊಬ್ಬನು ದೇವರಾಗಲು ಭೂಮಿಯ ಮೇಲೆ ಬರುತ್ತಾನೆ. ಅದನ್ನೇ ಸದ್ಗುರುವು ಹೇಳುತ್ತಾನೆ. ಜೀವನಾಗಿ ಹುಟ್ಟಿದ ಶಿಷ್ಯನು ಅನುಭವಗಳನ್ನು ಹೊಂದಿ, ಪಾಠಗಳನ್ನು ಕಲಿತು ತಾನೆ ದೈವವೆಂದು ತಿಳಿದುಕೊಳ್ಳುವವರೆಗೂ ಭೂಮಿಗೆ ಮತ್ತೆ ಮತ್ತೆ ಬರುತ್ತಾನೆ. ಅದಕ್ಕೆ ಸದ್ಗುರುವಿನ ಮಾತಿನ ಮೇಲೆ ನಂಬಿಕೆ ಇರಬೇಕು. ಗುರುವಿನ ಮಾತು ನನಗೆ (ವೇದದ ಮಾತು) ವೇದವಾಕ್ಯ ಎಂದು ನಂಬಿಕೆ ಇರಬೇಕು, ಆಗಲೆ ಶಿಷ್ಯನು ದೇವರಾಗಬಲ್ಲನು, ದುಃಖದಿಂದ ಶಾಶ್ವತವಾಗಿ ಹೊರಬರುತ್ತಾನೆ.

## 5. ವಿಶ್ವಾಸ

ಶಿಷ್ಯನಿಗೆ ಗುರುವಿನ ಮಾತಿನ ಮೇಲೆ ವಿಶ್ವಾಸ ಇರಬೇಕು. ಕಾರಣ ಇಂತಹ ಮಹಾನುಭಾವರ ಬಾಯಿಯಿಂದ ಅಸತ್ಯದ ಮಾತುಗಳು ಬರುವುದಿಲ್ಲ, ಅವರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ. ಜ್ಞಾನ ಪರವಾದ ಮಾತುಗಳನ್ನೇ ಹೇಳುತ್ತಾರೆ.

ಶಬರಿ ಕುರಿತು ಎಲ್ಲರಿಗೂ ಗೊತ್ತು. ಶಬರಿ ಎನ್ನುವ ಹೆಸರು ಆಕೆಗೆ ಹೇಗೆ ಬಂದಿತೆಂದರೆ? ಆಕೆ ಶಮೆ, ದಮೆಯಾದಿ, ಪಟ ಸಂಪತ್ತಿನ ಭಕ್ತಿಯಿಂದ ಆಚರಿಸಿದಳು. ಪಟ ಸಂಪತ್ತು ಅಂದರೆ ಶಮೆ, ದಮೆ, ತಿತೀಕ್ಷ, ಉಪರತಿ, ಶ್ರದ್ಧಾ, ಸಮಾದಾನವೆಂಬ ಈ 6ನ್ನು ಕೂಡಾ ಆಕೆಯು ಭಕ್ತಿಯಿಂದ ಆಚರಿಸುತ್ತಿದ್ದಳಂತೆ. ಅದಕ್ಕೆ ಆಕೆಗೆ ಶಬರಿ ಎಂಬ ಹೆಸರು ಬಂದಿತು.

## ಶಬರಿಯ ಗುರುಗಳು ಮಾತಂಗ ಮಹರ್ಷಿ,

ಶಬರಿ ಮಾತಂಗ ಮಹರ್ಷಿ ಆಶ್ರಮದಲ್ಲಿ ಕೆಲಸ ಮಾಡುವ ದಾಸಿ, ಆದರೆ ಎಷ್ಟೋ ವಿಷಯಗಳು ಆ ಗುರುವಿನ ಸಜ್ಜನ ಸಾಂಗತ್ಯದಿಂದ ಅಲ್ಲಿಗೆ ಬರುವ ಶಿಷ್ಯರಿಂದ

ಮುನಿಗಳಿಂದ ಅವರು ಪರಮಾತ್ಮನ ಕುರಿತು ಮಾತನಾಡುವ ಮಾತುಗಳಿಂದ ಆಕೆಗೆ ಆ ಪರಮಾತ್ಮನ ಮೇಲೆ ವಿಪರೀತವಾದ ಭಕ್ತಿ ಉಂಟಾಯಿತು. ಆ ಭಕ್ತಿಯಿಂದ ಆಕೆಯು ಪರಮಾತ್ಮನನ್ನು ದರ್ಶಿಸಬೇಕು ಎಂದು ಅಂದುಕೊಂಡಳು. ಆಗ ಶಬರಿ ಮಾತಂಗ ಮಹರ್ಷಿಯನ್ನು ಕೇಳಿದಳು. ಗುರುಗಳೇ ನೀವು ಓದಿಕೊಂಡಿದ್ದೀರಿ. ಸಾಧನೆ ಮಾಡುತ್ತಿದ್ದೀರಿ, ಚರ್ಚೆ–ಗೋಷ್ಠೀಗಳನ್ನು ಮಾಡುತ್ತಿದ್ದೀರಿ. ನಾನು ದಾಸಿಯಲ್ಲವೇ? ನನಗೆ ಆ ಪರಮಾತ್ಮನ ದರ್ಶನವಾಗುತ್ತದೆಯೇ? ಎಂದು ಕೇಳಿದಳು.

ಆಗ ಮಾತಂಗ ಮಹರ್ಷಿ, ನಾವು ಸ್ವಲ್ಪ ಹೊತ್ತೇ ಸಾಧನೆ ಮಾಡುತ್ತಿದ್ದೇವೆ, ಆದರೆ ನೀನು ಆ ಪರಮಾತ್ಮನ ಚಿಂತನೆ ಬಿಟ್ಟು ಎರಡನೇಯದು ನಿನಗಿಲ್ಲ. ಅಂದರೆ ನೀನು ನಿರಂತರ ಸಾಧನೆಯಲ್ಲಿಯೇ ಇರುವೆ. ನಿನಗೆ ತಪ್ಪದೆ ಶ್ರೀ ರಾಮನ ರೂಪದಲ್ಲಿ ಆ ಪರಮಾತ್ಮನೆ ನಿನ್ನ ಬಳಿಗೆ ಬರುತ್ತಾನೆ ಎಂದು ಮಾತಂಗ ಮಹರ್ಷಿ ಹೇಳಿದರು. ಶಬರಿ ಗುರುಗಳನ್ನು ವಿಶ್ವಾಸಿಸಿದಳು, ಶ್ರೀ ರಾಮನಿಗಾಗಿ ಎದುರು ನೋಡಿದಳು, ಕೊನೆಗೆ ಶ್ರೀ ರಾಮನ ದರ್ಶನವಾಯಿತು.

ನಾವೆಲ್ಲರೂ ಕೂಡಾ ಪತ್ರೀಜಿಯವರು ಏನು ಹೇಳಿದರೂ, ನನ್ನ ಆತ್ಮದ ಉದ್ಧಾರಕ್ಕೆ ಹೇಳುತ್ತಿದ್ದಾರೆ, ನನ್ನ ದುಃಖವನ್ನು ಕಳೆದುಕೊಳ್ಳುವ ಮಾರ್ಗವೇ ಧ್ಯಾನ, ಗುರುಗಳು ಜ್ಞಾನ ಹೊಂದಲೆಂದೇ ನನಗೆ "ಶ್ವಾಸದ ಮೇಲೆ ಗಮನ" ಎನ್ನುವ ಧ್ಯಾನ ಹೇಳಿದ್ದಾರೆಂದು ಅವರ ಮಾತಿನ ಮೇಲೆ ವಿಶ್ವಾಸವಿಟ್ಟೆವು. ಹಾಗೆ ಪತ್ರೀಜಿವಯರ ಮೇಲೆ ವಿಶ್ವಾಸ ಇಟ್ಟೆವು, ಆದ್ದರಿಂದ ಇಷ್ಟು ತೀವ್ರ ಸಾಧನೆ, ಇಷ್ಟು ಶ್ರದ್ಧೆಯಿಂದ ಮಾಡುತ್ತಿದ್ದೇವೆ ಅಷ್ಟೇ ಅಲ್ಲ ಜ್ಞಾನದ ಪರವಾಗಿ ಎಷ್ಟೋ ಬೆಳೆದೆವು.

ಆದ ಕಾರಣ ಶಿಷ್ಯನು ಗುರುವಿನ ಮಾತನ್ನು ವಿಶ್ವಾಸಿಸಬೇಕು, ಅಷ್ಟೇ ಅಲ್ಲ ಗುರುಗಳು ಯಾವುದು ಶಾಶ್ವತ? ಯಾವು ಅಶಾಶ್ವತ? ಎಂದು ಹೇಳುವುದರಿಂದ ನಿತ್ಯ, ಅನಿತ್ಯ ವಸ್ತು ವಿವೇಕವು ಶಿಷ್ಯನಿಗೆ ಬರುತ್ತದೆ. ಆಗ ಆತ್ಮನನ್ನು ಹಿಡಿಯಬೇಕೆ? ವಿಗ್ರಹವನ್ನು ಹಿಡಿಯಬೇಕೆ? ಪ್ರಪಂಚವನ್ನು ಹಿಡಿಯಬೇಕಾ? ಪರಮಾತ್ಮನ್ನು ಹಿಡಿಯಬೇಕೇ? ಎನ್ನುವುದನ್ನು ಶಿಷ್ಯನು ಕಲಿಯುತ್ತಾನೆ. ಅಷ್ಟೇ ಅಲ್ಲ ಗುರುವಿನಿಂದ ಯಾವ ಕೆಲಸ ಮಾಡಬೇಕು? ಹೇಗೆ ಮಾಡಬೇಕು? ಯಾವಾಗ ಮಾಡಬೇಕು? ಹೇಗೆ ಮಾತನಾಡಬೇಕು? ಏನು ತಿನ್ನಬೇಕು? ಎಷ್ಟು ತಿನ್ನಬೇಕು? ಹೇಗೆ ಸಾಧನೆ ಮಾಡಬೇಕು? ಎಷ್ಟು ಸಾಧನೆ ಮಾಡಬೇಕು? ಜ್ಞಾನವನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು? ಇಂತಹವುಗಳನ್ನು ಗುರುವಿನಿಂದ ಶಿಷ್ಯನು ಕಲಿತುಕೊಳ್ಳುತ್ತಾನೆ.

ಅಷ್ಟೇ ಅಲ್ಲ, ಶಿಷ್ಯನು ಗುರುವಿನ ಮಾತಿನ ಮೇಲೆ ದೃಷ್ಟಿ ಇಡಬೇಕಾಗಲಿ, ಗುರುವು

ಮಾಡುವ ಕೆಲಸಗಳ ಮೇಲೆ ದೃಷ್ಟಿ ಇಡಬಾರದು. ಆಗಲೆ ಶಿಷ್ಯನು ಬೆಳೆಯುತ್ತಾ ಇರುತ್ತಾನೆ. ಕೆಲವು ಜನ ಶಿಷ್ಯರು ನಾನು ಬಹಳ ತಿಳಿದುಕೊಂಡಿದ್ದೇನೆ. ಬಹಳ ಮಂದಿಗೆ ಕ್ಲಾಸುಗಳನ್ನು ಸಹ ಹೇಳುತ್ತಿದ್ದೇನೆ, ಗುರುವಾಗಿ ಬೆಳೆದಿದ್ದೇನೆ ಎಂದು ಭಾವಿಸುವುದಲ್ಲದೆ ನನಗೆ ಎಲ್ಲ ಗೊತ್ತು ಎಂದು ಅಂದುಕೊಳ್ಳುತ್ತಾರೆ. ಆದರೆ ಶಿಷ್ಯನು ಒಂದು ಹೆಜ್ಜೆ ಮುಂದೆ ಬೆಳೆದರೆ ಗುರುವು 10 ಹೆಜ್ಜೆ ಮುಂದಕ್ಕೆ ಬೆಳೆಯುತ್ತಾನೆ ಎಂದು ತಿಳಿದುಕೊಳ್ಳಬೇಕು.

ಆದ್ದರಿಂದ ಗುರುಗಳ ಬಳಿ ಎಷ್ಟು ಕಲಿತರೂ ಇನ್ನೂ ಕಲಿಯಬೇಕಾದದ್ದು ಇದ್ದೇ ಇರುತ್ತದೆ ಎಂದು ತಿಳಿದುಕೊಂಡು, ವಿನಯವಾಗಿ ಇದ್ದು ಇನ್ನೂ ಎಷ್ಟೋಂದು ಕಲಿತುಕೊಳ್ಳುತ್ತಾ ಬೆಳೆಯಲು ಪ್ರಯತ್ನಿಸಬೇಕು.

ಗುರುವಿನಿಂದ ಇವನ್ನೆಲ್ಲಾ ತಿಳಿದುಕೊಂಡು ಆಚರಿಸಿದ ಮೇಲೆ ಶಿಷ್ಯನು ಆನಂದದಲ್ಲಿ ಇರುತ್ತಾನೆ, ಅನಂತದೆಡೆಗೆ ಪಯಣಿಸುತ್ತಾ ಇರುತ್ತಾನೆ. ಅಷ್ಟೇ ಅಲ್ಲ, ಅನಂತ ಲೋಕಗಳಲ್ಲಿ ಹೇಗೆ ಇರುತ್ತಾರೆ ಎನ್ನುವುದನ್ನು ಆ ಗುರುವಿನಿಂದ ಅರ್ಥವಾಗುತ್ತದೆ. ಕಾರಣ ಗುರುವು ಅದಃ ಪಾತಾಳಕ್ಕೆ ಹೋಗದೆ ಶಿಷ್ಯನನ್ನು ಅನಂತ ಲೋಕಗಳಿಗೆ ಕರೆದೊಯ್ಯುತ್ತಾನೆ. ಸದ್ಗುರು ಶಿಷ್ಯನ ಜೀವನದಲ್ಲಿ ಬರದೆ ಹೋದರೆ ದುಃಖದಲ್ಲಿ ಮುಳುಗುವುದೇ ಅಲ್ಲದೆ, ಪುನರಪಿ ಜನನಂ–ಪುನರಪಿ ಮರಣಂ ಎಂದು ತಿರುಗುತ್ತಲೆ ಇರುತ್ತಾನೆ.

ಆದ್ದರಿಂದ ಶಿಷ್ಯನು ಗುರುವಿನ ಬಗ್ಗೆ ಶ್ರದ್ಧೆಯಿಂದ, ವಿನಯವಾಗಿ ಗೌರವವಾಗಿ, ಭಕ್ತಿಯಿಂದ ಕೃತಜ್ಞತಾಭಾವದಿಂದ ಇರಬೇಕು. ಹಾಗೆ ಇದ್ದಾಗಲೆ ಗುರುವಿನ ಮೂಲಕ ನಿನಗೆ ಅನಂತವಾದ ಜ್ಞಾನವು ಲಭಿಸುತ್ತದೆ. ಹೊರ ಪ್ರಪಂಚದಲ್ಲಿ ಯಾರು ಇಂತಹ ವಿಷಯಗಳನ್ನು ಹೇಳುವುದಿಲ್ಲ. ಒಂದು ವೇಳೆ ಹೇಳಿದರೂ ಪಾಪ ಪುಣ್ಯದ ಕುರಿತು ಮಾತ್ರವೆ ಹೇಳಬಲ್ಲರು. ಆದರೆ ಸತ್ಯಲೋಕಕ್ಕೆ ಕರೆದುಕೊಂಡು ಹೋಗುವುದು ಸದ್ಗುರುವು ಮಾತ್ರವೆ ಎಂದು ತಿಳಿದುಕೊಳ್ಳಬೇಕು.

ಅದ್ದರಿಂದ ಯಾವ ಶಿಷ್ಯನೆ ಆಗಲಿ ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದರೆ ಸದ್ಗುರುವಿನ ಬಗ್ಗೆ ಈ ರೀತಿಯಾದ ಪ್ರವರ್ತನೆ ಹೊಂದಿರಬೇಕು.

# ಜೀವಾತ್ಮನಾದ ಮಾನವನು ಪರಮಾತ್ಮನಾಗಿ ಬೆಳೆಯಬೇಕೆಂದರೆ?

ಬಹಳ ಜನರು ಜೀವನೆ ದೇವರು ಎಂದು ಅಂದುಕೊಳ್ಳುತ್ತಾರೆ. ಜೀವಾತ್ಮನಾದ ತಾನು ಪರಮಾತ್ಮ 'ಅಂದರೆ ನಾನೆ ದೈವ ಎಂದು ಹೇಳಿದಾಗ ನಾನು ದೈವವೆಂದರೆ ನಾನು ಮಾನವನಲ್ಲವೇ? ಎಂದು ಅಂದುಕೊಳ್ಳಬಹುದು.

ಅದಕ್ಕೆ ಶಂಕರಾಚಾರ್ಯರು ಜೀವಾತ್ಮನ, ಪರಮಾತ್ಮನ ಶಕ್ತಿಯಲ್ಲಿ ಎಷ್ಟು ವ್ಯತ್ಯಾಸ ಇದೆ ಎನ್ನುವುದನ್ನು ನಾಲ್ಕು ಉಪಮಾನಗಳ ಮೂಲಕ ತಿಳಿಯಪಡಿಸಿದ್ದಾರೆ. ಅವುಗಳಿಂದ ಜೀವನಲ್ಲಿ ಇರುವ ಆತ್ಮಕ್ಕೆ ಅಂದರೆ ಜೀವನಲ್ಲಿ ಇರುವ ಜೀವಾತ್ಮನಲ್ಲಿ ಎಷ್ಟು ಶಕ್ತಿ ಇರುತ್ತದೆ? ಪರಮಾತ್ಮ ಅಂದರೆ ಸೃಷ್ಟಿಯಲ್ಲಿ ವ್ಯಾಪಿಸಿರುವ, ಸೃಷ್ಟಿಯನ್ನು ನಡೆಸುತ್ತಿರುವ ಪರಮಾತ್ಮನಿಗೆ ಎಂತಹ ಶಕ್ತಿ ಇರುತ್ತದೆ? ಎಂಬುದನ್ನು ತಿಳಿದುಕೊಳ್ಳಬಹುದು.

## 1. ಅವರು "ಪರಮಾತ್ಮನನ್ನು ಸೂರ್ಯನೊಂದಿಗೆ, ಜೀವಾತ್ಮನನ್ನು ಮಿಂಚು ಹುಳುವಿನೊಂದಿಗೆ ಹೋಲಿಸಿದ್ದಾರೆ.

ಶಂಕರಾಚಾರ್ಯರು ಪರಮಾತ್ಮನನ್ನು ಸೂರ್ಯನೊಂದಿಗೆ ಹೋಲಿಸಿದ್ದಾರೆ. ಸೂರ್ಯನು ಸಕಲ ಜೀವರಾಶಿಗಳಿಗೆ, ಸಮಸ್ತ ಸೃಷ್ಟಿಗೆ ತನ್ನ ಕಿರಣಗಳ ಮೂಲಕ ಬೆಳಕನ್ನು ಕೊಡುತ್ತಾ ಎಷ್ಟೋ ಲೋಕೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದಾನೆ.

ಆತನು ಕೊಡುವ ಬೆಳಕಿನಿಂದ ಸಮಸ್ತ ಜೀವರಾಶಿಗಳು ತಮ್ಮ ತಮ್ಮ ಕಾರ್ಯ ಕಲಾಪಗಳನ್ನು ಮಾಡಿಕೊಳ್ಳಬಲ್ಲವರಾಗಿದ್ದಾರೆ. ಅಷ್ಟೇ ಅಲ್ಲ, ಸಸ್ಯಗಳು ಪೊದೆಗಳು, ಗಿಡ–ಮರಗಳು ಸೂರ್ಯರಶ್ಮಿಯಿಂದ ನಡೆಯುವ ದ್ಯುತಿ ಸಂಶ್ಲೇಷಣೆ ಕ್ರಿಯೆಯಿಂದ

ತಯಾರಾಗುವ ಧಾನ್ಯಗಳು, ಕಾಯಿ ಪಲ್ಲೆಗಳು, ಹಣ್ಣುಗಳಿಂದ ಸಮಸ್ತ ಜೀವರಾಶಿ ಜೀವಿಸುತ್ತಿವೆ. ಅಂತಹ ಶ್ರೇಷ್ಠನು ಸೂರ್ಯನು.

ಅಷ್ಟೇ ಅಲ್ಲ ಈ ಸೂರ್ಯನ ಕಿರಣಗಳಿಂದಲೆ ಸಮುದ್ರದ ನೀರು ಆವಿಯಾಗಿ ಮತ್ತೆ ಮಳೆಯಾಗಿ ಈ ಭೂಮಿಯ ಜೀವಿಗಳಿಗೆ, ಜೀವರಾಶಿಗಳಿಗೆಲ್ಲಾ ಕೂಡಾ ಉಪಯೋಗವಾಗುತ್ತಿವೆ. ಸೂರ್ಯ ಭಗವಾನನು ಲೋಕಕ್ಕೆ ಎಷ್ಟೋ ಒಳಿತನ್ನು ಮಾಡುತ್ತಿದ್ದಾನೆ. ಅದಕ್ಕೆ ಪರಮಾತ್ಮನನ್ನು ಸೂರ್ಯನ ಜೊತೆ ಹೋಲಿಸಿದ್ದಾರೆ.

ಮಿಂಚು ಹುಳು ಅತಿ ಸ್ವಲ್ಪ ಬೆಳಕು ಕೊಡುತ್ತದೆ. ಆ ಬೆಳಕು ಲೋಕಕ್ಕೆ ಏನು ಉಪಯೋಗವಾಗದು. ಹಾಗೆಯೇ ಜೀವಾತ್ಮ ತನ್ನ ಶರೀರದ ಕದಲುವಿಕೆಗಾಗಿ ಇಂದ್ರಿಯಗಳು ಕಾರ್ಯ ನಿರ್ವಹಿಸಲು ಹೊರತು, ಇನ್ನು ಲೋಕಕ್ಕೇನು ಉಪಯೋಗವಿಲ್ಲ.

ಅದಕ್ಕೆ ಪರಮಾತ್ಮನನ್ನು ಸೂರ್ಯನೊಂದಿಗೆ, ಜೀವಾತ್ಮನನ್ನು ಮಿಂಚುಹುಳುವಿನೊಂದಿಗೆ ಹೋಲಿಸಿದ್ದಾರೆ. ಆದ್ದರಿಂದ ಪರಮಾತ್ಮನಿಗೆ, ಜೀವಾತ್ಮನಿಗೆ ಅಷ್ಟು ವ್ಯತ್ಯಾಸವಿದೆ. ಆಲೋಚಿಸಿರಿ ಮಿಂಚುಹುಳು ಬಹಳ ಚಿಕ್ಕದು, ಆದರೆ ಸೂರ್ಯನು ಎಷ್ಟು ಶ್ರೇಷ್ಠನು? ಅದಕ್ಕೆ ಶಂಕರಾಚಾರ್ಯರು ಪರಮಾತ್ಮನನ್ನು ಸೂರ್ಯನಿಗೆ ಹೋಲಿಸಿದ್ದಾರೆ. ಜೀವಾತ್ಮನನ್ನು ಮಿಂಚು ಹುಳುವಿಗೆ ಹೋಲಿಸಲಾಗಿದೆ.

## 2. ಪರಮಾತ್ಮನನ್ನು ರಾಜನಿಗೆ. ಜೀವಾತ್ಮನನ್ನು ಸೇವಕನಿಗೆ ಹೋಲಿಸಿದ್ದಾರೆ.

ರಾಜನು ತನ್ನ ರಾಜ್ಯದಲ್ಲಿರುವ ಪ್ರಜೆಗಳನ್ನೆಲ್ಲಾ ಪಾಲಿಸುತ್ತಾನೆ. ರಾಜ್ಯವನ್ನು ಶತೃಗಳಿಂದ ರಕ್ಷಿಸುತ್ತಾನೆ. ಆದರೆ ಸೇವಕನು ರಾಜನ ಆಜ್ಞೆಗೆ ವಿಧೇಯನಾಗಿ ವರ್ತಿಸಬೇಕು. ಹಾಗೆಯೇ ಪರಮಾತ್ಮನು ಸೃಷ್ಟಿಯನ್ನೆಲ್ಲಾ ಪಾಲಿಸುವವನು. ಆದರೆ ಜೀವಾತ್ಮ ಪರಮಾತ್ಮನ ಕೆಲವು ಧರ್ಮಗಳಲ್ಲಿ ಕಟ್ಟು ಬಿದ್ದು ಜೀವಿಸುತ್ತಾನೆ.

ಇಲ್ಲಿ ಗಮನಿಸಿದರೆ ಪರಮಾತ್ಮ ಸೃಷ್ಟಿಯನ್ನೆಲ್ಲಾ ಅಂದರೆ ಜೀವಿಗಳನ್ನು ಜೀವರಾಶಿಗಳನ್ನು, ಗ್ರಹಗಳನ್ನು, ನಕ್ಷತ್ರಗಳನ್ನು, ಕೆಲವು ಲೋಕಗಳನ್ನು, ಎಲ್ಲವನ್ನು

ತನ್ನ ಪ್ರಾಣಶಕ್ತಿಯಿಂದ ಜೀವಿಸುವಂತೆ ಮಾಡಿದ್ದಾನೆ. ಕೆಲವು ಧರ್ಮಗಳು ಸಿದ್ಧಾಂತಗಳನ್ನು ಏರ್ಪಾಡು ಮಾಡಿ ಅವುಗಳಿಗೆ ಅನುಗುಣವಾಗಿ ಜೀವಿಗಳನ್ನು ಜೀವರಾಶಿಗಳನ್ನು ಜೀವಿಸುವಂತೆ ಮಾಡಿದ್ದಾನೆ.

ಆದರೆ ಸೇವಕನು ರಾಜನ ಆಜ್ಞೆಗೆ ಹೇಗೆ ಕಟ್ಟು ಬಿದ್ದು ಕೆಲಸ ಮಾಡುತ್ತಾನೋ! ಹಾಗೆಯೇ ಜೀವಾತ್ಮ ಪರಮಾತ್ಮನು ಇಟ್ಟ ಧರ್ಮಗಳಿಗೆ ಅನುಗುಣವಾಗಿ ಜೀವಿಸಬೇಕು ಅದಕ್ಕೆ ಶಂಕರಾಚಾರ್ಯರು ಪರಮಾತ್ಮನನ್ನು ರಾಜನಿಗೆ, ಜೀವಾತ್ಮನನ್ನು ಸೇವಕನಿಗೆ ಹೋಲಿಸಿದ್ದಾರೆ.

## 3. ಪರಮಾತ್ಮನನ್ನು ಸಮುದ್ರದೊಡನೆ, ಜೀವಾತ್ಮನನ್ನು ಬಾವಿಯೊಡನೆ ಹೋಲಿಸಿದ್ದಾರೆ.

ಸಮುದ್ರದ ನೀರು ಆವಿಯಾಗಿ ಮಳೆಯಾಗಿ ಸುರಿಯುತ್ತದೆ. ಸಮುದ್ರ ಗರ್ಭದಲ್ಲಿ ಎಷ್ಟೋ ಜಲಚರಗಳು, ವಿವಿಧ ರೀತಿಯ ಜೀವಿಗಳು ಜೀವಿಸುತ್ತಾ ಇರುತ್ತವೆ. ಅವುಗಳೊಂದಿಗೆ ಮುತ್ತು ರತ್ನಗಳು ಇರುತ್ತವೆ. ಹಾಗೆಯೇ ಸಮುದ್ರದ ನೀರು ಎಷ್ಟು ಆವಿಯಾದರೂ, ಸಮುದ್ರವು ಸ್ವಲ್ಪವೂ ಕೂಡಾ ತಗ್ಗುವುದಿಲ್ಲ. ಹಾಗೆಯೇ ಎಷ್ಟು ನದಿಗಳು ಬಂದು ಸೇರಿದರೂ ಸಮುದ್ರ ಉಕ್ಕುವುದಿಲ್ಲ.

ಸಮುದ್ರದಂತೆ ಪರಮಾತ್ಮನಿಂದ ಎಷ್ಟು ಸೃಷ್ಟಿಯಾದರೂ, ಎಷ್ಟು ಜೀವರಾಶಿಗಳು, ಲೋಕಗಳು, ಗ್ರಹಗಳು ಸೃಷ್ಟಿಸಲ್ಪಟ್ಟರೂ, ಪರಮಾತ್ಮನು ತಗ್ಗುವುದಿಲ್ಲ. ಆತನಲ್ಲಿ ಎಷ್ಟು ಜೀವಿಗಳು ಸೇರಿಕೊಂಡರೂ ಆತನು ಬೆಳೆಯುವುದಿಲ್ಲ.

ಹಾಗೆಯೇ ಜೀವವನ್ನು ಬಾವಿಗೆ ಹೋಲಿಸಿದ್ದಾರೆ. ಬಾವಿ ಮನೆಯವರಿಗೆ ಮಾತ್ರ ಉಪಯೋಗವಾಗುತ್ತದೆ. ಕೆಲವು ದಿನಗಳು ಬಳಸದೆ ಹೋದರೆ ನೀರು ಹಾಳಾಗುತ್ತದೆ. ಅದಕ್ಕೆ ಪರಮಾತ್ಮನನ್ನು ಸಮುದ್ರದೊಂದಿಗೆ, ಜೀವಾತ್ಮನನ್ನು ಬಾವಿಯೊಂದಿಗೆ ಹೋಲಿಸಿದ್ದಾರೆ. ಬಾವಿ ಮನೆಯವರಿಗೆ ಉಪಯೋಗವಾದಂತೆ ಜೀವಾತ್ಮ ತನ್ನ ಕುಟುಂಬಕ್ಕೆ ಮಾತ್ರವೇ ಉಪಯೋಗವಾಗುತ್ತದೆ. ಅದಕ್ಕೆ ಜೀವನು ಜೀವಾತ್ಮನಾಗಿ ಇದ್ದು ಬಿಡದಂತೆ ಪರಮಾತ್ಮನಾಗಿ ಬೆಳೆಯಬೇಕೆಂದು ಹೇಳಲು ಕಾರಣ.

## 4. ಪರಮಾತ್ಮ ಮೇರು ಪರ್ವತದಂತಹವನು, ಜೀವಾತ್ಮ ಅಣುವಿಗೆ ಸಮಾನ ಎಂದಿದ್ದಾರೆ ಶಂಕರಾಚಾರ್ಯರು.

ಮತ್ತೆ ಮೇರು ಪರ್ವತಕ್ಕೆ ಅಣುವಿಗೆ ಎಷ್ಟು ಅಂತರವಿದೆ ಆಲೋಚಿಸಿರಿ? ಒಂದು ರೀತಿಯಲ್ಲಿ ಹೇಳಬೇಕೆಂದರೆ ನರಿಗೆ ನಾಗಲೋಕಕ್ಕೆ ಇರುವಷ್ಟು ಅಂತರ ಇದೆ.

ಮೇರು ಪರ್ವತವು ಎಷ್ಟೊಂದಕ್ಕೆ ಆಶ್ರಯಕೊಡುತ್ತದೆ. ಹಾಗೆಯೇ ಪರಮಾತ್ಮ ಎಷ್ಟೊಂದಕ್ಕೆ ತನ್ನ ಸೃಷ್ಟಿಯಲ್ಲಿ ಆಶ್ರಯ ಕೊಟ್ಟಿರುವುದಲ್ಲದೆ, ಅವರ ಜೀವನಕ್ಕೆ ಬೇಕಾಗಿರುವುದೆನ್ನೆಲ್ಲಾ ಕೊಡಲ್ಪಟ್ಟಿದೆ. ಆದರೆ ಈ ಅಣುವಿನಂತಹ ಜೀವಾತ್ಮ ಮಾನವನ ಶರೀರದಲ್ಲಿದ್ದು ಆ ಶರೀರಕ್ಕೆ ಮಾತ್ರವೆ ಚಲನೆಯನ್ನುಂಟು ಮಾಡುತ್ತದೆ.

ಮೇರು ಪರ್ವತವನ್ನು ನೋಡಿರಿ, ಅದರ ಮೇಲೆ ಎಷ್ಟು ಗಿಡಗಳಿರುತ್ತವೆ. ಎಷ್ಟು ಜೀವಿಗಳು ಅದರ ಮೇಲೆ ವಾಸಿಸುತ್ತವೆ. ಅವುಗಳಿಗೆ ಎಷ್ಟೋ ಲಾಭಗಳಿರುತ್ತವೆ.

ಹಾಗೆಯೆ ಅಣುವಿನಷ್ಟು ಇರುವ ಜೀವಾತ್ಮ ಸೂಜಿ ಮೊನೆಗಿಂತಲೂ ಬಹಳ ಕಡಿಮೆ ಇರುತ್ತದೆ. ಅಣುವಿಗಿಂತ ಚಿಕ್ಕದಾದ ಈ ಜೀವಾತ್ಮ ಜೀವಿಗಳ ಶರೀರದಲ್ಲಿ ಇದ್ದು ಆ ಜೀವಿಗಳಿಗೆ ಮಾತ್ರವೆ ಚಲನೆಯನ್ನು ಕೊಡಬಲ್ಲದು.

ಹಾಗೆ ಅನಂತವಾಗಿ ಇರುವ ಸೃಷ್ಟಿಯನ್ನೆಲ್ಲಾ ನಡೆಸುತ್ತಿರುವ ಪರಮಾತ್ಮನಾಗಲಿ, ಜೀವಿಗಳ ಶರೀರಗಳು ಮಾತ್ರವೆ ನಡೆಸುತ್ತಿರುವುದು ಜೀವಾತ್ಮನಾದ್ದರಿಂದ ಶಂಕರಾಚಾರ್ಯರು ಪರಮಾತ್ಮನಿಗೆ, ಜೀವಾತ್ಮನಿಗೆ ಎಷ್ಟೊಂದು ವ್ಯತ್ಯಾಸ ಇದೆಯೆಂದು ಈ ಉಪಮಾನದ ಮೂಲಕ ವಿವರಿಸಿದ್ದಾರೆ.

ಇದನ್ನೆಲ್ಲಾ ತಿಳಿಯಪಡಿಸುವುದು ಏಕೆಂದರೆ? ಜೀವನು ಅಂದರೆ ಮಾನವನು ಅಹಂಕಾರವನ್ನು ಹೆಚ್ಚಿಸಿಕೊಳ್ಳದಂತೆ ಇರುವುದಕ್ಕೆ! ತನ್ನ ಸ್ಥಿತಿಯನ್ನು ತಾನು ತಿಳಿದುಕೊಳ್ಳಲು! ಹಾಗೆ ನಿಧಾನವಾಗಿ ಯೋಗ ಮಾರ್ಗಕ್ಕೆ ಬಂದ ಮೇಲೆ ತತ್ವವನ್ನು ಅರ್ಥಮಾಡಿಕೊಳ್ಳುತ್ತಾನೆ. ಆ ತತ್ವ ದೃಷ್ಟಿಯಿಂದಲೆ ನೋಡುತ್ತಾನೆ. ಆದ್ದರಿಂದ ಜೀವನು ದೇವರಾಗಿ ಬೆಳೆಯ ಬೇಕೆಂದರೆ? ತತ್ವ ದೃಷ್ಟಿ ಇರಬೇಕಾದ್ದೇ! ಆಗಲೆ ಬೆಳೆಯಬಲ್ಲನು.

ಇಲ್ಲಿಯವವರೆಗೆ ಜೀವಾತ್ಮನಿಗೆ ಪರಮಾತ್ಮನಿಗೆ ಇರುವ ಭೇದವನ್ನು ನೋಡಿದೆವು, ಆದರೆ ಎರಡರಲ್ಲಿರುವ ತತ್ವ ಒಂದೇ ಎಂಬುದನ್ನು ಕೂಡಾ

ತಿಳಿದುಕೊಳ್ಳೋಣ.

ನೋಡಿರಿ, ಸೂರ್ಯನಲ್ಲಿರುವ ಅಗ್ನಿ ತತ್ವ – ಮಿಂಚುಹುಳುವಿನಲ್ಲಿರುವ ಅಗ್ನಿ ತತ್ವವು ಒಂದೇ ಎಂಬುದನ್ನು ಸಾಧಕನು ತಿಳಿದುಕೊಳ್ಳಬೇಕು. ಸೂರ್ಯನಲ್ಲಿರುವ ಅಗ್ನಿ ತತ್ವವು ಅಪರಿಮಿತ ಮಿಂಚು ಹುಳುವಿನಲ್ಲಿರುವ ಅಗ್ನಿ ತತ್ವವು ಪರಿಮಿತವು. ಆದರೆ ಎರಡು ಅಗ್ನಿ ತತ್ವದಲ್ಲಿರುವಂತಹವೆ ಇದು ಧ್ಯಾನ ಸಾಧನೆಗೆ ಒಂದು ಜ್ಞಾನವನ್ನು ಸಂಪಾದಿಸಿಕೊಂಡು ತತ್ವದೃಷ್ಟಿಯಲ್ಲಿ ನೋಡಿದಾಗ ಎರಡರಲ್ಲಿರುವ ಅಗ್ನಿ ತತ್ವವು ಒಂದೆ ಎಂದು ಅರ್ಥವಾಗುತ್ತದೆ.

ಹಾಗೆಯೇ ರಾಜ್ಯ ಹೋದರೂ ರಾಜನು ಜೀವಾತ್ಮನೆ; ಉದ್ಯೋಗ ಹೋದರೆ ಸೇವಕನು ಜೀವಾತ್ಮನೆ ಅಂದರೆ ಇಬ್ಬರು ಜೀವಾತ್ಮರೆ! ಅಂದರೆ ಪರಮಾತ್ಮ ಜೀವಾತ್ಮ ಇಬ್ಬರೂ ಭಗವಂತರೆ, ಇಬ್ಬರೂ ಪರಮಾತ್ಮರೆ ಎಂದು ಅರ್ಥವಾಗುತ್ತದೆ.

ಅದಕ್ಕೆ ಜೀವಾತ್ಮ ಅಂದರೆ ಮಾನವನು, ಬಾಹ್ಯ ದೃಷ್ಟಿಯಲ್ಲಿ ಅಹಂ ಹೆಚ್ಚಿಸಿಕೊಳ್ಳದಂತೆ ಇರಲು ಉಪಮಾನಗಳನ್ನು ಹೇಳುತ್ತಾ ಇರುತ್ತಾರೆ. ಹಾಗೆಯೆ ಸಾಧಕನೊಬ್ಬನು ತತ್ವದೃಷ್ಟಿಯನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಹಾಗೆಯೇ ಸಮುದ್ರದಲ್ಲಿರುವುದು ನೀರೇ, ಬಾವಿಯಲ್ಲಿರುವುದು ನೀರೇ! ಎರಡರಲ್ಲೂ ನೀರೇ ಇವೆ. ಈ ತತ್ವದೃಷ್ಟಿ ಬಂದಾಗ ಎರಡರಲ್ಲಿರುವ ಜಲತತ್ವ ಒಂದೇ ಎಂದು ಅರ್ಥವಾಗುತ್ತದೆ. ಅಂದರೆ ಸಮುದ್ರದಲ್ಲಿಯೂ ನೀರಿದೆ, ಬಾವಿಯಲ್ಲಿಯೂ ನೀರಿದೆ. ಎರಡು ಜಲತತ್ವವೆ. ತತ್ವದೃಷ್ಟಿಯಲ್ಲಿ ಇರುವಾಗ ಈ ಎರಡರಲ್ಲಿಯೂ ಇರುವ ಜಲತತ್ವವನ್ನು ನೋಡಬೇಕು. ಇಲ್ಲ ದೊಡ್ಡದಾ? ಚಿಕ್ಕದಾ? ಎಂಬುದಲ್ಲ. ಹಾಗೆಯೇ ಮೇರು ಪರ್ವತ, ಪರಮಾಣುವು ಎರಡರಲ್ಲಿಯೂ ಇರುವ ಭೂಮಿ ತತ್ವವು ಒಂದೇ! ಒಂದು ದೊಡ್ಡದಾಗಿರಬಹುದು, ಇನ್ನೊಂದು ಚಿಕ್ಕದಾಗಿರಬಹುದು. ಆದರೆ ಎರಡರಲ್ಲಿಯೂ ಇರುವ ತತ್ವ ಒಂದೇ ಭೂತತ್ವ.

ಪರಮಾತ್ಮ, ಜೀವಾತ್ಮ ಒಂದೇ ಎಂದು ಏಕೆ ಅನ್ನುತ್ತಿದ್ದಾರೆ ಅಂದರೆ? ಪರಮಾತ್ಮನಲ್ಲಿರುವ ತತ್ವ, ಜೀವಾತ್ಮದಲ್ಲಿರುವ ತತ್ವ ಒಂದೇ ಎಂದು ಹೇಳುವುದಕ್ಕೆ ಇಷ್ಟು ಉಪಮಾನಗಳನ್ನು ನಮಗೆ ಹೇಳಲಾಗಿದೆ. ಮಾನವನಿಗೆ ತತ್ವ ದೃಷ್ಟಿ ಹೇಗೆ

ಬರಬೇಕು ಎನ್ನುವುದು ಉಪಮಾನಗಳ ಮೂಲಕ ಕಲಿಸಲ್ಪಟ್ಟಿದೆ.

ಮೊಟ್ಟ ಮೊದಲು ಅಹಂಕಾರವನ್ನು ಬೆಳಸಿಕೊಳ್ಳದಂತೆ ಇರಬೇಕು. ಅಂದರೆ ನಾನೆ ಭಗವಂತನು ಎನ್ನುವ ಅಹಂಕಾರವು ಬರಬಾರದು. ಧ್ಯಾನ ಸಾಧನೆ ಮಾಡಿ ಯೋಗ ತತ್ವದಲ್ಲಿ ಬೆಳೆಯುತ್ತಿರುವಾಗ ಆ ತತ್ವವೇನೆಂದು ತಿಳಿದುಕೊಳ್ಳಬೇಕು.

ಸೂರ್ಯನಲ್ಲಿ ಅಗ್ನಿ ತತ್ವ ಏಕೆ ಇದೆ? ಲೋಕದ ಕ್ಷೇಮಕ್ಕಾಗಿ ಲೋಕವನ್ನು ರಕ್ಷಿಸುವುದಕ್ಕಾಗಿ ಹಾಗೆಯೆ ಸಮುದ್ರದಲ್ಲಿ ನೀರು ಏಕೆ ಹೆಚ್ಚಾಗಿ ಇವೆ? ಅಂದರೆ ಆ ಸಮುದ್ರದ ನೀರೆ ಮಳೆಯ ರೂಪದಲ್ಲಿ ಈ ಭೂಮಿಯ ಮೇಲೆ ಬೆಳೆಗಳಿಗಾಗಿ, ಗಿಡ ಮರಗಳಿಗೆ, ಜೀವಿಗಳ ಹಸಿವು, ನೀರಡಿಕೆ ತೀರಿಸುವುದಕ್ಕಾಗಿ ಬಂದು ಎಲ್ಲರನ್ನು ಕಾಪಾಡುತ್ತದೆ.

ಹಾಗೆಯೇ ಭೂಮಿಯ ಮೇಲೆ ಶಿಸ್ತು ಇರಬೇಕು ಆದ್ದರಿಂದ ಒಬ್ಬನು ರಾಜನಾದನು. ಅದಕ್ಕೆ ಎಲ್ಲರೂ ರಾಜರಾಗಲಾರರು. ಹಾಗೆಯೆ ಕೆಲಸ ಮಾಡುವವರು ಇರಬೇಕಾದ್ದರಿಂದ ಸೇವಕರು ಇದ್ದಾರೆ. ಆದರೆ ಇಲ್ಲಿ ತತ್ವ ದೃಷ್ಟಿಯಿಂದ ನೋಡಿದಾಗ ಇಬ್ಬರೂ ಒಂದೇ ಎಂದು ತಿಳಿಯುತ್ತದೆ.

ಹಾಗೆಯೇ ಮೇರು ಪರ್ವತ, ಪರಮಾಣುವನ್ನು ನೋಡಿದಾಗ ಅವುಗಳ ತತ್ವಗಳು, ಅವುಗಳ ಒಂದು ಶಕ್ತಿಗಳು ನಮಗೆ ಅರ್ಥವಾಗುತ್ತವೆ.

ಸೂರ್ಯನಾಗಲಿ, ಸಮುದ್ರವಾಗಲಿ, ಮೇರು ಪರ್ವತವಾಗಲಿ, ರಾಜನಾಗಲಿ ಒಂದೇ ರೀತಿಯಲ್ಲಿ ಉಪಯೋಗವಾಗಲಾರವು, ಯಾರಿಗೆ ಯಾವ ಶಕ್ತಿ ಇದೆಯೋ ಆ ಶಕ್ತಿಯನ್ನೇ ಪ್ರಪಂಚಕ್ಕೆ ಕೊಡುತ್ತಿರುತ್ತಾರೆ. ಹಾಗೆಯೇ ಸಾಧಕರು ಕೂಡಾ ಅವರಿಗೆ ಇರುವ ಜ್ಞಾನ, ನೈಪುಣ್ಯ, ಸಂಪತ್ತು, ಈ ಪ್ರಪಂಚಕ್ಕೆ ಕೊಡುವುದಾದರೆ ಪರಮಾತ್ಮನ ಸ್ಥಾಯಿಗೆ ಸೇರಬಲ್ಲವರಾಗುತ್ತಾರೆ.

ಆದ್ದರಿಂದ ಜೀವಾತ್ಮ ಅಂದರೆ ಮಾನವನು ಯಾವಾಗಲೂ ಕೂಡಾ ಜೀವಾತ್ಮನಾಗಿ ಅಂದರೆ ಮಾನವನಾಗಿಯೇ ಇರಬಾರದು. ಆದ್ದರಿಂದ ಸರಿಯಾದ ಧ್ಯಾನ ಸಾಧನೆ ಮಾಡುತ್ತಾ ಸತ್ಯ ಜ್ಞಾನವನ್ನು ಸಂಪಾದಿಸಿಕೊಂಡರೇನೆ ಮಾನವನು ಪರಮಾತ್ಮನಾಗಿ ಬೆಳೆಯಬಲ್ಲವನಾಗುತ್ತಾನೆ.

ಅದಕ್ಕಾಗಿ ಏನು ಮಾಡದೆ ಸುಮ್ಮನೆ ಕರ್ಮಗಳನ್ನು ಮಾಡುತ್ತಾ ನಾನು ದೇವರು

ಅಂದುಕೊಂಡರೆ ಸಾಲದು.

ವೇದಗಳಲ್ಲಿ 'ಅಹಂ ಬ್ರಹ್ಮಾಸ್ಮಿ' ಎಂದು ಇದೆ. ಈ ಸತ್ಯವನ್ನು ಅಂದರೆ ನಾನು ಬ್ರಹ್ಮನೆಂದು ತಿಳಿದುಕೊಳ್ಳುವುದಕ್ಕೆ ಧ್ಯಾನಸಾಧನೆ ಒಂದೇ ಮಾರ್ಗ. ಅಂದರೆ ಸಾಧನೆ ಒಂದೇ ಮಾರ್ಗ, ಅಂದರೆ ಸಾಧನ ದೃಷ್ಟಿ ಬಾಹ್ಯವಾಗಿ ಅಲ್ಲದೆ, ಅಂತರಂಗವಾಗಿ ಬದಲಾದಾಗಲೆ ಮಾತ್ರವೆ ತತ್ವದೃಷ್ಟಿ ಬರುತ್ತದೆ. ಆಗ ಮಾತ್ರವೆ ಸೃಷ್ಟಿಯಿಂದ ಎಲ್ಲವನ್ನು ಪಡೆಯುವ ಅರ್ಹತೆ ಬರುತ್ತದೆ.

ಏನು ಹೇಳಿಕೊಂಡರೂ ಹೇಗೆ ಹೇಳಿಕೊಂಡರೂ, ಸಾಧನೆ, ಜ್ಞಾನ ಇಲ್ಲದಿದ್ದರೆ ಜೀವಾತ್ಮನು ಜೀವಾತ್ಮನಾಗಿಯೇ ಇರುತ್ತಾನೆ. ದ್ವೈತದಲ್ಲಿ ಇರುತ್ತಾನೆ. ಆದರೆ ಸಾಧನೆ ಜ್ಞಾನವು ಇರುವಾಗ ಜೀವಾತ್ಮನು ದೇವರಾಗಿ ಬೆಳೆಯಲು ಪ್ರಯತ್ನಿಸುತ್ತಾ ಅದ್ವೈತವಾಗಿ ಪರಮಾತ್ಮನಾಗಿ ಜೀವಿಸಬಲ್ಲವನಾಗುತ್ತಾನೆ. ಮಾನವನು ಮಾಧವನಾಗುತ್ತಾನೆ.

# ವಿಶೇಷವಾದ ಜ್ಞಾನವನ್ನು ಹೊಂದಬೇಕೆಂದರೆ?

ಧ್ಯಾನದಲ್ಲಿ ಬಂದವರು ಕೆಲವು ಲಾಭಗಳನ್ನು ಹೊಂದಿ, ಆ ಲಾಭಗಳು ಎಲ್ಲರೂ ಹೊಂದಬೇಕು ಎಂದು ಎಲ್ಲರಿಗೆ ಧ್ಯಾನವನ್ನು ಹೇಳುತ್ತಿರುತ್ತಾರೆ. ಆದರೆ ಎಲ್ಲರೂ ಮಾಡುತ್ತಾರಾ? ಅಂದರೆ ಮಾಡುವುದಿಲ್ಲ.

ಪತ್ರೀಜಿಯವರು ಎಷ್ಟೋ ಲಕ್ಷ ಮಂದಿಗೆ ಧ್ಯಾನ ಹೇಳಿದ್ದಾರೆ. ಅಷ್ಟೇ ಅಲ್ಲ ಅವರು ಪುಸ್ತಕಗಳ ಮೂಲಕ, ವಿಡಿಯೋಗಳ ಮೂಲಕ ಈ ಸತ್ಯವನ್ನು ಎಲ್ಲರಿಗೂ ಬೋಧಿಸಿದರು.

ಆದರೆ ಕೆಲವರು ಮಾತ್ರ ಆಚರಿಸುತ್ತಿದ್ದಾರೆ. ಬಹಳ ಜನ ಆಚರಿಸಲಾರದೆ ಹೋಗುತ್ತಿದ್ದಾರೆ. ಈ ಸತ್ಯವನ್ನು, ಧರ್ಮವನ್ನು ಕೆಲವರಿಗೆ ತಿಳಿದುಕೊಳ್ಳಬೇಕೆಂಬ ಹಂಬಲ ಕೂಡಾ ಇರುವುದಿಲ್ಲ. ಆದರೆ ಕೆಲವರಿಗೆ ಮಾತ್ರವೆ ಅವಗಾಹನೆ ಇರುತ್ತದೆ. ಇದಕ್ಕೆ ಮುಖ್ಯ ಕಾರಣ ಇಂದ್ರಿಯ ನಿಗ್ರಹ ಇಲ್ಲದಿರುವುದು, ಅಂದರೆ ಮನಸ್ಸನ್ನು ನಿಗ್ರಹಿಸಲಾರದೆ ಇರುವುದು.

ಆದ್ದರಿಂದ ಮನಸ್ಸು ಯಾವ ವಿಧವಾಗಿ ಇದ್ದರೆ ಸತ್ಯವನ್ನು ಗ್ರಹಿಸಬಲ್ಲರೋ ಧರ್ಮವನ್ನು ಆಚರಣೆಯಲ್ಲಿ ಇಟ್ಟುಕೊಳ್ಳಬಲ್ಲರೋ! ತಿಳಿದುಕೊಳ್ಳೋಣ. ಮುಖ್ಯವಾಗಿ ಮನಸ್ಸು 3 ರೀತಿಯಲ್ಲಿ ಇರುತ್ತದೆ.

1. ಮಲಿನ ಮನಸ್ಸು. 2. ಶುದ್ಧ ಮನಸ್ಸು 3. ವಿಶುದ್ಧ ಮನಸ್ಸು

ಇಲ್ಲಿ ಮನಸ್ಸು ಮಲಿನವಾಗಿದ್ದರೆ ವರ್ತನೆ ಹೇಗೆ ಇರುತ್ತದೆ? ಶುದ್ಧವಾಗಿ ಇದ್ದರೆ ವರ್ತನೆ ಹೇಗೆ ಇರುತ್ತದೆ? ವಿಶುದ್ಧವಾಗಿ ಇದ್ದರೆ ವರ್ತನೆ ಹೇಗೆ ಇರುತ್ತದೆ? ಎನ್ನುವುದನ್ನು ತಿಳಿದುಕೊಳ್ಳೋಣ.

# 1. ಮಲಿನ ಮನಸ್ಸು

ಮೊದಲು ಆಶುದ್ಧವಾದ ಮನಸ್ಸು ಇದ್ದರೆ ಅವರ ವರ್ತನೆ ಹೇಗೆ ಇರುತ್ತದೆ ಎಂದು ತಿಳಿದುಕೊಳ್ಳೋಣ. ಮಲಿನ ಮನಸ್ಸು ಇದ್ದವರಿಗೆ ನೋಡಿದ ಎಲ್ಲವನ್ನೂ ಬೇಕು ಎಂಬ ಆಸೆ ಇರುತ್ತದೆ. ಅವರು ಅವು ಅವಶ್ಯಕವೇ? ಇಲ್ಲವೇ? ಎಂದು ನೋಡುವುದಿಲ್ಲ. ಹಾಗೆಯೇ ಅವುಗಳನ್ನು ಕೊಳ್ಳುವ ತಾಕತ್ತು ನನಗೆ ಇದೆಯೇ? ಇಲ್ಲವೆ? ಎಂದು ಆಲೋಚಿಸುವುದಿಲ್ಲ. ಅಷ್ಟೇ ಅಲ್ಲ ನೋಡಿದ ಎಲ್ಲವನ್ನೂ ಬೇಕೆನ್ನುತ್ತಾರೆ. ಕೆಲಸ ಬಾರದ ಮಾತುಗಳನ್ನು ಕೇಳುತ್ತಾರೆ. ಕೆಲಸಕ್ಕೆ ಬಾರದ ಮಾತುಗಳು ಮಾತನಾಡುತ್ತಾರೆ, ಕೆಲಸಕ್ಕೆ ಬಾರದವನ್ನು ತಿನ್ನುತ್ತಾರೆ, ತಾಕತ್ತಿಗೆ ಮೀರಿದ ಭೋಗಗಳ ಮೇಲೆ ಆಸಕ್ತಿ ಇರುತ್ತದೆ.

ಹಾಗೆ ಮಲಿನ ಮನಸ್ಸು ಮಾನವರನ್ನು ಕಷ್ಟಗಳಿಗೆ ಗುರಿಪಡಿಸುತ್ತದೆ. ಅಂತಹವರು ಇತರರಿಗೆ ಸೇವೆ ಮಾಡಬೇಕಾದ ಕೈಗಳಿಂದ ಇತರರನ್ನು ಹೊಡೆಯುವುದಕ್ಕೆ, ಕಾಲು, ಕೈಯನ್ನು ಕತ್ತರಿಸಲು ಬಳಸುತ್ತಾರೆ. ಹಾಗೆಯೇ ಒಳ್ಳೆಯ ಪ್ರದೇಶಕ್ಕೆ ಹೋಗಬೇಕಾದ ಕಾಲುಗಳನ್ನು ವ್ಯಭಿಚಾರ ಗೃಹಗಳಿಗೆ, ಮದ್ಯದ ಅಂಗಡಿಗಳಿಗೆ ಹೋಗುವುದಕ್ಕೆ ಬಳಸುತ್ತಾರೆ.

ಮನಸ್ಸು ಮಲಿನವಾಗಿದ್ದವರು ದೇವರು ದೊಡ್ಡವನೆಂದು ಹೇಳುತ್ತಾರೆ. ಪೂಜೆಗಳನ್ನು ಮಾಡುತ್ತಾರೆ ಆದರೆ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಸುಳ್ಳನ್ನು ಬಿಡರು, ಇತರರನ್ನು ವಿಮರ್ಶಿಸುವುದನ್ನು ಬಿಡುವುದಿಲ್ಲ.

ಮತ್ತೆ ಮನಸ್ಸು ಏಕೆ ಮಲಿನವಾಗುತ್ತದೆ? ಅಂದರೆ ತಿನ್ನಬಾರದ್ದನ್ನು ತಿನ್ನುವುದರಿಂದ, ಹಾಗೆಯೇ ಮಾಡಬಾರದ ಕೆಲಸಗಳನ್ನು ಮಾಡುವುದರಿಂದ ಇಂತಹವರಿಗೆ ಧ್ಯಾನ ಸಾಧನೆ ಅಂದರೆ, ಧರ್ಮವೆಂದರೆ, ಸತ್ಯವೆನ್ನುವುದು ಅರ್ಥವಾಗುವುದಿಲ್ಲ.

ಎಷ್ಟೋ ಸಾವಿರ ಮಂದಿ ಪತ್ರೀಜಿಯವರ ಧ್ಯಾನ ಯಜ್ಞಕ್ಕೆ ಬರುತ್ತಿರುತ್ತಾರೆ. ಅದರಲ್ಲಿ ಕೆಲವರು, ನೋಡಲು, ಕೆಲವರು ಸಾಧನೆಗಾಗಿ ಬರುತ್ತಾರೆ. ಆದರೆ

ನೋಡಲು ಬಂದವರು ಅವರ ಮಲಿನ ಮನಸ್ಸಿನವರಾದ್ದರಿಂದ ಅಲ್ಲಿ ಧ್ಯಾನವನ್ನು ಮಾಡುವುದಿಲ್ಲ. ಹೇಳಿದ ಜ್ಞಾನವನ್ನು ಸ್ವೀಕರಿಸುವುದಿಲ್ಲ.

ಮನಸ್ಸು ಮಲಿನವಾದಾಗ ಇಂದ್ರಿಯಗಳಿಗೆ ಒಳ್ಳೆಯದನ್ನು ಸ್ವೀಕರಿಸುವ ಶಕ್ತಿ ಇರುವುದಿಲ್ಲ. ಆದ್ದರಿಂದ ಪಾಪದ ಕೆಲಸಗಳನ್ನೇ ಮಾಡುತ್ತಾರೆ, ಅವರು ಈ ಧ್ಯಾನ ಮಾರ್ಗದಲ್ಲಿ ಬರಲಾರರು. ಮಲಿನವಾದ ಮನಸ್ಸಿನಿಂದ ಚಿತ್ತವು ಶಾಂತಿಸುವುದಿಲ್ಲ. ಚಿತ್ತವು ಶಾಂತಿಯಾಗಿ ಇಲ್ಲದಿದ್ದರೆ ಸಾಧನೆ ಆಗುವುದಿಲ್ಲ. ಚಿತ್ತವು ಪ್ರಶಾಂತವಾಗಿ ಇರಬೇಕೆಂದರೆ ಮನಸ್ಸು ಶುದ್ಧಿ ಮಾಡಿಕೊಳ್ಳಬೇಕು.

ಅದಕ್ಕೆ ಅಷ್ಟಾವಕ್ರನು, ಬುದ್ಧನು ಅಂತಹವರೆಲ್ಲಾ ವಿಷಯಾಸಕ್ತಿಯನ್ನು ಕಡಿಮೆಗೊಳಿಸಿರಿ ಎಂದರು. ಅಂದರೆ ಪ್ರಾಪಂಚಿಕ ವಿಷಯಗಳನ್ನು ವಿಷದಂತೆ ಭಾವಿಸಿರಿ ಎನ್ನುತ್ತಾರೆ. ಕಾರಣ, ಸಾಧನಾ ಮಾರ್ಗದಲ್ಲಿ ಅವು ಬಹು ದೊಡ್ಡ ಅಡ್ಡಿಗಳು ಆದ್ದರಿಂದ ಅಷ್ಟೇ ಅಲ್ಲ ಅವು ಇಂದ್ರಿಯಗಳನ್ನು ಮಲಿನ ಗೊಳಿಸುತ್ತವೆಯಾದ್ದರಿಂದ ಅದರಿಂದ ಮನಸ್ಸು ಶುದ್ಧವಾಗಬೇಕೆಂದರೆ ತೀವ್ರ ಧ್ಯಾನ ಮಾಡಬೇಕು, ಸಾತ್ವಿಕವಾದ ಶಾಖಾಹಾರ ತೆಗೆದುಕೊಳ್ಳಬೇಕು.

## 2. ಶುದ್ಧ ಮನಸ್ಸು

ಧ್ಯಾನದಲ್ಲಿ ಮನಸ್ಸು ಶುದ್ಧ ಮಾಡಿಕೊಂಡವರಿಗೆ ಪಾಪವೆಂದರೆ ಏನು ಎಂದು ತಿಳಿಯುತ್ತದೆ. ಪುಣ್ಯವೆಂದರೇನು ಎಂದು ತಿಳಿಯುತ್ತದೆ. ಆದ್ದರಿಂದ ಪಾಪವನ್ನು ಮಾಡರು, ಪುಣ್ಯವನ್ನೇ ಮಾಡುತ್ತಾರೆ.

ಹಾಗೆ ಮನಸ್ಸು ಶುದ್ಧತ್ವವನ್ನು ಹೊಂದಿದಾಗ ಪುಣ್ಯ ಕರ್ಮಗಳು ಅಂದರೆ ಒಳ್ಳೆಯ ಕೆಲಸಗಳನ್ನು ಮಡುತ್ತಾರೆ. ಮನಸ್ಸು ಶುದ್ಧವಾದಾಗ ಎಲ್ಲಾ ಭಗವಂತನೇ? ಎಲ್ಲಾ ಆತನೆ ಎನ್ನುವ ಅನನ್ಯ ಭಕ್ತಿಯಲ್ಲಿ ಬರುತ್ತಾರೆ. ಹಾಗೆ ಅನನ್ಯ ಭಕ್ತಿಯಲ್ಲಿ ಬಂದಾಗ ಪುಣ್ಯ ಕರ್ಮಗಳನ್ನು ನಿಷ್ಕಾಮ ಕರ್ಮವಾಗಿ ಮಾಡುತ್ತಾ ಕರ್ಮ ಯೋಗದಲ್ಲಿ ಬರುತ್ತಾರೆ. ಹಾಗೆ ಕರ್ಮಯೋಗದಲ್ಲಿ ಬಂದಾಗ, ಕರ್ಮ ಫಲವನ್ನು ತ್ಯಾಗ ಮಾಡುವುದರಿಂದ ಪುಣ್ಯ ಕರ್ಮಗಳೆಲ್ಲವು ಕರ್ಮಯೋಗವಾಗಿ

ಬದಲಾಗುತ್ತವೆ. ಕೊನೆಗೆ ಅದು ಯಜ್ಞಕರ್ಮ ಆಗುತ್ತದೆ. ಸತ್ಕರ್ಮವಾಗುತ್ತದೆ. ಈಗ ಅವರು ಧ್ಯಾನದಲ್ಲಿ ಬರುತ್ತಾರೆ

ಮೊದಲು ರಾಘವರಾವುರವರಿಗೆ ವೆಂಕಟೇಶ್ವರ ಸ್ವಾಮಿ ಅಂದರೆ ವಿಪರೀತವಾದ ಭಕ್ತಿ ಇತ್ತು. ಏನು ಮಾಡಿದರೂ ಬಾಲಾಜಿ ಎನ್ನುತ್ತಲೆ ಮಾಡುತ್ತಿದ್ದರು. ದಾನ ಧರ್ಮಗಳನ್ನು ಮಾಡುತ್ತಿದ್ದರು. ಅವರ ದಾನ ಧರ್ಮಗಳ ಫಲವೆ ಅವರಿಗೆ ಉತ್ತಮ ಸದ್ಗುರುವು ಪತ್ರೀಜಿಯವರು ದೊರಕಿದರು. ಅವರ ಮೂಲಕ ಸತ್ಯವು ದೊರಕಿತು, ಧರ್ಮವು ದೊರಕಿತು.

ಆದರೆ ಶುದ್ಧ ಮನಸ್ಸಿನಿಂದ ಅವರು ಉತ್ತಮಗೊಳ್ಳುತ್ತಾರೆ. ನಂತರ ತನ್ನಂತಹವರೆಲ್ಲರ ಒಳ್ಳೆಯದಕ್ಕಾಗಿ ಕೃಷಿ ಮಾಡುತ್ತಾರೆ. ಹಾಗೆ ಸರ್ವೇಜನಾ ಸುಖಿನೋ ಭವಂತು ಎಂದು ಹೇಳುವುದಲ್ಲ. ಆಚರಣೆಯಲ್ಲಿ ಇಡಬೇಕು ಎನ್ನುವುದನ್ನು ಗುರುವಿನಿಂದ ಕಲಿತುಕೊಳ್ಳುತ್ತಾರೆ.

## 3. ವಿಶುದ್ಧ ಮನಸ್ಸು

ತೀವ್ರ ಸಾಧನೆಯ ಮೂಲಕ ಮನಸ್ಸು ವಿಶುದ್ಧ ತತ್ವದಲ್ಲಿ ಅಂದರೆ ವಿಶೇಷವಾದ ಶುದ್ಧತ್ವದಲ್ಲಿ ಬಂದಾಗ ಅರಿಷಡ್ವರ್ಗಗಳು ಅಧೀನದಲ್ಲಿ ಬರುತ್ತವೆ.

ಕಾರಣ ಸದ್ಗುರುಗಳ ಬಳಿ ಹೋದಾಗ ಅವರು ಹೇಳುವ ಮೊಟ್ಟಮೊದಲ ವಿಷಯವೇನೆಂದರೆ, ನೀನು ಜೀವಿಯಲ್ಲ, ನೀನೆ ದೈವವು ಎಂದು ಹೇಳುತ್ತಾರೆ. ಆಮೇಲೆ ನೀನೆ ಅಲ್ಲ ಸೃಷ್ಟಿಯಲ್ಲಿ ಎಲ್ಲಾ ಜೀವರು ದೈವವೆ ಎಂದು ಹೇಳುತ್ತಾರೆ.

ಹಾಗೆ ಗುರುವು 'ಅಹಂ ಬ್ರಹ್ಮಾಸ್ಮಿ' ಎಂದು ಮೊದಲು ಕಲಿಸುತ್ತಾನೆ. ಆಮೇಲೆ 'ತತ್ವಮಸಿ' ಎಂದು ಹೇಳುತ್ತಾನೆ. ಆ ಮೇಲೆ 'ಸರ್ವಂ ಖಲ್ವಿದಂ ಬ್ರಹ್ಮ' ಅಂದರೆ ಸೃಷ್ಟಿಯೆಲ್ಲ ಬ್ರಹ್ಮಮಯವೆಂದು ಹೇಳುತ್ತಾರೆ. ಹಾಗೆ ವಿಶುದ್ಧತ್ವದಲ್ಲಿ ಬಂದಾಗ ವಿಶೇಷವಾದ ಜ್ಞಾನ ಬರುತ್ತದೆ.

ವಿಶುದ್ಧ ತತ್ವದಲ್ಲಿ ಬಂದಾಗ ನಾನು ಎನ್ನುವುದು ಯಾವುದೂ ಇಲ್ಲ, ಇರುವುದೆಲ್ಲಾ ಭಗವಂತನೆ ಎಂದು ತಿಳಿಯುತ್ತದೆ. ಅಷ್ಟೇ ಅಲ್ಲ ನಾನು ಕೊಡುವುದು ಯಾರಿಗೆ? ಪಡೆದು ಕೊಳ್ಳುವುದೂ ಯಾರಿಂದ ಎಂದೂ ಕೂಡಾ ತಿಳಿಯುತ್ತದೆ.

ಈ ಸೃಷ್ಟಿಯಲ್ಲಿ ಆತ್ಮನಾದ ನಾನು ಈ ದೇಹವೆಂಬ ದಿರಿಸನ್ನು ಧರಿಸಿ ಬಂದಿದ್ದೇನೆ

ಎಂದು ತಿಳಿಯುತ್ತದೆ. ಅಂದರೆ ನಾನು ಶಾಂತಿಯಿಂದ ಜೀವಿಸುವುದು, ಜ್ಞಾನವನ್ನು ಹೊಂದುವುದು ಅಲ್ಲ, ಧರ್ಮದಿಂದ ಜೀವಿಸುತ್ತಾ ಸೃಷ್ಟಿಯಲ್ಲಿ ಎಲ್ಲರೂ ಕೂಡಾ ಏಕೆ ಬಂದಿದ್ದಾರೆ ಎಂಬುದನ್ನು ಕೂಡ ತಿಳಿದುಕೊಳ್ಳುತ್ತಾರೆ.

ಮಾನವ ಜನ್ಮದ ಅರ್ಥವೇನು? ಜೀವನ ಪರಮಾರ್ಥವೇನು? ಆ ಪರಮಾರ್ಥ ಹೊಂದಲು, ಗುರಿಯನ್ನು ಹೊಂದುವುದಕ್ಕೆ ಸೇರುವುದಕ್ಕೆ ಲಕ್ಷ್ಯದೆಡೆಗೆ ಪಯಣಿಸುವುದಕ್ಕೆ ಬೇಕಾದ ಧ್ಯಾನ ಸಾಧನೆ ಎಂಬುದು ತಿಳಿದುಕೊಳ್ಳುತ್ತಾರೆ.

ಆದ್ದರಿಂದ ಪತ್ರೀಜಿಯವರಂತಹ ಗುರುವನ್ನು ಆಶ್ರಯಿಸಿ, ಧ್ಯಾನ ಸಾಧನೆ ಕಲಿತುಕೊಂಡು, ವಿಶೇಷವಾಗಿ ಮಾಡುತ್ತಾ ವಿಶುದ್ಧ ತತ್ವದಲ್ಲಿ ಬಂದಾಗ ನಾನು ಆತ್ಮ ಎಂದು ತಿಳಿದುಕೊಳ್ಳುವರು.

ವಿಶುದ್ಧತ್ವದಲ್ಲಿ ಕೋರಿಕೆಗಳೆನ್ನುವಂತಹವು ಇರುವುದಿಲ್ಲ. ಕಾರಣ ಯಾರಿಗೆ ಏನು ಬೇಕೋ? ಯಾರಿಗೆ ಯಾವ ಅರ್ಹತೆ ಇದೆಯೋ! ಅವುಗಳನ್ನು ಪ್ರಕೃತಿ ಮೂಲಕ ಹೊಂದುತ್ತಲೆ ಇರುತ್ತಾರೆ.

ಹಾಗೆ ವಿಶುದ್ಧತ್ವದಲ್ಲಿ ಬಂದಾಗ ನಾನು ಕೋರಿಕೊಳ್ಳುವುದು ಏನೂ ಇಲ್ಲ. ನನಗೆ ಬರಬೇಕಾದದ್ದು ಬಂದಿವೆ. ನನಗೆ ಬೇಕಾದವೆಲ್ಲಾ ಇವೆ ಎಂದು ಗ್ರಹಿಸಿ ಜೀವನಾಗಿ ಬಂದವನು ದೇವರಾಗಿ ಬೆಳೆಯುತ್ತಾನೆ. ಹಾಗೆ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ, ನಾನೆ ದೈವವು, ನಾನೆ ಭಗವಂತನು, ಅಹಂ ಬ್ರಹ್ಮಾಸ್ಮಿ ಎನ್ನುವ ತತ್ವದೊಳಗೆ ಬರುತ್ತಾರೆ.

ಅಷ್ಟೇ ಅಲ್ಲ ಎಷ್ಟು ವಿಶುದ್ಧತ್ವದಲ್ಲಿ ಇರುತ್ತಾರೊ! ಅಷ್ಟು ಉತ್ತಮವಾದ ಜ್ಞಾನ ಹೆಚ್ಚುತ್ತದೆ. ಆತ್ಮಾನುಭೂತಿಯನ್ನು ಹೊಂದುತ್ತಾರೆ.

ನೋಡಿ ಶಂಕರಾಚಾರ್ಯರು 14ನೇ ವಯಸ್ಸಿನಲ್ಲಿ ಆತ್ಮಾನುಭೂತಿ ಹೊಂದಿದ್ದರು. ಅಂದರೆ ಆತ್ಮ ದರ್ಶನ ಹೊಂದಿದ್ದರು. ಅಂದರೆ ಆತನು ಚಿಕ್ಕ ವಯಸ್ಸಿನಿಂದಲೇ ಜ್ಞಾನವನ್ನು ಹೆಚ್ಚಿಸಿಕೊಂಡರು. ಹಾಗೆ ವಿವೇಕಾನಂದರು 28 ವರ್ಷಕ್ಕೆ ಆತ್ಮದರ್ಶನ ಹೊಂದಿದ್ದರು. ಬುದ್ಧನು 40 ವರ್ಷಕ್ಕೆ ಆತ್ಮ ದರ್ಶನ ಹೊಂದಿದನು.

ಹಾಗೆ ವಿಶೇಷವಾದ ಜ್ಞಾನವನ್ನು ಹೊಂದಿದವನು ಹೇಗೆ ಇರುತ್ತಾನೆ ಎಂದರೆ?

ಒಬ್ಬ ಶಂಕರಾಚಾರ್ಯರಂತೆ, ಒಬ್ಬ ವಿವೇಕಾನಂದರಂತೆ, ಒಬ್ಬ ಬುದ್ಧನಂತೆ ಇರುತ್ತಾರೆ. ಅಂದರೆ ಅವರು ಲೋಕಕ್ಕಾಗಿಯೇ ಶ್ರಮಪಡುತ್ತಿರುತ್ತಾರೆ ವಿಶ್ವಕ್ಕಾಗಿಯೇ ಪತ್ರೀಜಿಯವರು ಹಾಗೆಯೇ ಪರಿತಪಿಸುತ್ತಿದ್ದರು. ಆವರಂತೆ 10 ಮಂದಿಗೆ ಜ್ಞಾನವನ್ನು ಹೇಳಬೇಕು ಎಂಬ ಕೋರಿಕೆ ಬಂದಿತೆಂದರೆ ವಿಶುದ್ಧತ್ವದಲ್ಲಿ ಇದ್ದಂತೆ ನಾನು ಚೆನ್ನಾಗಿದ್ದರೆ ಸಾಲದು ನನ್ನೊಂದಿಗೆ ಎಲ್ಲರೂ ಚೆನ್ನಾಗಿರಬೇಕು ಎಂಬ ಕೋರಿಕೆ ಇರಬೇಕು.

ಅದಕ್ಕೆ ನಮ್ಮ ಮುಂದಿರುವವರನ್ನು ನಾವು ಉಪಮಾನವಾಗಿ ತೆಗೆದುಕೊಂಡಾಗ ನಾವು ಬೆಳವಣಿಗೆ ಹೊಂದಲು ಎಷ್ಟೋ ಅವಕಾಶಗಳಿರುತ್ತವೆ. ಹಾಗೆ ನಮ್ಮಲ್ಲಿ ಏನಾದರೂ ಕೇಡುಗಳು ಇದ್ದರೆ ತೊಲಗಿಸಿಕೊಳ್ಳುತ್ತೇವೆ. ಒಳ್ಳೆಯದನ್ನು ಬೆಳೆಸಿಕೊಳ್ಳುತ್ತೇವೆ. ಹಾಗೆ ಬೆಳೆದಾಗಲೆ ಜ್ಞಾನವು ವೃದ್ಧಿಯಾಗುತ್ತದೆ.

# ಮಾನವನು ಆಚರಿಸಬೇಕಾದ ಕೆಲವು ಧರ್ಮಗಳು

ನಾವು ಪ್ರತಿದಿನ ಜ್ಞಾನವುಳ್ಳ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುತ್ತೇವೆ. ಎಷ್ಟು ದಿನಗಳಿಂದ ತಿಳಿದುಕೊಂಡರೂ ಇನ್ನೂ ತಿಳಿದುಕೊಳ್ಳಬೇಕಾಗಿರುವುದು ಇದೆ ಅಂದರೆ? ಈ ಜ್ಞಾನವು ಅನಂತವಾದುದು ಎಂದು ಅರ್ಥವಾಗುತ್ತದೆ. ಇದನ್ನು ನೋಡಿದರೆ, ಜ್ಞಾನವನ್ನು ಪಡೆಯುವುದಕ್ಕೆ ಆತ್ಮಗಳಾದ ನಮಗೆ ಒಂದು ಜನ್ಮ ಸಾಕಾಗುವುದಿಲ್ಲ, ಎಷ್ಟೋ ಜನ್ಮಗಳು ಬೇಕಾಗುತ್ತದೆ ಎಂದೂ ಕೂಡಾ ಅರ್ಥವಾಗುತ್ತದೆ.

ಆದರೆ ಶ್ರದ್ಧೆ, ಛಲವಿದ್ದರೆ ನೂರು ಜನ್ಮಗಳಲ್ಲಿ ಕಲಿತುಕೊಳ್ಳಬೇಕಾದದ್ದನ್ನು ಬಹಳ ಕಡಿಮೆ ಜನ್ಮಗಳಲ್ಲಿಯೆ ಕಲಿತುಕೊಳ್ಳಬಹುದು. ಯಾರಾಗಲಿ ಮನೋ ಸ್ಥಿತಿಯಲ್ಲಿ ಇರದೆ, ಆತ್ಮ ಸ್ಥಿತಿಯಲ್ಲಿ ಇದ್ದರೆ ಜ್ಞಾನವನ್ನು ಹೊಂದಬೇಕು ಎಂಬ ಹಂಬಲವಿರುತ್ತದೆ.

ನಮ್ಮವರೆಲ್ಲರೂ ಕಷ್ಟಪಟ್ಟು ಬೆಳಗಿನ ಜಾವದಲ್ಲಿಯೇ ಎದ್ದು, ಜೂಮ್‌ನಲ್ಲಿ ಪಾಲ್ಗೊಂಡು ಜ್ಞಾನವನ್ನು ಹೊಂದುತ್ತಿದ್ದಾರೆಂದರೆ! ಎಲ್ಲರೂ ಆತ್ಮ ಸ್ಥಿತಿಯಲ್ಲಿ ಬೆಳೆದವರೆಂದು ತಿಳಿದುಕೊಳ್ಳಬೇಕು. ಆತ್ಮೋದ್ಧಾರಕ್ಕಾಗಿ, ಆತ್ಮದ ಉನ್ನತಿಗಾಗಿ ಮೋಕ್ಷಕ್ಕಾಗಿ ಪ್ರಯತ್ನಿಸುತ್ತಿರುವವರೆ ಎಂದು ನಾವು ಖಚಿತವಾಗಿ ಹೇಳಬಹುದು. ಇವರೆಲ್ಲರಿಗೆ ಹಂಬಲ ಇದೆ ಎಂದು ಹೇಳುವುದಲ್ಲ, ಆ ಹಂಬಲ ಏನೆಂಬುದನ್ನು ಆಚರಣೆಯಲ್ಲಿ ಉತ್ತಮವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಯಾರಾದರಾಗಲಿ ಸರಿ ಇಷ್ಟು ಆಳವಾಗಿ, ಇಷ್ಟು ಶ್ರೇಷ್ಠ ಜ್ಞಾನವನ್ನು ತಿಳಿದುಕೊಳ್ಳುವ ಅವಕಾಶವು ಈ ಒಂದು ಜೂಮ್‌ನಲ್ಲಿಯೇ ದೊರೆಯುತ್ತದೆ. ಹೀಗೆ ಇಷ್ಟು ವರ್ಷಗಳಿಂದ ಜೂಮ್ ನಡೆಸಲ್ಪಟ್ಟಿದೆ ಎಂದರೆ ಆತ್ಮಜ್ಞಾನದ ಮೇಲೆ ಎಷ್ಟು ಹೊಸ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದಾರೋ ಅರ್ಥ ಮಾಡಿಕೊಳ್ಳಬಹುದು.

ಋಷಿ ಋಣವನ್ನು ತೀರಿಸಿಕೊಳ್ಳಬೇಕೆಂದರೆ ಆ ಋಷಿಗಳೆಲ್ಲರೂ ಉಪನಿಷತ್ತುಗಳ ಮೂಲಕ, ಶಾಸ್ತ್ರಗಳ ಮೂಲಕ ಒದಗಿಸಿದ ಜ್ಞಾನವನ್ನು ನಾವು ಅಧ್ಯಯನ ಮಾಡಿ, ಆ ಜ್ಞಾನವನ್ನು ಇನ್ನೊಬ್ಬರಿಗೆ ಹೇಳಲು ಸಾಧ್ಯವಾದಾಗ ಮಾತ್ರವೆ ಆ ಋಷಿ ಋಣವನ್ನು ನಾವು ತೀರಿಸಬಲ್ಲೆವು.

ಈ ದಿನ ನಾವು ಅದು ಸತ್ಯವೆಂದು ನಂಬಿದೆವು. ಅದಕ್ಕೆ ನಮಗೆ ದೇಹ ಮಟ್ಟದ

(ಮೆದುಳು), ಮನಸ್ಸಿನ ಮಟ್ಟದ ಪುಸ್ತಕಗಳನ್ನು ಓದಬೇಕು. ಅಂತ ಅನಿಸುವುದಿಲ್ಲ. ಆತ್ಮ ಒಂದನ್ನೇ ಕುರಿತು ಆತ್ಮ ಜ್ಞಾನವನ್ನು ಕುರಿತು ಹೇಳುವ ಪುಸ್ತಕಗಳ ಮೇಲೆಯೆ ಆಸಕ್ತಿ ಇರುತ್ತದೆ. ನಾವು ಹೇಳುವ ವಿಷಯಗಳೆಲ್ಲಾ ಆತ್ಮಜ್ಞಾನದ ಮೇಲೆ, ಆತ್ಮವನ್ನು ಉನ್ನತ ಸ್ಥಿತಿಗೆ ಹೇಗೆ ತೆಗೆದುಕೊಂಡು ಹೋಗಬಲ್ಲೆವು ಎನ್ನುವ ವಿಷಯಗಳ ಮೇಲೆಯೇ ಇರುತ್ತದೆ.

ಅಂದರೆ ನಮ್ಮ ಸ್ವರೂಪವೆ ಆತ್ಮ ಆದರೂ, ಮನಸ್ಸಿನ ಪ್ರಭಾವದಿಂದ ನಾವು ದೈವಗಳಾಗಿ ಇರಲು ಆಗುತ್ತಿಲ್ಲ, ಇವುಗಳನ್ನೆಲ್ಲಾ ತಿಳಿದುಕೊಂಡಾಗ ಮನಸ್ಸಿನ ಪ್ರಾಮುಖ್ಯತೆ ಕಡಿಮೆ ಮಾಡಿ ಆತ್ಮಕ್ಕೆ ಪ್ರಾಮುಖ್ಯತೆ ಕೊಡುತ್ತೇವೆ.

ಈಗ ಯಾವುದಾದರೂ ಒಂದು ಕ್ಲಾಸ್ ಹೇಳುತ್ತಿದ್ದೇವೆ ಅಂದರೆ ಪ್ರಕೃತಿ ನಮಗೆ ಅವಕಾಶ ಕೊಟ್ಟಿದೆ ಎಂದು ಭಾವಿಸಬೇಕು. ಪ್ರಾರಂಭದಲ್ಲಿ ರಾಘವರಾವ್‌ರವರು ಹೇಳು ಎಂದಾಗ, ನನಗೆ ಹೇಳಲು ಏನು ಬರುತ್ತದೆ? ನನಗೇನು ಗೊತ್ತು ಎಂದು ಅಂದುಕೊಂಡೆ ಅದಕ್ಕೂ ಮೊದಲು ವಿಷ್ಣು ಸಹಸ್ರನಾಮ, ಲಲಿತಾ ಸಹಸ್ರ ನಾಮಗಳನ್ನು ಪಾರಾಯಣ ಮಾಡಿದೆನು. ಆದರೆ ನನಗೆ ಸಂಸ್ಕೃತ ತಿಳಿಯದೆ, ಅವುಗಳಲ್ಲಿರುವ ಪದಗಳಿಗೆ ಅರ್ಥವನ್ನು ಹೇಳಲಾರದೆ, ನಾನು ಹೇಳಲಾರೆನೇನೋ ಎಂದು ಕೊಳ್ಳುತ್ತಿದ್ದೆ.

ಆದರೆ ಆಗ ಪತ್ರೀಜಿಯವರು ಆಗಲಿ, ರಾಘವರಾವ್ ಅವರಾಗಲಿ, ನೀನು ಹೇಳಬಲ್ಲೆ ಎಂದು ಹೇಳುತ್ತಿದ್ದರೆ ನನಗೇನು ತಿಳಿಯದು, ನನಗೇನು ಗೊತ್ತು ಎಂದು ನನ್ನನ್ನು ನಾನೆ ಕಡಿಮೆಯಾಗಿ ಲೆಕ್ಕ ಹಾಕುತ್ತಾ ಇದ್ದೆನು. ಆದರೆ ಧ್ಯಾನ ಸಾಧನೆ ಮಾಡುತ್ತಿದ್ದಾಗ, ಹೇಳಿದರಲ್ಲವೆ? ನನಗೆ ಬರುತ್ತದೆಯೋ! ಬರುವುದಿಲ್ಲವೋ! ಎಂದು ತಿಳಿಯುವುದು ಎಂದು ಅನಿಸಿತು. ಹೇಳಲು ಪ್ರಾರಂಭಿಸಿದೆನು. ಆಗ ನನಗೆ ಅನಿಸಿತು ಒಬ್ಬ ಗುರುವು ಹೇಳಿದ್ದಾನೆಂದರೆ ನನ್ನಲ್ಲಿ ಶ್ರೇಷ್ಠವಾದದ್ದು ಇದ್ದರೇನೆ ಅಲ್ಲವೆ? ಹೇಳುತ್ತಾರೆ ಎಂದು ಅಂದುಕೊಂಡೆನು.

ಏಕೆಂದರೆ ಗಂಡನು ಎಷ್ಟು ಉತ್ತಮನಾದರೂ ಒಪ್ಪಿಕೊಳ್ಳುವ ಮನಸ್ಸಾಗದು. ಆದರೆ ಮೆಲ್ಲ ಮೆಲ್ಲಗೆ ರಾಘವರಾವುರವರ ಶ್ರೇಷ್ಠತೆ ನನಗೆ ಅರ್ಥವಾಯಿತು. ಹಾಗೆ ಮೊದಲಿಟ್ಟು ತಿಳಿದಿರುವುದನ್ನು ಚಿಕ್ಕ ಚಿಕ್ಕದಾಗಿ ಹೇಳುತ್ತಿದ್ದಾಗ, ನಿಧಾನವಾಗಿ ಅಭ್ಯಾಸವಾಯಿತು. ಹಾಗೆ ಪುಸ್ತಕಗಳಿಂದ ಓದಿ, ಪತ್ರೀಜಿ ಹೇಳಿದವುಗಳನ್ನು ಕೇಳಿ ಹೇಳುತ್ತಿದ್ದಾಗ, ಎಲ್ಲರೂ ಚೆನ್ನಾಗಿದೆ ಎಂದು ಅನ್ನುತ್ತಿರುವಾಗ ನನ್ನಲ್ಲಿ ಇನ್ನೂ, ಇನ್ನೂ ಹೇಳಬೇಕು ಎಂಬ ಆಸಕ್ತಿ ಹೆಚ್ಚಿತ್ತು. ಅಷ್ಟೇ ಅಲ್ಲ ಇನ್ನೂ ಕಲಿಯಬೇಕು, ಇನ್ನೂ ಉತ್ತಮವಾಗಿ ಹೇಳಬೇಕು ಎನ್ನುವ ಛಲವು ಹೆಚ್ಚಿತು.

ಮೊದಲು ನಾನು ಕಲಿತರೆ ತಾನೆ ಹೇಳಬಲ್ಲೆನು ಎಂದು ಅಂದುಕೊಂಡು ಧ್ಯಾನ ಸಾಧನೆ ಇನ್ನೂ ಹೆಚ್ಚು ಮಾಡುತ್ತಾ ಪುಸ್ತಕಗಳನ್ನು ಓದುತ್ತಾ ಹೇಳಲು ಬಂದ ಅವಕಾಶವನ್ನು ಉಪಯೋಗಿಸಿಕೊಳ್ಳುವುದನ್ನು ಮಾಡುತ್ತಿದ್ದೆನು. ಪತ್ರೀಜಿಯವರು ಸ್ವಾಧ್ಯಾಯಕ್ಕೆ ಎಷ್ಟೋ ಮಹತ್ವ ಕೊಡುತ್ತಾರೆ ಎಂದು ಆಗಲೆ ನನಗೆ ಅರ್ಥವಾಯಿತು.

ಆ ಸ್ವಾಧ್ಯಾಯವೆ ಇಲ್ಲದೆ ಹೋದರೆ ಈ ದಿನ ನಾವೆಲ್ಲರೂ ಕೂಡಾ ಏನು ತಿಳಿಯದಂತೆಯೆ। ಏನು ಕಲಿಯದಂತೆಯೆ, ಆತ್ಮಗಳಾದ ನಾವು ಮಾನವರಂತೆ ಅಂದರೆ ಜೀವರಾಗಿಯೆ ಜೀವಿಸುತ್ತಿದ್ದೆವು.

ಯಾವಾಗಾದರೆ ಮನಸ್ಸನ್ನು ಶುದ್ಧಿ ಮಾಡಿಕೊಳ್ಳುತ್ತೇವೆಯೋ! ಸಾತ್ವಿಕದಿಂದ ಶುದ್ಧ ಸಾತ್ವಿಕದೊಳಗೆ ಬರುತ್ತೇವೆ. ಆಗ ಸಾಧನೆಯ ಮೇಲೆ ಶ್ರದ್ಧೆ, ಜ್ಞಾನದ ಮೇಲೆ ಹಂಬಲ ಬರುತ್ತವೆ. ಆಗ ಆತ್ಮಗಳಾದ ನಾವು ಪರಮಾತ್ಮರಾಗಿ ಬೆಳೆಯುತ್ತೇವೆ. ಅಂದರೆ ಆ ಲಕ್ಷಣಗಳನ್ನು ಸಂಪಾದಿಸಿಕೊಳ್ಳುತ್ತೇವೆ. ವರ್ತನೆಗಳಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತೇವೆ. ಅಷ್ಟೇ ಅಲ್ಲ, ಪರಮಾತ್ಮರಾದ ನಾವು ಭೂಮಿಯ ಮೇಲೆ ಇರುವಾಗಲೆ ಮಾಡಬೇಕಾದ ಧರ್ಮಗಳನ್ನು ಕೂಡಾ ತಿಳಿದುಕೊಳ್ಳುತ್ತೇವೆ.

ಏಕೆಂದರೆ? ಮಾನವ ಜನ್ಮಕ್ಕೆ ಯಾವ ಇತರ ಜೀವಿಗಳಿಗೆ ಇಲ್ಲದ ಕೆಲವು ಧರ್ಮಗಳು ಇರುತ್ತವೆ. ದಿನಾಲೂ ನಾವು ಹೇಳಿಕೊಳ್ಳುವ ಸಂದೇಶಗಳು ಎಲ್ಲಾ ಕೂಡಾ ನಾವು ಆಚರಿಸಬೇಕಾದ ಧರ್ಮಗಳೇ! ಮತ್ತೆ ಆ ಧರ್ಮಗಳಲ್ಲಿ ಎಷ್ಟನ್ನು ಆಚರಿಸುತ್ತಿದ್ದೇವೆ? ಇನ್ನೂ ಆಚರಿಸಬೇಕಾದ ಧರ್ಮಗಳು ಎಷ್ಟು ಇವೆಯೋ ಕೂಡಾ ತಿಳಿದುಕೊಳ್ಳಬೇಕು. ಏಕೆಂದರೆ ಎಲ್ಲ ಆಚರಿಸದಿದ್ದರೆ ಮತ್ತೆ ಭೂಮಿ ಮೇಲೆ ಬರಬೇಕಾಗಿದ್ದೆ. ಏಕೆಂದರೆ? ಈ ಮಾನವ ಜನ್ಮಕ್ಕೊಂದೆ ಜ್ಞಾನವನ್ನು ಹೊಂದುವ ಅರ್ಹತೆ ಇದೆ ಆದ್ದರಿಂದ.

ಅದಕ್ಕೆ ಮಾನವ ಜನ್ಮ ಬರುವುದೆ ಶ್ರೇಷ್ಠವೆಂದು ಶಂಕರಾಚಾರ್ಯರ ವಿವೇಕ ಚೂಡಾಮಣಿಯಲ್ಲಿ ಹೇಳಲ್ಪಟ್ಟಿದೆ.

ಹಾಗೆ ಮಾನವನಾಗಿ ಹುಟ್ಟಿದವರು, ಧರ್ಮವನ್ನು ಪೂರ್ತಿಯಾಗಿ ಆಚರಿಸಬೇಕು ಅಂದರೆ ಏನು ಆಚರಿಸಬೇಕೊ ತಿಳಿದುಕೊಳ್ಳೋಣ.

ಮುಖ್ಯವಾಗಿ

1. ಪರಬ್ರಹ್ಮನನ್ನು ಆಶ್ರಯಿಸಬೇಕು.

2. ವೇದ ಜ್ಞಾನವನ್ನು ತಿಳಿದುಕೊಳ್ಳಬೇಕು

3. ಯಜ್ಞ ಅಂದರೆ ಲೋಕ ಕಲ್ಯಾಣಕರವಾದ ಕರ್ಮಗಳನ್ನು ಮಾಡಬೇಕು.

4. ಆತ್ಮ ಕರ್ಮಗಳು ಅಂದರೆ ಮುಕ್ತಿ ಕರ್ಮಗಳನ್ನು ಮಾಡಬೇಕು.

ಈ ನಾಲ್ಕು ಯಾವಾಗಲೂ ಆಚರಿಸುತ್ತಾ ಇರಬೇಕು. ಪ್ರಾಪಂಚಿಕ ಜೀವನದಲ್ಲಿ ಇರುವವರು ಅಂದರೆ ಆಧ್ಯಾತ್ಮಿಕತೆ ಅಂದರೆ ತಿಳಿಯದವರಿಗೆ ಇವುಗಳ ಕುರಿತು ತಿಳಿಯದು.

ನಾವು ಆಧ್ಯಾತ್ಮಿಕ ಮಾರ್ಗದಲ್ಲಿ ಬಂದಿದ್ದೇವೆಯಾದ್ದರಿಂದ ಸ್ವಲ್ಪ ಸ್ವಲ್ಪವಾಗಿ ತಿಳಿದುಕೊಳ್ಳುತ್ತಾ, ಯಾವುದು ಅವಸರವೋ ಅದು ಆಚರಿಸಲು ಪ್ರಯತ್ನಿಸುತ್ತೇವೆ.

ಆಧ್ಯಾತ್ಮಿಕ ಜೀವನದಲ್ಲಿ ಮೊದಲು ಪರಬ್ರಹ್ಮನನ್ನು ಆಶ್ರಯಿಸಬೇಕು.

## 1. ಪರಬ್ರಹ್ಮನನ್ನು ಆಶ್ರಯಿಸಬೇಕು :–

ಪರಬ್ರಹ್ಮ ಎಂದರೆ ಯಾರೋ ಅಲ್ಲ. ಈ ಸೃಷ್ಟಿಯನ್ನು ಸೃಷ್ಟಿ ಮಾಡಿದ ಸೃಷ್ಟಿಕರ್ತ, ಆತನನ್ನೇ, ಪರಮಾತ್ಮ, ವಿಶ್ವಾತ್ಮ, ಮೂಲಾತ್ಮ, ಭಗವಂತನು ಎನ್ನುತ್ತಾರೆ. ಪತ್ರೀಜಿ ಆತ್ಮವೆ ಪರಬ್ರಹ್ಮವೆಂದು ಜ್ಞಾನ ನವರತ್ನಗಳಲ್ಲಿ ಹೇಳಿದ್ದಾರೆ.

ಈ ಪರಬ್ರಹ್ಮನಿಂದಲೆ ಸೃಷ್ಟಿಯೆಲ್ಲಾ ನಡೆಯುತ್ತಿದೆ. ಜೀವಿಗಳು, ಜೀವರಾಶಿಗಳು, ನದಿಗಳು, ಬೆಟ್ಟ–ಗುಡ್ಡಗಳು, ಇವೆಲ್ಲವನ್ನು ಸೃಷ್ಟಿಸಿದವನು ಆ ಪರಬ್ರಹ್ಮನೆ.

ಇಲ್ಲಿ ಪರಾ ಅಂದರೆ ಕಾಣಿಸದ, ಬ್ರಹ್ಮ ಅಂದರೆ ಎಲ್ಲಕ್ಕಿಂತಲೂ ಶ್ರೇಷ್ಠನು/ದೊಡ್ಡವನು ಎಂದು ಅರ್ಥ. ಆದ್ದರಿಂದ ಆ ಪರಬ್ರಹ್ಮನೊಬ್ಬನ ಚೈತನ್ಯ ಶಕ್ತಿಯಿಂದಲೆ ಈ ಸೃಷ್ಟಿಯು ನಡೆಯಲ್ಪಡುತ್ತಿದೆ. ಎಂದು ಈ ಆಧ್ಯಾತ್ಮಿಕ ಮಾರ್ಗದಲ್ಲಿ ಗುರುಗಳು ಬೋಧಿಸುವ ಮೊಟ್ಟ ಮೊದಲ ಬೋಧನೆ.

ಅಷ್ಟೇ ಅಲ್ಲ ಎಲ್ಲರೂ ಆರಾಧಿಸುವ ದೇವರುಗಳಿಗೆಲ್ಲರಿಗೂ ಅಂದರೆ ಮುಕ್ಕೋಟಿ ದೇವತೆಗಳಿಗೂ ಕೂಡಾ ಶಕ್ತಿಯನ್ನು ಕೊಡುವುದು ಆ ಪರಬ್ರಹ್ಮನೆ ಎಂದು ತಿಳಿದು ಕೊಳ್ಳಬೇಕು. ಆದ್ದರಿಂದ ಯಾರಾದರೆ "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನ ಮಾಡುತ್ತಾರೊ! ಆ ಪರಬ್ರಹ್ಮನ ಶಕ್ತಿಯನ್ನು ಹೊಂದುವಂತರಾಗುತ್ತಾರೆ. ಪರಬ್ರಹ್ಮನನ್ನು ತಿಳಿದುಕೊಳ್ಳುವರಾಗುತ್ತಾರೆ.

ಆದರೆ ಪರಬ್ರಹ್ಮನಲ್ಲದೆ ದೇವತೆಗಳನ್ನು ಆರಾಧಿಸಿದರೆ ಪ್ರಾಪಂಚಿಕ ಭೋಗಗಳೇ

ಒದಗುತ್ತವೆ. ಆದರೆ ಆ ಪರಬ್ರಹ್ಮನನ್ನು ಆರಾಧಿಸಿದರೆ ಅಂದರೆ ಧ್ಯಾನಿಸಿದರೆ ಮೋಕ್ಷವೆ ಲಭಿಸುತ್ತದೆ ಎಂದು ಪರಮಗುರುಗಳು ಹೇಳುತ್ತಾರೆ.

ಅದಕ್ಕೆ ಪರಬ್ರಹ್ಮನೊಬ್ಬನ ಶ್ರೇಷ್ಟತೆಯನ್ನು ಕುರಿತು ತಿಳಿದುಕೊಂಡವರು ಪ್ರಪಂಚದಲ್ಲಿ ಇರುವಂತಹವುಗಳಿಗೆ ಪ್ರಾಮುಖ್ಯತೆ ಕೊಡದೆ, ಈ ಪ್ರಪಂಚಕ್ಕೆ ಶಕ್ತಿಯನ್ನು ಕೊಡುವ ಪರಬ್ರಹ್ಮಕ್ಕೆ ಪ್ರಾಮುಖ್ಯವನ್ನು ಕೊಡುತ್ತಾರೆ. ಆದರೆ ಇದನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಬಂದವರು ಮಾತ್ರವೆ ಮಾಡಬಲ್ಲರು. ಅದಕ್ಕೆ ಯಾರಾಗಲಿ ಬ್ರಹ್ಮನನ್ನು ಕುರಿತು ತಿಳಿದುಕೊಳ್ಳಬೇಕು ಎನ್ನುವರು.

ನೋಡಿರಿ, ಜಿಲ್ಲಾಧಿಕಾರಿ ಕಛೇರಿಯಲ್ಲಿ ಜವಾನನನ್ನು ಹಿಡಿದರೆ ಕೆಲಸಗಳು ಆಗುವುದಿಲ್ಲ, ಜಿಲ್ಲಾಧಿಕಾರಿಯನ್ನೇ ಹಿಡಿದುಕೊಂಡರೆ ಕೆಲಸಗಳಾಗುತ್ತವೆ. ಹಾಗೆಯೇ ದೇವರುಗಳನ್ನು ಅಲ್ಲದೆ ಪರಬ್ರಹ್ಮನನ್ನು ಆಶ್ರಯಿಸಬೇಕು, ಅಂದರೆ ಧ್ಯಾನ ಮಾಡಬೇಕು, ಇದೆ ಮಾನವರು ತಿಳಿದುಕೊಳ್ಳಬೇಕಾದ ಮೊದಲ ಧರ್ಮ.

## 2. ವೇದ ಜ್ಞಾನವನ್ನು ತಿಳಿದುಕೊಳ್ಳಬೇಕು :–

ವೇದ ಜ್ಞಾನ ಅಂದರೆ ಸತ್ಯಜ್ಞಾನ ಅಂದರೆ ಆತ್ಮಜ್ಞಾನ. ಇಲ್ಲಿ ಸತ್ಯವೆಂದರೆ ನಿತ್ಯವಾದುದು, ಶಾಶ್ವತವಾದುದು, ಯಾವಾಗಲೂ ಇರುವುದು ಮಾರ್ಪಾಡು ಹೊಂದಲಾರದ್ದು. ಇಷ್ಟು ಲಕ್ಷಣಗಳು ಉಳ್ಳದ್ದೆ ಸತ್ಯವು. ಅಂತಹ ಲಕ್ಷಣಗಳು ಸೃಷ್ಟಿಯಲ್ಲಿ ಪರಬ್ರಹ್ಮನೊಬ್ಬನಿಗೆ ಮಾತ್ರವೆ ಇವೆ. ಆದ್ದರಿಂದ ಪರಬ್ರಹ್ಮನೊಬ್ಬನೆ ಸತ್ಯ. ಕಾರಣ ಆತನು ಸೃಷ್ಟಿಸಲ್ಪಟ್ಟಿಲ್ಲ ಆತನಿಗೆ ಅಂತ್ಯವಿಲ್ಲ, ಆತನು ಮಾರ್ಪಾಡಾಗದ ಶಾಶ್ವತವಾದವನು. ಅಂತಹ ಮಹಿಮೆ ಉಳ್ಳವನು ಪರಬ್ರಹ್ಮ.

ಈ ವಿಷಯಗಳೆಲ್ಲಾ ವೇದಗಳಲ್ಲಿ, ವೇದಗಳ ಸಾರವಾದ ಉಪನಿಷತ್ತುಗಳಲ್ಲಿ ಕೂಡಾ ಕೊಡಲ್ಪಟ್ಟಿದೆ, ಆದ್ದರಿಂದ ಅವುಗಳನ್ನು ಅಧ್ಯಯನ ಮಾಡಬೇಕು ಎನ್ನುತ್ತಾರೆ.

ನೋಡಿರಿ ಕೃತಯುಗದಲ್ಲಿ, ತ್ರೇತಾಯುಗದಲ್ಲಿ ಸದ್ಗುರುಗಳು, ಋಷಿಗಳು, ಶಿಷ್ಯರಿಗೆ ಈ ಜ್ಞಾನವೆಲ್ಲಾ ಹೇಳುತ್ತಿದ್ದರು. ಇವೆಲ್ಲ ಬರಹ ರೂಪದಲ್ಲಿ ವೇದಗಳು, ಉಪನಿಷತ್ತುಗಳೆ ರೂಪದಲ್ಲಿ ವ್ಯಾಸ ಭಗವಾನನರಿಂದ ಕೊಡಲ್ಪಟ್ಟಿದೆ.

ಋಷಿಗಳೆಲ್ಲರೂ ವೇದಗಳ ಮೂಲಕ, ಉಪನಿಷತ್ತುಗಳ ಮೂಲಕ ಸೃಷ್ಟಿಯಲ್ಲಿರುವ ನಿಗೂಢವಾದ ರಹಸ್ಯಗಳು ಅಂದರೆ ಸೃಷ್ಟಿಯಲ್ಲಿ ಏನೇನು ಇವೆ? ಅವುಗಳನ್ನು ಹೇಗೆ

ಹೊಂದಬಹುದು ಎಂದು ಬೋಧಿಸಿದ್ದಾರೆ. ಅಷ್ಟೇ ಅಲ್ಲ ಈ ಸೃಷ್ಟಿಗೆ ಪ್ರತಿರೂಪವೇ ಮಾನವನ ದೇಹವೆಂದು ಕೂಡಾ ವಿವಿರಿಸಿದ್ದಾರೆ.

ಹಾಗಾದರೆ ಇವನೆಲ್ಲಾ ಬರೆದು ವೇದಗಳಲ್ಲಿ ಉಪನಿಷತ್ತುಗಳಲ್ಲಿ ಇಟ್ಟಿದ್ದಾರೆ. ಅವುಗಳನ್ನೆಲ್ಲಾ ಓದದೆ ಹೋದರೆ, ತಿಳಿದುಕೊಳ್ಳದೆ ಹೋದರೆ ಆ ಸೃಷ್ಟಿ ಕುರಿತು ಅರ್ಥವಾಗದು.

ನಾಲ್ಕು ವೇದಗಳ ಸಾರ ಕೂಡಾ ಪತ್ರೀಜಿಯವರ ಪುಸ್ತಕಗಳಲ್ಲಿ ಇದೆ. ಈಗ ರಾಘವರಾವ್ ಕೂಡಾ ತಮ್ಮ ಪುಸ್ತಕಗಳಲ್ಲಿ ಈ ಜ್ಞಾನವನ್ನು ಕೊಡಲು ಎಷ್ಟೋ ಶ್ರಮಿಸುತ್ತಿದ್ದಾರೆ. ಅವರು ಒಂದೊಂದು ಸಾರಿ ನಿದ್ದೆಯ ಮಧ್ಯೆಯಲ್ಲಿ ಎದ್ದೇಳುತ್ತಾರೆ. ಏಕೆ? ಎಂದು ಕೇಳಿದರೆ ಕರೆಕ್ಷನ್ ಇದೆ ಅನ್ನುತ್ತಾರೆ. ನಾಳೆ ಮಾಡಬಹುದಲ್ಲಾ ಎಂದರೆ? ಇಲ್ಲ. ಈಗಲೇ ಮಾಡಬೇಕು ಎಂದು ಹೇಳುತ್ತಾರೆ. ಅಷ್ಟು ಹಂಬಲ ಪಡುತ್ತಾರವರು, ಇದು ಎಲ್ಲರಿಗೂ ಸಾಧ್ಯವಾಗದು.

50 ವರ್ಷಕ್ಕೂ ಮೇಲೆ ನಾನು ಅವರೊಡನೆ ಇದ್ದೇನೆ, ಆದರೆ ನಾನು ಆತನ ಸ್ಥಾಯಿಗೆ ಮುಟ್ಟಲಾಗುತ್ತಿಲ್ಲ. ಕಾರಣ ಆತನ ಆತ್ಮಸ್ಥಿತಿ ಅಂತಹುದು.

ಅದಕ್ಕೆ ಸತ್ಯ ಜ್ಞಾನವನ್ನು ಕಲಿತುಕೊಳ್ಳಬೇಕೆಂದರೆ? ವೇದಾಧ್ಯಾಯನ ಮಾಡಬೇಕು ಎನ್ನುತ್ತಾರೆ.

ಆಗಲೇ ಈ ವೇದ ಜ್ಞಾನವು ಪ್ರತಿ ಒಬ್ಬರಿಗೂ ಅರ್ಥವಾಗುತ್ತದೆ. ಈ ವೇದ ಜ್ಞಾನ ಕಲಿತು ಕೊಳ್ಳುವುದೆಂದರೆ ಮಾನವರ ಇನ್ನೊಂದು ಧರ್ಮ.

## 3. ಯಜ್ಞ ಅಂದರೆ ಲೋಕ ಕಲ್ಯಾಣಕರವಾದ ಕೆಲಸಗಳು :–

ಲೋಕದ ಒಳ್ಳೆಯದಕ್ಕೆ 10 ಮಂದಿ ಜೊತೆ ಮಾಡುವ ಕೆಲಸವನ್ನು ಯಜ್ಞ ಎನ್ನುತ್ತಾರೆ. ಅದರಲ್ಲಿ ಎಲ್ಲದಕ್ಕಿಂತಲೂ ದೊಡ್ಡ ಯಜ್ಞ 'ಧ್ಯಾನಯಜ್ಞ'.

ಕಾರಣ ಧ್ಯಾನವೆನ್ನುವುದು, ಮಾಡುವವರಲ್ಲಿ ಎಷ್ಟೋ ಬದಲಾವಣೆ ತೆಗೆದುಕೊಂಡು ಬರುತ್ತದೆ, ಅವರ ಮನಸ್ಸನ್ನು ಒಳ್ಳೆಯದಾಗಿ ಬದಲಾಯಿಸುತ್ತದೆ. ಆದ್ದರಿಂದ ಅವರು ಎಲ್ಲರಿಗೂ ಸೇವೆಗಳನ್ನು ಮಾಡುತ್ತಾರೆ. ಎಲ್ಲರಿಗೂ ಲಾಭವನ್ನು ತರುವಂತ ಕೆಲಸಗಳನ್ನು ಮಾಡುತ್ತಾರೆ. ಎಲ್ಲರಲ್ಲಿ ಪರಿವರ್ತನೆ ತರುತ್ತಾರೆ. ಹಾಗೆ ಅವರು ಬದಲಾಗುವುದಲ್ಲದೆ ಎಲ್ಲರಲ್ಲಿ ಬದಲಾವಣೆ ತರುವಂತಹ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಧ್ಯಾನ ಯಜ್ಞವೇ ಲೋಕದಲ್ಲಿ ನಡೆಯುವ ದೊಡ್ಡ ಯಜ್ಞ.

ನಮ್ಮವರು ಇದನ್ನೆಲ್ಲಾ ಏಕೆ ಮಾಡುತ್ತಾರೆ? ಅಂದರೆ ಲೋಕದಲ್ಲಿ ಎಲ್ಲರೂ ಈ ಜ್ಞಾನ ಕುರಿತು ತಿಳಿದುಕೊಳ್ಳಬೇಕೆಂದು ಅದಕ್ಕಾಗಿ ಅಂತಹ ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ಈ ಜ್ಞಾನಕ್ಕೆ ಸಂಬಂಧಿಸಿದ ವಿಡಿಯೋಗಳೆಲ್ಲವೂ Youtube, whatsapp, Facebook, Instagram ಗಳಲ್ಲಿ ಇಡುವುದಲ್ಲದೆ ಶಾರ್ಟ್ ವಿಡಿಯೋಗಳನ್ನು ಕೂಡಾ ಇಡುತ್ತಾರೆ. ಇದೆಲ್ಲಾ ಎಲ್ಲರು ಜ್ಞಾನಿಗಳಾಗಿ ಬದಲಾಗಬೇಕೆಂದು ಮಾಡುತ್ತಾರೆ.

ಇದನ್ನೆಲ್ಲಾ ಸ್ವಾರ್ಥವಿಲ್ಲದೆ, ನಾನು ಮಾಡುತ್ತಿದ್ದೇನೆ ಎನ್ನುವ ಅಹಂ ಇಲ್ಲದೆ, ನನಗೆ ಹೆಸರು ಬರಬೇಕು ಎನ್ನುವ ಆಸೆ ಇಲ್ಲದೆ, ಪರೋಪಕಾರ ದೃಷ್ಟಿಯಿಂದ ಮಾಡುತ್ತಾರೆ, ಹಾಗೆ ಎಲ್ಲರೂ ಒಂದು ಯಜ್ಞವಾಗಿ ಮಾಡುತ್ತಾರೆ.

ಹಾಗೆ ನೀನು ಏನನ್ನು ಪಡೆಯುತ್ತಿರುವೆಯೋ! ಅದು ನಿಸ್ವಾರ್ಥದಿಂದ ಪ್ರಪಂಚಕ್ಕೆ ಕೊಡುವುದಾದರೆ ಅದಕ್ಕಿಂತ ಮೀರಿದ ಯಜ್ಞ ಯಾವುದಿಲ್ಲ. ಹಾಗೆ ನಿಸ್ವಾರ್ಥದಿಂದ ಲೋಕ ಕಲ್ಯಾಣಕ್ಕಾಗಿ ಶ್ರಮ ಪಡುವುದೆಂದರೆ ಯಜ್ಞಗಳು ಮಾಡುವುದು ಮಾನವ ಧರ್ಮಗಳಲ್ಲಿ ಒಂದು ಧರ್ಮ.

## 4 ಆತ್ಮ ಕರ್ಮಗಳು ಅಂದರೆ ಮುಕ್ತಿ ಕರ್ಮಗಳು ಮಾಡಬೇಕು.

ಮಾನವನು ಮಾಡುವ ಕರ್ಮಗಳು 3 ವಿಧಗಳು 1. ಪಾಪ ಕರ್ಮಗಳು, 2. ಪುಣ್ಯ ಕರ್ಮಗಳು, 3. ಆತ್ಮ ಕರ್ಮಗಳು ಅಂದರೆ ಮುಕ್ತಿ ಕರ್ಮಗಳು

ಪಾಪ ಕರ್ಮಗಳು ಮಾಡಿದರೆ ದುಃಖ ಉಂಟಾಗುತ್ತದೆ, ಪುಣ್ಯ ಕರ್ಮಗಳು ಮಾಡಿದರೆ ಭೋಗಗಳು ಬರುತ್ತವೆ. ಆದರೆ ಮತ್ತೆ ಜನ್ಮ ಬರುತ್ತದೆ. ಆದರೆ ಮುಕ್ತಿ ಕರ್ಮಗಳು ಅಂದರೆ ಆತ್ಮ ಕರ್ಮಗಳು ಮಾಡಿದರೆ ಮೋಕ್ಷವೆ ಬರುತ್ತದೆ ಮತ್ತೆ ಜನ್ಮಗಳು ಬರುವುದಿಲ್ಲ.

ಆದ್ದರಿಂದ ಆತ್ಮಕ್ಕೆ ಲಾಭ ತರುವ, ಧ್ಯಾನ ಸಂಬಂಧವಾದ ಸೇವೆಗಳು, ಮುಕ್ತಿ ಕರ್ಮಗಳಾಗಿ ಭಾವಿಸಲ್ಪಡುತ್ತದೆ.

ಅಂದರೆ ಧ್ಯಾನವನ್ನು ಮಾಡುವುದು, ಧ್ಯಾನವನ್ನು ಹೇಳುವುದು, ಧ್ಯಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಏರ್ಪಾಟು ಮಾಡುವುದು, ಅವುಗಳಿಗೆ ಸಹಕರಿಸುವುದು, ಅಂತಹ ಕಾರ್ಯಕ್ರಮಗಳಿಗೆ ಧನರೂಪೇಣ, ತನವು ರೂಪೇಣ,

ಸಹಾಯ ಮಾಡುವುದು ಇಂತಹವು ಮುಕ್ತಿ ಕರ್ಮಗಳಲ್ಲಿ ಬರುತ್ತವೆ. ಆದರೆ ಕರ್ಮಗಳನ್ನು ನಿಷ್ಕಾಮವಾಗಿ ಫಲವನ್ನು ಆಶಿಸದೆ ಮಾಡಬೇಕು.

ಅದಕ್ಕೆ ಭಗವದ್ಗೀತೆಯಲ್ಲಿ ಕರ್ಮಗಳು ಮಾಡುವುದಕ್ಕೆ ನಿನಗೆ ಅಧಿಕಾರವಿದೆ, ಆದರೆ ಕರ್ಮ ಫಲವನ್ನು ಆಶಿಸುವ ಅಧಿಕಾರವಿಲ್ಲ ಎಂದು ಹೇಳಲ್ಪಟ್ಟಿದೆ.

ಆದ್ದರಿಂದ ಯಾರಾಗಲಿ ನಿಷ್ಕಾಮವಾಗಿ ಆತ್ಮ ಕರ್ಮಗಳನ್ನು ಮಾಡುತ್ತಾರೋ ಅವರು ಮುಕ್ತಿಯನ್ನು ಹೊಂದುತ್ತಾರೆ. ಆದ್ದರಿಂದ ಆತ್ಮ ಕರ್ಮಗಳು ಕೂಡಾ ಮಾನವನ ಧರ್ಮಗಳಲ್ಲಿ ಒಂದು ಧರ್ಮ ಎಂದು ತಿಳಿಯಬೇಕು.

ಆದ್ದರಿಂದ ಮಾನವನು ಆಚರಿಸಬೇಕಾದ ಧರ್ಮಗಳಲ್ಲಿ ಈ ನಾಲ್ಕು ಧರ್ಮಗಳು ಮುಖ್ಯವಾದವು ಎಂದು ತಿಳಿಯಬೇಕು. ಕಾರಣ ಈ ನಾಲ್ಕು ಧರ್ಮಗಳು ಮಾನವರಿಗೆ ಮೋಕ್ಷವನ್ನು ಅಂದರೆ ಜನ್ಮರಾಹಿತ್ಯವನ್ನು ಉಂಟು ಮಾಡುತ್ತವೆ ಆದ್ದರಿಂದ.

# ಅಜ್ಞಾನಿಗಳ ವಿಧಗಳು

ಜ್ಞಾನ ಎನ್ನುವುದು ಎಷ್ಟೋ ಮೌಲ್ಯವುಳ್ಳದ್ದು. ಜ್ಞಾನವುಳ್ಳವರನ್ನು ಈ ಪ್ರಪಂಚದಲ್ಲಿ ಬಹಳ ಶ್ರೇಷ್ಠವಾಗಿ, ಗೌರವಯುತವಾಗಿ, ದೇವರಾಗಿ ಕೂಡಾ ಭಾವಿಸುತ್ತಾರೆ.

ಆದರೆ ಅಜ್ಞಾನದಲ್ಲಿದ್ದವರಿಗೆ ಈ ಜ್ಞಾನದ ಬೆಲೆ ತಿಳಿಯದ ಕಾರಣ, ಹಣ, ಪದವಿಗಳು, ಅಧಿಕಾರಗಳೆ ದೊಡ್ಡವೆಂದು ಭಾವಿಸುತ್ತಾರೆ. ಆದರೆ ಅವೆಲ್ಲಾ ತಾತ್ಕಾಲಿಕ ಆದರೆ ಜ್ಞಾನವೆನ್ನುವುದು ಶಾಶ್ವತ. ಅಂದರೆ ಎಷ್ಟು ಜನ್ಮ ಎತ್ತಿದರೂ ಜ್ಞಾನವು ನಮ್ಮೊಡನೆ ಬರುತ್ತದೆಯಾದ್ದರಿಂದ.

ಜ್ಞಾನಿಯು ಗುರುಗಳ ಬಳಿ ವಿನಯದಿಂದ ವಿದ್ಯೆಯನ್ನು ಅಭ್ಯಸಿಸಿ ತಾನು ಯಾರು ಎಂದು ತಿಳಿದುಕೊಳ್ಳುತ್ತಾ, ಈ ಸೃಷ್ಟಿಯಲ್ಲ ಪರಮಾತ್ಮಮಯವೆ ಎಂದು ತಿಳಿದುಕೊಳ್ಳುತ್ತಾ, ಯಾವಾಗಲೂ ಆನಂದ ಸ್ಥಿತಿಯಲ್ಲಿ ಇರುತ್ತಾನೆ.

ಆದ್ದರಿಂದ ಅಜ್ಞಾನಿ ಹೇಗೆ ಇರುತ್ತಾನೆ? ಏಕೆ ಅಜ್ಞಾನದಲ್ಲಿ ಇದ್ದು ಬಿಡುತ್ತಾನೋ ತಿಳಿದುಕೊಂಡರೆ ಅದನ್ನು ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

## ಅಜ್ಞಾನಿಗಳು 3 ವಿಧ

1. ಅಜ್ಞಾನಿ
2. ಅಶ್ರದ್ಧೆಯ ಧ್ಯಾನಿ
3. ಸಂಶಯಾತ್ಮನು ಇವರೆಲ್ಲರೂ ಅಜ್ಞಾನದಲ್ಲಿ ಇರುವವರೆ.

## 1. ಅಜ್ಞಾನಿ :

ಅಜ್ಞಾನಿ ಎಂದರೆ ಯಾವ ವೇದ ಶಾಸ್ತ್ರಗಳು, ಯಾವ ಧರ್ಮ ಶಾಸ್ತ್ರಗಳು ತಿಳಿಯವು, ತಿಳಿದುಕೊಳ್ಳುವುದಿಲ್ಲ. ಅವನಿಗೆ ದೇವರು ಯಾರು?, ತಾನು ಯಾರು? ಎಂಬುವುದು ತಿಳಿಯದು. ಅವನಿಗೆ ಜೀವನ ಲಕ್ಷ್ಯವಾಗಲಿ, ಸೇರಬೇಕಾದ ಗಮ್ಯವು

ಕೂಡಾ ತಿಳಿಯದು. ಅವನು ಆಧ್ಯಾತ್ಮಿಕಯಲ್ಲಿ ಬರಲಾರ, ಜ್ಞಾನವನ್ನು ಹೊಂದಲಾರ ಸದ್ಗುರುವು ಇವರಿಗೆ ಕಾಣಿಸಿದರೂ ಗುರುತಿಸಲಾರ. ಅಜ್ಞಾನಿ ಅಂದರೆ ಅಜ್ಞಾನದಲ್ಲಿ ಇರುವವನು, ಜನನ ಮರಣ ಚಕ್ರದಲ್ಲಿ ಸಿಕ್ಕಿ ಬಿದ್ದವನು ಎಂದು ಅರ್ಥ.

## 2. ಅಶ್ರದ್ಧೆಯ ಧ್ಯಾನಿ :

ಇವನಿಗೆ ಗುರುವಿನ ಮೇಲೆ ನಂಬಿಕೆ ಇರುವುದಿಲ್ಲ. ಶಾಸ್ತ್ರಗಳನ್ನು ಓದುತ್ತಿರುತ್ತಾರೆ, ಸದ್ಗುರುವು ಹೇಳಿದ್ದನ್ನು ಆಚರಿಸಲು ಧ್ಯಾನವನ್ನು ಮಾಡಲು ಇಷ್ಟ ಪಡುವುದಿಲ್ಲ. ವಿಗ್ರಹಾರಾಧನೆ ಮಾಡುತ್ತಿರುತ್ತಾರೆ, ಜೀವ ಹಿಂಸೆಗೆ ಕಾರಣವಾದ ಮಾಂಸಾಹಾರವನ್ನು ಸೇವಿಸುತ್ತಾರೆ. ನನಗೆ ಎಲ್ಲಾ ಗೊತ್ತು ಎಂದು ಅಂದುಕೊಳ್ಳುತ್ತಾರೆ. ಇವರಿಗೆ ಸತ್ಯವು ಅರಿವಾಗುವುದಿಲ್ಲ. ಧ್ಯಾನ ಸಾಧನೆ ಮಾಡಲಾರರು.

ಉಪನಿಷತ್ತುಗಳಲ್ಲಿ ಆತ್ಮನೆ ಭಗವಂತನು, ಆತ್ಮನೇ ಶ್ರೇಷ್ಠನು ಎಂದು ಹೇಳಲ್ಪಟ್ಟರೂ ಓದದೆ, ಯಾರಾದರೂ ಹೇಳಿದರೂ ಅರ್ಥವಾಗದೆ ಅಜ್ಞಾನದಲ್ಲಿಯೆ ಇದ್ದು ಬಿಡುತ್ತಾರೆ. ಅದಕ್ಕೆ ಅಶ್ರದ್ಧೆ ಧ್ಯಾನಿಗಳು ಸಾಧನೆಯ ಮೇಲೆ ಶ್ರದ್ಧೆಯನ್ನು ತೋರಿಸುವುದಿಲ್ಲ. ಭಗವಂತನು ಎಂದರೆ ಇಷ್ಟವೆಂದು ಹೇಳುತ್ತಾರೆ. ಆದರೆ ಪೂಜೆಗಳನ್ನು ಬಿಡುವುದಿಲ್ಲ. ಇವರಿಗೆ ಸದ್ಗುರುವಿನ ಮೇಲೆ ನಂಬಿಕೆ ವಿಶ್ವಾಸ ಇರುವುದಿಲ್ಲ.

## 3. ಸಂಶಯಾತ್ಮರು :

ಇವರಿಗೆ ಶಾಸ್ತ್ರಗಳ ಬಗ್ಗೆ, ಎಲ್ಲವುಗಳ ಬಗ್ಗೆ ಅನುಮಾನವೆ, ಕೇಳುತ್ತಾರೆ, ಆದರೆ ಸಾಧಿಸುತ್ತೇವೆಯೋ? ಇಲ್ಲವೋ? ಎಂಬ ಸಂಶಯದಿಂದಲೆ ಇರುತ್ತಾರೆ.

ಇವರು ಧ್ಯಾನದಲ್ಲಿ ಬಂದರೂ ಕೂಡ ಗುರುಗಳನ್ನು ನಂಬುವುದಿಲ್ಲ. ಹೇಳಿದ್ದು ಕೇಳುವುದಿಲ್ಲ. ಪೂಜೆ ಬಿಟ್ಟರೆ ಹೇಗೆ? ಮನೆಯಲ್ಲಿ ಏನಾದರೂ ಅನಿಷ್ಟ / ಕೇಡು ನಡೆಯುತ್ತದೆ ಏನೋ ಎಂಬ ಅನುಮಾನದಿಂದ ಇರುತ್ತಾರೆ.

ಇವರಿಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ, ಪೂರ್ವ ಜನ್ಮದ ವಾಸನೆಗಳು, ಸಂಸ್ಕಾರಗಳು ಇವರನ್ನು ಬೆಳೆಯಲು ಬಿಡುವುದಿಲ್ಲ. ಇವರು ಪೂಜೆ ಮಾಡುತ್ತಾರೆ, ಧ್ಯಾನವು ಮಾಡುತ್ತಾರೆ. ಅಂದರೆ ಎರಡು ಹಡಗುಗಳ ಮೇಲೆ ಕಾಲು ಇಟ್ಟು ಪ್ರಯಾಣಿಸುತ್ತಾರೆ.

ಹಾಗೆಯೇ ಭಗವಂತನನ್ನು ಆರಾಧಿಸುವ ಸರಿಯಾದ ಮಾರ್ಗ ಧ್ಯಾನ ಮಾತ್ರವೆ ಎಂದು ಸದ್ಗುರುವು ಹೇಳಿದರೂ ಸಂಶಯಾತ್ಮರಿಗೆ ಅರ್ಥವಾಗುವುದಿಲ್ಲ. ಇವರು ಗುರುಗಳನ್ನೇ ಅನುಮಾನಪಡುತ್ತಾರೆ.

ಓದಿದರೂ, ಕೇಳಿದರೂ ಎಲ್ಲವುಗಳ ಮೇಲೆ ಸಂಶಯದಿಂದ ಇರುತ್ತಾರೆ. ಈ ಸಂಶಯಾತ್ಮನು ಕರ್ತವ್ಯವನ್ನು ಪಾಲಿಸುವುದಿಲ್ಲ.

ಪೂರ್ವದ ದಿನಗಳಲ್ಲಿ ಕಟ್ಟಿಗೆಯ ಒಲೆಯ ಮೇಲೆ ಅಡುಗೆ ಮಾಡುತ್ತಿದ್ದರು. ಈಗ ಗ್ಯಾಸ್ ಸ್ಟೌವ್ ಮೇಲೆ ಮಾಡುತ್ತಾರೆ.

ಪೂರ್ವದಲ್ಲಿ ಮೊಬೈಲ್‌ಗಳಿರಲಿಲ್ಲ. ಆದರೆ ಈಗ ಪ್ರತಿಯೊಬ್ಬರ ಬಳಿಯೂ ಮೊಬೈಲ್ ಇದೆ. ಇಷ್ಟು ಬದಲಾವಣೆಗಳನ್ನು ಅಂಗೀಕರಿಸುತ್ತಾರೆಯಾಗಲಿ, ಆಧ್ಯಾತ್ಮಿಕ ಮಾರ್ಗದಲ್ಲಿ ಬದಲಾವಣೆಗಳನ್ನು ಮಾತ್ರ ಸಂಶಯಿಸುತ್ತಾರೆ.

ಇಂತಹವರು ಆತ್ಮನ ಕುರಿತು, ಪರಮಾತ್ಮನ ಕುರಿತು ಚೆನ್ನಾಗಿ ಅಧ್ಯಯನ ಮಾಡದ ಹೊರತು ಸಂಶಯಗಳು ಹೋಗುವುದಿಲ್ಲ. ಯಾವುದು ಏನಾದರೂ ಗುರುವು ಅತ್ತಿರ ಸ್ಥಿರವಾಗಿ ಇರದಿದ್ದರೆ ಏನನ್ನು ಕಲಿಯಲಾರರು. ಈ ಅನುಮಾನ ಎನ್ನುವ ಸ್ಥಿತಿಯಿಂದ ಹೊರಗೆ ಬಿದ್ದರೇನೆ ಅಜ್ಞಾನ ತೊಲಗುತ್ತದೆ.

ಅಜ್ಞಾನಿ ತಿಳಿಯದೆ ಅಜ್ಞಾನದಲ್ಲಿ ಇರುತ್ತಾನೆ. ತಿಳಿದುಕೊಂಡರೆ ತಪ್ಪದೆ ಜ್ಞಾನಿಯಾಗಿ ಮಾರ್ಪಾಡಾಗುತ್ತಾನೆ.

ಹಾಗೆಯೇ ಅಶ್ರದ್ಧೆಯ ಧ್ಯಾನಿ ಗುರುವನ್ನು ಆಶ್ರಯಿಸಿ ಆತನ ಬಳಿ ಸಾಧನೆ ಮಾಡಿದರೆ ಜ್ಞಾನವನ್ನು ಹೊಂದುತ್ತಾನೆ. ಸಂಶಯಾತ್ಮನು ಕೂಡಾ ಗುರುವು ಹೇಳಿದ್ದನ್ನು ಆಚರಿಸಿದರೆ ಜ್ಞಾನವನ್ನು ಹೊಂದುತ್ತಾನೆ.

ಅನ್ನವು ಬೆಂದಿದೆಯೋ ಇಲ್ಲವೋ ಎಂದು ತಿಳಿಯಲು ಅನ್ನವನ್ನೆಲ್ಲಾ ನೋಡಬೇಕಾಗಿಲ್ಲ. ಒಂದು ಅಗುಳು ಹಿಡಿದರೆ ಸಾಕು ಅನ್ನದ ಸ್ಥಿತಿಯನ್ನು ತಿಳಿದುಕೊಳ್ಳಬಹುದು. ಹಾಗೆಯೇ ಭೀಮವರಂ ಆತ್ಮಜ್ಞಾನ ಶಿಬಿರದಲ್ಲಿ ಒಂದು ಸಾರಿ ಭಾಗವಹಿಸಿದರೆ ಸಾಕು ಎಂತಹವರಿಗಾದರೂ ಎಲ್ಲವೂ ಅರ್ಥವಾಗುತ್ತದೆ.

ನೋಡಿರಿ ಬಿದಿರು ಕಟ್ಟಿಗೆಯು ಉದ್ದವಿದ್ದಷ್ಟು ಬೆಲೆಯು ಹೆಚ್ಚಿರುತ್ತದೆ, ಕಬ್ಬು ದಪ್ಪವಾಗಿದ್ದಷ್ಟು ರಸವು ಹೆಚ್ಚು ಬರುತ್ತದೆ. ಆದ್ದರಿಂದ ಬೆಲೆಯು ಹೆಚ್ಚಿರುತ್ತದೆ. ಹಾಲಿಗೆ ಅದರಲ್ಲಿಂದ ಬರುವ ಬೆಣ್ಣೆಯಿಂದಾಗಿ ಬೆಲೆಯು ಹೆಚ್ಚು ಹಾಗೆಯೇ ಮನುಷ್ಯನಿಗೆ

ಅವನಿಗೆ ಇರುವ ಜ್ಞಾನದಿಂದಾಗಿ ಬೆಲೆಯು ಹೆಚ್ಚು ಸೃಷ್ಟಿಯಲ್ಲಿ ಒಂದೊಂದಕ್ಕೆ ಒಂದೊಂದರಿಂದಾಗಿ ಅದರ ಬೆಲೆಯು ಇರುತ್ತದೆ ಎಂದು ತಿಳಿಯಬೇಕು.

ಮಾನವರು ಹಣ, ಪದವಿಗಳು, ಅಂತಸ್ತುಗಳು ದೊಡ್ಡವೆಂದುಕೊಳ್ಳುತ್ತಾರೆ, ಆದರೆ ಇವೆಲ್ಲಾ ತಾತ್ಕಾಲಿಕವೆ? ತಾತ್ಕಾಲಿಕವಾದವು, ಶಾಶ್ವತವಲ್ಲದವು, ಉತ್ತಮವಾದವು ಹೇಗೆ ಆಗುತ್ತದೆ? ಶಾಶ್ವತವಾದ ಜ್ಞಾನವೇ ಶ್ರೇಷ್ಠವಾದದ್ದು, ಮೌಲ್ಯವುಳ್ಳದ್ದು ಎಂದು ತಿಳಿದುಕೊಳ್ಳಬಹುದು.

ಅದಕ್ಕಾಗಿಯೇ ಜ್ಞಾನಿಯನ್ನು ಎಲ್ಲರೂ ಗೌರವಿಸುತ್ತಾರೆ. ವಿವೇಕಾನಂದರು ರಾಮಕೃಷ್ಣ ಪರಮಹಂಸರು, ರಮಣ ಭಗವಾನರು ಇಂತಹವರಿಗೆ ಧನ ಸಂಪತ್ತುಗಳು ಏನೂ ಇಲ್ಲದಿದ್ದರೂ ಅವರನ್ನು ಶ್ರೇಷ್ಠರು ಎಂದು ಗುರುತಿಸುತ್ತಾರೆ. ಗೌರವಿಸುತ್ತಾರೆ. ಅದರ ಬೋಧನೆಗಳನ್ನು ಆಚರಿಸುತ್ತಾರೆ.

ಆದ್ದರಿಂದ ಮನುಷ್ಯನಿಗೆ ಶೋಭೆ ಕೊಡುವುದು, ಕೀರ್ತಿ, ಪ್ರತಿಷ್ಠೆಗಳನ್ನು ತರುವಂತಹುದು ಜ್ಞಾನ ಮಾತ್ರವೆ, ಜ್ಞಾನಿಗಳಿಗೆ ಪ್ರೇಮತತ್ವವಿರುತ್ತದೆ, ಪ್ರೇಮದೊಡನೆ ಇರುತ್ತಾರೆ, ಸತ್ಯದ ಮೇಲೆ ಆಸಕ್ತಿ ಇರುತ್ತದೆ, ಸತ್ಯವನ್ನೇ ಮಾತನಾಡುತ್ತಾರೆ, ಸತ್ಯದಲ್ಲಿಯೇ ಜೀವಿಸುತ್ತಾರೆ.

ಆದ ಕಾರಣ ಜ್ಞಾನದ ಶ್ರೇಷ್ಠತೆಯನ್ನು ತಿಳಿದುಕೊಳ್ಳಿ, ಅಜ್ಞಾನದಲ್ಲಿ ಇರಬೇಡಿ, ಜ್ಞಾನವಂತರು ಆಗುವುದಕ್ಕಾಗಿ ಪ್ರಯತ್ನಿಸಿರಿ, "ಅಜ್ಞಾನದಿಂದ ಹುಟ್ಟುವುದು ತಪ್ಪು ಅಲ್ಲ. ಅಜ್ಞಾನಿಯಾಗಿ ಮರಣಿಸುವುದೆ ತಪ್ಪು" ಎನ್ನುತ್ತಾರೆ ಮಹಾತ್ಮರು. ಅದಕ್ಕೆ ಅಜ್ಞಾನವನ್ನು ತೊಲಗಿಸಿಕೊಳ್ಳಿ "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನವನ್ನು ಮಾಡಿರಿ.

# "ಧ್ಯಾನ ಮಾಡುವ ವಿಧಾನ"

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು. ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ, ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.


ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**

# ಶ್ರೀ ರಾಮಧಾಮ ಧ್ಯಾನಕೇಂದ್ರ

**ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.**
**ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503**
**ವಿಜಯಲಕ್ಷ್ಮೀ ಎಸ್.ಎನ್. 80500 82689**

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 30 |
| 2. | ನವವಿಧ ಧರ್ಮಗಳು | ರೂ. 40 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 30 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 50 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 7. | ಶಿರಡಿ ಸಾಯಿ ಸಂದೇಶಗಳು | ರೂ. 50 |
| 8. | ಪ್ರಾಣ ಶಕ್ತಿ | ರೂ.100 |
| 9. | ಜೀವನದ ಸೂಕ್ಷ್ಮಗಳು | ರೂ.100 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ.300 |
| 12. | ತುಳಸಿ ದಳ (I) | ರೂ.200 |
| 13. | ತುಳಸಿ ದಳ (ii) | ರೂ.220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. 70 |
| 16. | ಧ್ಯಾನದಿಂದಲೇ ಜ್ಞಾನ | ರೂ. 70 |
| 17. | ಬ್ರಹ್ಮಜ್ಞಾನ | ರೂ. 70 |
| 18. | ಜ್ಞಾನ ಜ್ಯೋತಿ | ರೂ. 90 |
| 19. | ಗೈಡಿಂಗ್ | ರೂ.100 |
| 20. | ಸಂಕಲ್ಪವೆಂದರೇನು? | ರೂ. 50 |
| 21. | ಕರ್ಮ ಸಿದ್ಧಾಂತ | ರೂ. 70 |

| | | |
|---|---|---|
| 22. | ಜ್ಞಾನ ಕುಸುಮಗಳು | ರೂ. 90 |
| 23. | ಆಲೋಚನಾ ಶಕ್ತಿ | ರೂ. 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 26. | ಭಕ್ತಿ ಮುಕ್ತಿ | ರೂ. 30 |
| 27. | ಧ್ಯಾನ ತರಂಗ | ರೂ. 40 |
| 28. | ಜ್ಞಾನ ಯುಗ | ರೂ. 60 |
| 29. | ಸೇತು ವಿಜ್ಞಾನ | ರೂ. 40 |
| 30. | ಮರಣಿಸುವೆ ಮುಂಚೆಯೇ ಮರಣಿಸಬೇಕು | ರೂ.130 |
| 31. | ಅತೀಂದ್ರಿಯ ಶಕ್ತಿಗಳು | ರೂ. 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. 40 |
| 33. | ಆಲೋಚಿಸಿ | ರೂ. 70 |
| 34. | ನಿರ್ವಾಣ ಮಾರ್ಗ | ರೂ. 60 |
| 35. | ಸತ್ಯ | ರೂ. 40 |
| 36. | ಆರ್ಥಿಕ ಪರಿಸ್ಥಿತಿ | ರೂ. 40 |
| 37. | ಚಕ್ರಗಳು | ರೂ. 30 |
| 38. | ಭೂತದಯೆ ಮತ್ತು ದೈವತ್ವ | ರೂ. 80 |
| 39 | ಮೌನ ಧ್ಯಾನ | ರೂ. 40 |
| 40. | ಗುರವನ್ನು ಗುರುತಿಸುವುದೇ ಹೇಗೆ? | ರೂ. 30 |
| 41 | ತ್ರಿವಿಧಗಳು | ರೂ. 70 |
| 42 | ಮರಣದ ನಂತರ ನಮ್ಮ ಜೊತೆ ಬರುವುದು | ರೂ. 60 |
| 43 | ಧ್ಯಾನವೆಂದರೆ? | ರೂ. 60 |
| 44 | ಮೆಹರ್‌ಬಾಬಾ ಸಂದೇಶ | ರೂ. 80 |
| 45 | ಉಪಾಮಾನ ಧ್ಯಾನ ಸಂದೇಶ | ರೂ. 80 |
| 46 | ದತ್ತಾತ್ರೇಯ ಮುನಿಯವರ 24 ಗುರುಗಳು | ರೂ. 80 |
| 47 | ಜ್ಞಾನಮಾಲ | ರೂ. 70 |
| 48 | ಭಗವಂತನ ಕುರಿತು ತಿಳಿದು ಕೊಳ್ಳಿ ! | ರೂ. 90 |



ದತ್ತಾತ್ರೇಯರು ಪ್ರಕೃತಿಯಿಂದ 24 ಮಂದಿ ಗುರುಗಳನ್ನು ಆಯ್ದುಕೊಂಡರು. ಅವರು ಆ ಗುರುಗಳಿಂದ ಕಲಿತುಕೊಂಡು ಬಂದು ಜ್ಞಾನ ಭಂಡಾರವಾಗಿ ನಿಂತರು. ಯದು ಮಹಾರಾಜು ಅವರನ್ನು ನೋಡಿ, ಸ್ವಾಮಿ ನೀವು ಎಷ್ಟೋ ಆನಂದ ಸ್ವರೂಪವಾಗಿ ಕಾಣಿಸುತ್ತಿದ್ದೀರಿ, ಒಂದು ಜ್ಞಾನ ಭಂಡಾರವಾಗಿ ಕಾಣಿಸುತ್ತಿದ್ದೀರಿ, ಎಷ್ಟು ಆನಂದವನ್ನು, ಜ್ಞಾನವನ್ನು ನೀವು ಹೇಗೆ ಪಡೆದಿರಿ? ನಿಮಗೆ ಸಂಸಾರವಾಗಲಿ ಹೆಂಡತಿ ಮಕ್ಕಳಾಗಲಿ ಯಾರು ಇರುವಂತೆ ಕಾಣಿಸುತ್ತಿಲ್ಲ ಆದರೂ ಕೂಡಾ ಇಷ್ಟು ಆನಂದ ಸ್ವರೂಪವಾಗಿ ಹೇಗೆ ಕಾಣಿಸುತ್ತೀದ್ದಿರಿ? ಎಂದು ದತ್ತಾತ್ರೇಯರನ್ನು ಕೇಳಿದರು.

ಆಗ ದತ್ತಾತ್ರೇಯರು ನಾನು ದೊಡ್ಡವರಿಂದ, ಯೋಗಿಗಳಿಂದಲೇ ಅಲ್ಲ, ಪ್ರಕೃತಿ ಯಲ್ಲಿರುವ ಎಷ್ಟೋ ವಿಷಯಗಳಿಂದ ಕೂಡ ಕಲಿತುಕೊಂಡಿದ್ದೇನೆ ಎಂದರು.

ಆದ್ದರಿಂದ ದತ್ತಾತ್ರೇಯರಂತೆ ತಯಾರಾಗಬೇಕೆಂದರೆ ಪ್ರಕೃತಿಯಲ್ಲಿರುವ ಎಷ್ಟನ್ನೋ ಗುರುಗಳಾಗಿ ಆಯ್ದುಕೊಂಡು ಅವುಗಳಿಂದ ಎಷ್ಟೋ ಜ್ಞಾನವನ್ನು ಕಲಿತುಕೊಳ್ಳಬೇಕು.

**ತಟವರ್ತಿ ರಾಜ್ಯಲಕ್ಷ್ಮಿ**

**ರೂ 70/-**


**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀರಾಮಧಾಮ ಧ್ಯಾನಕೇಂದ್ರ,

ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066

ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503

ವಿಜಯಲಕ್ಷ್ಮಿ ಎಸ್.ಎನ್. + 91 80500 82689